ಸಂಪುಟ: 14 Volume | ಸಂಚಿಕೆ: 08 Issue | ಪುಟಗಳು 08 Pages | ಗುರುವಾರ 09 ಏಪ್ರಿಲ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

**ಬೆಳಗು**

ನಾವು ಬಿಡುಗಡೆ, ಸ್ವಾತಂತ್ರ್ಯ ಪಡೆಯಬೇಕಾದದ್ದು ಅಜ್ಞಾನದಿಂದ, ಅಧರ್ಮದಿಂದ.

–ಬಿ.ಎಂ.ಶ್ರೀ.

ಪೀಠಾಧಿಪತಿಯವರಿಂದ ರೆಡ್ಡಿ ದರ್ಶನ 6

ತೆರಿಗೆ ಸಂಗ್ರಹಣೆಯಲ್ಲಿ ಶೇ.100 ರಷ್ಟು ಸಾಧನೆ 7

ಸರ್ಕಾರಿ ಶಾಲಾ ಮಕ್ಕಳ ಶಿಕ್ಷಣಕ್ಕೆ ಕೊಕ್ಕೆ 8




ಬೆಂಗಳೂರು: ಬಸವನನಾಡು, ಸೂಫಿಸಂತರ ನೆಲೆಬೀಡು ಬೀದರನಲ್ಲಿ ಇದೇ 11 ಮತ್ತು 12 ರಂದು ಕೆಯುಡಬ್ಲ್ಯೂಜೆ ಆಯೋಜಿಸಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಉದ್ಘಾಟನೆಗೆ ಸಿಎಂ ಸಿದ್ದರಾಮಯ್ಯ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಬಿ ಖಂಡ್ರೆ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ ) ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಸಿಎಂ ನಿವಾಸದಲ್ಲಿ ಭೇಟಿ ಮಾಡಿ ಆಹ್ವಾನ ನೀಡಿದರು.

## ನಾಲಿಗೆ ಹದ್ದು ಬಸ್ತಿನಲ್ಲಿರಲಿ: ಛಲವಾದಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ನಾಲಿಗೆಯನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬೇಕು. ಅರಳು–ಮರಳು ರೀತಿ ಮಾತನಾಡಬಾರದು. ಇವರ ಮಾನಸಿಕ ಆರೋಗ್ಯ ಸರಿ ಇಲ್ಲ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ ಮತ್ತು ಆರೆಸ್‌ಎಸ್ ವಿರುದ್ಧ ಪ್ರಚೋದನಾಕಾರಿ ಹೇಳಿಕೆ ನೀಡಿರುವುದು ಖಂಡನೀಯ. ದೇಶದಾದ್ಯಂತ ಜನರು ಇವರ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ. ಕೊಲ್ಲಲು ಪ್ರಚೋದನೆ ನೀಡುವುದು ಸರಿ ಅಲ್ಲ ಎಂ ದಿದ್ದಾರೆ.



ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧ ತಡೆ ಮಸೂದೆಗೆ ಅಂಗೀಕಾರ ದೊರೆತಿದೆ. ಆ ಮಸೂದೆ ಅನ್ವಯ ಖರ್ಗೆ ಅವರ ರೀತಿ ಪ್ರಚೋದನಾಕಾರಿಯಾಗಿ ಮಾತನಾಡಿದರೆ ಪ್ರಕರಣ ದಾಖಲು ಮಾಡಬಹುದು. ಆದ್ದರಿಂದ ಬಿಜೆಪಿ ದೂರು ನೀಡಿದೆ. ಖರ್ಗೆ ಅವರ ಹೇಳಿಕೆ ಖಂಡಿಸಿ ಬಿಜೆಪಿಯ ಕಾರ್ಯಕರ್ತರು ಸಿಡಿದೆದ್ದು ಎಲ್ಲಾ ಕಡೆ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

## ಆರೆಸ್ಸೆಸ್ ವಿಷ ಸರ್ಪ: ಖರ್ಗೆ ಕೋಪ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಆರ್‌ಎಸ್ ಎಸ್ ವಿಷಸರ್ಪ ಎಂದಿದ್ದ ಖರ್ಗೆ ಗುಜರಾತಿಗಳು ಅನಕ್ಷರಸ್ಥರು ಎಂದು ವಿವಾದ ಸೃಷ್ಟಿಗೆ ಕಾರಣವಾಗಿದ್ದಾರೆ. ತಮ್ಮ ಈ ಹೇಳಿಕೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ಈ ಕುರಿತಾಗಿ ಅವರು ಟ್ವೀಟ್ ಮಾಡಿ, ತಮ್ಮ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಸ್ಪಷ್ಟನೆಯನ್ನು ನೀಡಿದ್ದಾರೆ.

ಕೇರಳದ ಚುನಾವಣಾ ಪ್ರಚಾರದಲ್ಲಿ ಮಾತನಾಡಿ, ಗುಜರಾತಿಗಳು ಅನಕ್ಷರಸ್ತರು. ನರೇಂದ್ರ ಮೋದಿ ಅವರು ಅಲ್ಲಿನ ಜನರನ್ನು ಸುಲಭವಾಗಿ ದಾರಿ ತಪ್ಪಿಸಬಹುದು. ಆದರೆ ಕೇರಳದ ಜನರನ್ನು ದಾರಿ ತಪ್ಪಿಸಲು ಸಾಧ್ಯವಿಲ್ಲ ಎಂದಿದ್ದರು.



ಇದೇ ಸಂದರ್ಭದಲ್ಲಿ ಆರ್ ಎಸ್ ಎಸ್ ವಿಷಸರ್ಪ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರು. ಇದು ಕೂಡಾ ತೀವ್ರ ವಿರೋಧಕ್ಕೆ ಕಾರಣವಾಗಿತ್ತು. ಈ ಬಗ್ಗೆ ಬಿಜೆಪಿ ನಾಯಕರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಹೇಳಿಕೆಯನ್ನು ಸಚಿವ ಪ್ರಿಯಾಂಕ್ ಖರ್ಗೆ ಸಮರ್ಥಿಸಿಕೊಂಡಿದ್ದಾರೆ.

### ಡಿಕ್ಕಿ: ತಂದೆ ಮಗಳು ಸಾವು

**ಕಲಬುರಗಿ:** ಬೈಕ್‌ಗೆ ಲಾರಿ ಡಿಕ್ಕಿ ಹೊಡೆದು ತಂದೆ, ಮಗಳು ಮೃತಪಟ್ಟಿದ್ದಾರೆ. ತಾಯಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಈ ಘಟನೆ ಸೈಯದ್ ಚಿಂಚೋಳಿ ಕ್ರಾಸ್ ಬಳಿ ನಡೆದಿದೆ. ರಾಜಕುಮಾರ (45), ಇವರ ಮಗಳು ಸುಮಾ (15) ಮೃತರು. ರಾಜಕುಮಾರ ಅವರು ಪತ್ನಿ ನಿರ್ಮಲಾ, ಮಗಳು ಸುಮಾ ಜೊತೆಗೆ ಬೈಕ್ ಮೇಲೆ ಕಲಬುರಗಿಯ ಶಿವಲಿಂಗೇಶ್ವರ ಕಾಲೊನಿಯಿಂದ ಬಿಲಗುಂದಿ ಗ್ರಾಮಕ್ಕೆ ಹೋಗುತ್ತಿದ್ದಾಗ ಸೈಯದ್ ಚಿಂಚೋಳಿ ಕ್ರಾಸ್ ಹತ್ತಿರ ಲಾರಿ ಡಿಕ್ಕಿ ಹೊಡೆದಿದೆ ಎಂದು ತಿಳಿದುಬಂದಿದೆ. ಸಂಚಾರಿ–2 ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಕುಮಾರಿ ಸಮೃದ್ಧಿಗೆ ಸಚಿವ ಶ್ಲಾಘನೆ

**ಕಲಬುರಗಿ:** ಹೆಣ್ಣು ಮಕ್ಕಳ ಭವಿಷ್ಯಕ್ಕೆ ನೇರವಾಗಲು ಕುಮಾರಿ ಸಮೃದ್ಧಿ ಹೆಸರಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹೂಲಿ ಗ್ರಾ.ಪಂ. ಇತರ ಆಡಳಿತಗಳಿಗೆ ಮಾದರಿಯಾದ ವಿಶೇಷ ಕಾರ್ಯಕ್ರಮ ರೂಪಿಸಿರುವ ಕ್ರಮವನ್ನು ಸಚಿವ ಪ್ರಿಯಾಂಕ್ ಖರ್ಗೆ ಶ್ಲಾಘಿಸಿದ್ದಾರೆ.



ಹೂಲಿ ಗ್ರಾಮದಲ್ಲಿ ಜನಿಸುವ ಪ್ರತಿ ಹೆಣ್ಣು ಮಕ್ಕಳ ಹೆಸರಲ್ಲಿ ಪಂಚಾಯತಿ ಕಡೆಯಿಂದ 5,500 ರೂ. ಠೇವಣಿ ಇರಿಸು ವಿನೂತನ ಕಾರ್ಯಕ್ರಮವಾಗಿದೆ ಎಂದಿದ್ದಾರೆ.

### ಕೇಂದ್ರೀಯ ವಿವಿಯಲ್ಲಿ ಉತ್ಕಲಾ ದಿವಸ್

**ಕಲಬುರಗಿ:** ಕರ್ನಾಟಕದ ಕೇಂದ್ರೀಯ ವಿವಿಯಲ್ಲಿ ಒಡಿಯಾ ಪರಿವಾರವು ಉತ್ಕಲಾ ದಿವಸ್ 2026 ಅನ್ನು ಬಹಳ ಉತ್ಸಾಹದಿಂದ ಆಚರಿಸಲಾಯಿತು. ಕೇಂದ್ರ ಮತ್ತು ರಾಜ್ಯ ಸಚಿವರು, ವಿಜ್ಞಾನಿಗಳು, ನಟರು, ನಿರ್ದೇಶಕರು ಸೇರಿದಂತೆ ಒಡಿಶಾದ ಗಣ್ಯ ವ್ಯಕ್ತಿಗಳಿಂದ ಹೃತ್ಪೂರ್ವಕ ಅಭಿನಂದನಾ ಸಂದೇಶಗಳು ಬಂದಿದ್ದವು. ಇದು ಅದರ ವ್ಯಾಪಕ ಮನ್ನಣೆ ಮತ್ತು ಮಹತ್ವವನ್ನು ಪ್ರತಿಬಿಂಬಿಸುತ್ತದೆ. ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಮತ್ತು ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ್ ಉಪಸ್ಥಿತರಿದ್ದರು.

# ಅಬ್ಬರಿಸೋ ಮಿಸೈಲ್‌ಗೆ ಬ್ರೇಕ್

## ಎರಡು ವಾರಗಳ ಕದನವಿರಾಮ ಘೋಷಿಸಿರುವ ಅಮೆರಿಕಾ ಹಾಗೂ ಇರಾನ್ | ಷೇರು ಮಾರುಕಟ್ಟೆ ಚೇತರಿಕೆ

• ಮಲ್ಲಮ್ಮ ನುಡಿ ವಾರ್ತೆ ಹೊಸದಿಲ್ಲಿ

ಪ್ರಾದೇಶಿಕ ಯುದ್ಧಕ್ಕೆ 2ವಾರಗಳ ಕದನವಿರಾಮ ಘೋಷಿಸಿರುವ ಅಮೆರಿಕಾ ಹಾಗೂ ಇರಾನ್ ನಡೆ ಎಲ್ಲೆಡೆ ಹರ್ಷತಂದಿದೆ. ಯುದ್ಧದಲ್ಲಿ ಬೊಬ್ಬಿರಿದ ಮಿಸೈಲ್‌ಗಳಿಗೆ ಕೊನೆಗೂ ಬ್ರೇಕ್ ಬಿದ್ದಿದೆ. ಈ ಕದನವಿರಾಮ ಹೊರ್ಮುಜ್ ಜಲಸಂಧಿಯ ಮೂಲಕ ಜಾಗತಿಕ ವಾಣಿಜ್ಯ ಹರಿವನ್ನು ಪುನಃಸ್ಥಾಪಿಸುವ ನಿರೀಕ್ಷೆ ಇದೆ ಎಂದು ಭಾರತ ತಿಳಿಸಿದೆ.

**ಕದನ ವಿರಾಮ ಸ್ವಾಗತ:** ಕದನ ವಿರಾಮದ ಬೆನ್ನಲ್ಲೇ, ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಸಚಿವಾಲಯದಿಂದ ಬಿಡುಗಡೆಯಾದ ಹೇಳಿಕೆಯನ್ನು ತಮ್ಮ ಅಧಿಕೃತ ಎಕ್ಸ್ ಖಾತೆಯ ಮೂಲಕ ಹಂಚಿಕೊಂಡಿದ್ದಾರೆ. ಇದರಲ್ಲಿ, ಭಾರತ ಕದನ ವಿರಾಮವನ್ನು ಸ್ವಾಗತಿಸುತ್ತದೆ ಎಂದಿದ್ದಾರೆ.

**ಯುದ್ಧದ ಅಂತ್ಯವಲ್ಲ..?:** ಇರಾನ್‌ನ ಸರ್ವೋಚ್ಚ ರಾಷ್ಟ್ರೀಯ ಭದ್ರತಾ ಮಂಡಳಿ ಪ್ರಕಾರ, ಇದು ಯುದ್ಧದ ಅಂತ್ಯವನ್ನು ಸೂಚಿಸುವುದಿಲ್ಲ ಎಂದು ಒತ್ತಿಹೇಳಲಾಗಿದೆ. ನಮ್ಮ ಕೈಗಳು ಪ್ರಚೋದನೆಯ ಮೇಲೆ ಇರುತ್ತವೆ ಹಾಗೂ ಶತ್ರುಗಳಿಂದ ಸಣ್ಣದೊಂದು ತಪ್ಪು ಸಂಭವಿಸಿದರೂ, ಅದನ್ನು ಪೂರ್ಣ ಬಲದಿಂದ ಎದುರಿಸಲಾಗುತ್ತದೆ ಎಂದು ಎಚ್ಚರಿಸಿದೆ.



### ಇರಾನ್‌ನ 10 ಅಂಶಗಳ ಪ್ರಸ್ತಾವನೆಯಲ್ಲಿ ಏನಿದೆ..?

- ಇರಾಕ್, ಲೆಬನಾನ್, ಯೆಮೆನ್ ಮೇಲಿನ ಯುದ್ಧ ಸಂಪೂರ್ಣ ಸ್ಥಗಿತಗೊಳಿಸುವುದು
- ಯಾವುದೇ ಸಮಯ ಮಿತಿಯಿಲ್ಲದೆ ಇರಾನ್ ಮೇಲಿನ ಯುದ್ಧದ ಶಾಶ್ವತ ನಿಲುಗಡೆ
- ಹಾರ್ಮುಜ್ ಜಲಸಂಧಿ ಪುನಃ ತೆರೆಯಲಾಗುತ್ತಿದ್ದು ಇರಾನ್‌ಗೆ ನಿಯಂತ್ರಣದ ಅಧಿಕಾರ
- ಪ್ರಸ್ತಾವನೆಯಂತೆ ಇರಾನ್ ಪ್ರಾಬಲ್ಯ ಖಾತರಿಗೆ ಸುರಕ್ಷಿತ ಸಾರಿಗೆ ಶಿಷ್ಟಾಚಾರಕ್ಕೆ ಅಸ್ತು
- ಇರಾನ್‌ಗೆ ಯುದ್ಧದಿಂದಾದ ನಷ್ಟದ ಪುನರ್ನಿರ್ಮಾಣಕ್ಕೆ ಸಂಪೂರ್ಣ ಪರಿಹಾರ ಬೇಕು
- ದೇಶದ ಮೇಲಿನ ಎಲ್ಲಾ ಪ್ರಾಥಮಿಕ, ಸೆಕೆಂಡರಿ ನಿರ್ಬಂಧಗಳನ್ನು ತೆರವುಗೊಳಿಸಬೇಕು
- ವಿದೇಶದಲ್ಲಿ ಎಲ್ಲಾ ನಿರ್ಬಂಧಿತ ಸ್ವತ್ತು ಮತ್ತು ಆಸ್ತಿಗಳನ್ನು ಬಿಡುಗಡೆ ಮಾಡಬೇಕು
- ಪ್ರಾದೇಶಿಕವಾಗಿರುವ ಎಲ್ಲಾ ನೆಲೆ, ಯುಎಸ್ ಯುದ್ಧ ಪಡೆ ಹಿಂತೆಗೆದುಕೊಳ್ಳುವುದು
- ಯಾವುದೇ ಪರಮಾಣು ಶಸ್ತ್ರಾಸ್ತ್ರ ಹೊಂದಲು ಇರಾನ್ ಸಂಪೂರ್ಣವಾಗಿ ಬದ್ಧವಾಗಿದೆ.
- ಭದ್ರತಾ ಮಂಡಳಿಯ ನಿರ್ಣಯದಲ್ಲಿ ಈ ಎಲ್ಲಾ ವಿಷಯಗಳ ಅನುಮೋದನೆ

### ಜನಸಮಾನ್ಯರಿಗೆ ಅಪಾರ ನೋವು

ಹೊರ್ಮುಜ್ ಜಲಸಂಧಿಯಲ್ಲಿ ಸುರಕ್ಷತೆಗೆ ಒತ್ತು ನೀಡಬೇಕೆಂದು ಭಾರತ ಹೇಳಿದೆ. ಸಂಘರ್ಷವು ಈಗಾಗಲೇ ಜನಸಮಾನ್ಯರಿಗೆ ಅಪಾರ ನೋವನ್ನುಂಟುಮಾಡಿದೆ. ಜಾಗತಿಕ ಇಂಧನ ಪೂರೈಕೆ, ವ್ಯಾಪಾರ ಜಾಲಗಳನ್ನು ಅಡ್ಡಿಪಡಿಸುವ ಮೂಲಕ ಬಿಕ್ಕಟ್ಟನ್ನು ಸೃಷ್ಟಿಸಿದೆ. ಕದನ ವಿರಾಮ ಒಪ್ಪಂದವು ಹೊರ್ಮುಜ್ ಜಲಸಂಧಿಯ ಮೂಲಕ ಸಂಚಾರ ಸ್ವಾತಂತ್ರ್ಯ, ಜಾಗತಿಕ ವಾಣಿಜ್ಯ ಹರಿವು ಮೇಲುಗೈ ಸಾಧಿಸಲಿ ಎಂದು ಆಶಿಸಿದೆ.

### ಇರಾನ್ ಬಿಟ್ಟು ಇಲ್ಲಿಗೆ ಬನ್ನಿ

ಈ ಕುರಿತು ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ತನ್ನ ಅಧಿಕೃತ ಎಕ್ಸ್ ಖಾತೆಯ ಮೂಲಕ ಸಲಹೆ ನೀಡಿದೆ. ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಇರಾನ್ ನಲ್ಲಿರುವ ಭಾರತೀಯ ಪ್ರಜೆಗಳು ರಾಯಭಾರ ಕಚೇರಿಯೊಂದಿಗೆ ಸಮನ್ವಯ ಸಾಧಿಸಿ. ಕಚೇರಿ ಸೂಚಿಸಿದ ಮಾರ್ಗಗಳನ್ನು ಬಳಸಿಕೊಂಡು ಇರಾನ್ನಿಂದ ಬೇಗನೆ ತೊರೆಯಲು ಬಲವಾಗಿ ಸಲಹೆ ನೀಡಲಾಗುತ್ತಿದೆ ಎಂದು ತಿಳಿಸಿದೆ.

### ಒಪ್ಪಂದಕ್ಕೆ ಪ್ರಮುಖ ಕಾರಣ..?

2 ವಾರಗಳ ಕದನ ವಿರಾಮ ಒಪ್ಪಂದ ಜಾರಿ ಆಗಿದೆ. ಇರಾನ್ ತನ್ನ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ಜಗತ್ತಿಗೆ ತೆರೆಯಲೂ ಒಪ್ಪಿದೆ. ಇದೆಲ್ಲಾ ಪಾಕಿಸ್ತಾನದ ಮಧ್ಯಸ್ಥಿಕೆಯಿಂದ ಸಾಧ್ಯವಾಗಿದೆ ಎಂದು ಅಮೆರಿಕ, ಇರಾನ್ ಹೇಳಿಕೆ ನೀಡಿವೆ. ಬದಲಾದ ಸನ್ನಿವೇಶದಲ್ಲಿ ಸಂಘರ್ಷದಲ್ಲಿ ನಿರತ ರಾಷ್ಟ್ರಗಳು, ಮಾತುಕತೆಗಾಗಿ ಪಾಕಿಸ್ತಾನದ ಪಾತ್ರವನ್ನು ಒಪ್ಪಿಕೊಂಡಿವೆ.

## 15 ಟನ್ ಭತ್ತ ಚೀಲಗಳ ಟ್ರ್ಯಾಕ್ಟರ್ ಪಲ್ಟಿ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಕಾರಟಗಿ ರೈಸ್ ಮಿಲ್ಲೊಂದಕ್ಕೆ ಮಣ್ಣೂರು ಸೂಗುರಿನಿಂದ ಸಾಗಿಸುತ್ತಿರುವ 15 ಟನ್ ಭತ್ತದ ಮೂಟೆ ಹೊತ್ತ ಟ್ರ್ಯಾಕ್ಟರ್ ರಾಯಚೂರ್ ರಸ್ತೆಯಲ್ಲಿ ಪಲಿಯಾಗಿದೆ. ರಾಯಚೂರು ಮುಖ್ಯ ರಸ್ತೆ ಶ್ರೀರಾಮ್ ನಗರ ಮಾರ್ಗವಾಗಿ ಕಾರಟಗಿ ರೈಸ್ ಮಿಲ್ಲೊಂದಕ್ಕೆ ತಲುಪಿಸೋಬೇಕಾದ ಭತ್ತದ ಮೂಟೆಗಳು ಹೊತ್ತ ಟ್ರ್ಯಾಕ್ಟರ್ ಚಲಿಸುತ್ತಿರುವಾಗ ಟ್ರ್ಯಾಕ್ಟರ್ ಟ್ರ್ಯಾಲಿಯ ಆಯ ತಪ್ಪಿದ್ದರಿಂದ ಈ ಘಟನೆ ಸಂಭವಿಸಿದೆ. ಚಾಲಕನಿಗೆ ಸಮತೋಲನದ ನಿಯಂತ್ರಣ ತಪ್ಪಿ ರಸ್ತೆಯ ಮಧ್ಯಭಾಗದಲ್ಲಿ ಬತ್ತದ ಚೀಲಗಳು ಬಿದ್ದು ಹರಡಿವೆ. ಅದೃಷ್ಟವಶಾತ್ ರಸ್ತೆಯ ಮೇಲೆ ಯಾವುದೇ ವಾಹನಗಳ ಸಂಚಾರ ಬಾರದೆ ಇರುವುದರಿಂದ ಬೃಹತ್ ಪ್ರಮಾಣದ ಅನಾಹುತಕ್ಕೀಡಾಗುವ ಕ್ಷಣ ತಪ್ಪಿದೆ. ಹೆಚ್ಚಿನ ಸಮಯ ಕಳೆದರೂ ಮರಳಿ ಹತ್ತಿರ ಇರುವ ಟೋಲ್ ಕೇಂದ್ರದ ಸಿಬ್ಬಂದಿ ಹಾಗೂ ವೈದ್ಯಕೀಯ ನೆರವು ನೀಡುವ ವಾಹನ ಬಾರದೆ ಇರುವುದು ಆಸಕ್ತಿ ತೋರದ ಸಂದರ್ಭ ಕಂಡು ಬಂದಿತ್ತು.



## ಬೀಡಿ, ಸಿಗರೇಟ್‌ಗಾಗಿ ಜೈಲಲ್ಲೇ ಡಿಶುಂ..!

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬೀಡಿ, ಸಿಗರೇಟ್ ವಿಚಾರಕ್ಕೆ ಕೈದಿಗಳು ಜೈಲು ಸಿಬ್ಬಂದಿ ಮೇಲೆ ಹಲ್ಲೆ ನಡೆಸಿರುವ ಘಟನೆ ಬಳ್ಳಾರಿಯ ಸೆಂಟ್ರಲ್ ಜೈಲಿನಲ್ಲಿ ನಡೆದಿದೆ. ಕಾರಾಗೃಹಗಳಲ್ಲಿ ಮನಃಪರಿವರ್ತನೆ ಬದಲಿಗೆ ಕೈದಿಗಳು ಐಷಾರಾಮಿ ಜೀವನ ನಡೆಸುತ್ತಾ, ಸಿಬ್ಬಂದಿಗೆ ಬೆದರಿಕೆ ಹಾಕುತ್ತಿದ್ದಾರೆ. ಇದು ಜೈಲು ಆಡಳಿತದ ವೈಫಲ್ಯ, ಬಂದಿಖಾನೆಗಳ ಮೂಲ ಉದ್ದೇಶದ ಬಗ್ಗೆಯೇ ಹಲವು ಪ್ರಶ್ನೆಗಳು ಹುಟ್ಟಲು ಕಾರಣವಾಗಿದೆ. ಇರೋದು ಕಾರಗೃಹದಲ್ಲಿ ಅನ್ನೋದು ಒಂದನ್ನು ಹೊರತು ಪಡಿಸಿದರೆ ದುಡ್ಡು ಕೊಟ್ಟರೆ ಏನು ಬೇಕಾದರೂ ಇಲ್ಲಿ ಸಿಗುತ್ತೆ ಎಂಬ ಸ್ಥಿತಿ ಇದೆ. ರಾಜಾತಿಥ್ಯ ಪ್ರಕರಣಗಳ ಬಗ್ಗೆ ಸಾಲು ಸಾಲು ವರದಿಯಾಗುತ್ತಿದ್ದರೂ, ಕೈದಿಗಳ ಪುಂಡಾಟಕ್ಕೆ ಮಾತ್ರ ಇನ್ನೂ ಬ್ರೇಕ್ ಬಿದ್ದಿಲ್ಲ ಎಂಬ ದೂರು ವ್ಯಾಪಕವಾಗಿದೆ. ಇನ್ನು ಸೆಂಟ್ರಲ್ ಜೈಲಿನಲ್ಲಿ ಬೀಡಿ, ಸಿಗರೇಟ್ ನೀಡದಿರುವ ವಿಚಾರಕ್ಕೆ ಸಿಬ್ಬಂದಿ ಮೇಲೆಯೇ ಕೈದಿಗಳು ಹಲ್ಲೆ ನಡೆಸಿದ್ದು ಜೈಲರ್ ಜೊತೆ ಮಾತಿನಚಕಮಕಿ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಜಾನುವಾರುಗೆ ಕಾಲು ಬಾಯಿ ಜ್ವರ ಲಸಿಕೆ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಕೇಂದ್ರಪುರಸ್ಕೃತ ಯೋಜನೆಯಡಿ ಜಾನುವಾರುಗಳಿಗೆ 9ನೇ ಸುತ್ತಿನ ಕಾಲು ಮತ್ತು ಬಾಯಿ ಜ್ವರ ಸಾಮೂಹಿಕ ಲಸಿಕಾ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ಏ.23 ರಿಂದ ಮೇ22 ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಮತ್ತು ಕಾಲು ಬಾಯಿ ಜ್ವರ ಲಸಿಕಾ ಕಾರ್ಯಕ್ರಮದ ಜಿಲ್ಲಾ ನಿರ್ವಹಣಾ ಸಮಿತಿಯ ಅಧ್ಯಕ್ಷೆ ಶಿಲ್ಪಾ ಶರ್ಮಾ ತಿಳಿಸಿದ್ದಾರೆ.

ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣಾ ಕಾರ್ಯಕ್ರಮದ 9ನೇ ಸುತ್ತಿನ ಲಸಿಕಾ ಕಾರ್ಯಕ್ರಮದ ಕುರಿತು ಕರೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ್ದಾರೆ. ಉಪ ನಿರ್ದೇಶಕರು, ಪಶು ಪಾಲನಾ ಮತ್ತು ಪಶುವೈದ್ಯಸೇವಾ ಇಲಾಖೆ ಬೀದರನ ಡಾ. ನರಸಪ್ಪ ಎ.ಡಿ, ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿಯ ಸರ್ವಸದಸ್ಯರು ಹಾಗೂ ತಾಲ್ಲೂಕಿನ ಎಲ್ಲಾ ಮುಖ್ಯಪಶುವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

### ಕಾರ್ಯಕ್ರಮ ಯಶಸ್ವಿಗೊಳಿಸುವುದು ಅಗತ್ಯ

ಜಾನುವಾರು ಮಾಲೀಕರು ತಪ್ಪದೇ ತಮ್ಮ ದನ, ಎಮ್ಮೆಗಳ ಜಾನುವಾರುಗಳಿಗೆ ಕಾಲು ಬಾಯಿ ಜ್ವರ ಲಸಿಕೆ ಹಾಕಿಸಿಕೊಂಡು ಈ ಕಾರ್ಯಕ್ರವನ್ನು ಸಂಪೂರ್ಣ ಯಶಸ್ವಿಗೊಳಿಸಬೇಕು. ಈ ಅವಧಿಯಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಇಲಾಖೆಯ ಪಶುವೈದ್ಯರು ಹಾಗೂ ಸಿಬ್ಬಂದಿಗಳು ರೈತರ ಮನೆ ಬಾಗಿಲಿಗೆ ತೆರಳಿ ಜಾನುವಾರುಗಳಿಗೆ ಲಸಿಕೆ ಹಾಕಲಿದ್ದಾರೆಂದು ಮಾಹಿತಿ ನೀಡಿದ್ದಾರೆ.

## ಅಕ್ರಮ ಮರಳು ದಂಧೆಗೆ ಕುಮ್ಮಕ್ಕು..?


• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ತಾಲೂಕಿನ ಗೋಮರ್ಸಿ ಗ್ರಾಮದ ಹೊರವಲಯದ ಸಸಳ್ಳಿ(ಡಿ) ಸ್ಟಾಕ್ ಯಾರ್ಡ್‌ನಲ್ಲಿ ರಾಜಧನ ಪಾವತಿಸದ ಟಿಪ್ಪರ್‌ಗಳಿಗೆ ಮರಳು ನೀಡುತ್ತಿದ್ದು, ಅಕ್ರಮ ಮರಳು ಸಾಗಣೆದಾರರಿಗೆ ಯಾರದೋ ಭಯವಿಲ್ಲದೆ ನಿರಂತರವಾಗಿ ನಡೆಸುತ್ತಿರುವುದು ಇದಕ್ಕೆ ಕಾರಣ ಅಧಿಕಾರಿಗಳು ಕುಮ್ಮಕ್ಕು ಎಂಬ ದೂರು ವ್ಯಾಪಕವಾಗಿದೆ.

ಗೋಮರ್ಸಿ ಮತ್ತು ಸಸಳ್ಳಿ(ಡಿ) ನಂ–148/4/1, 148/4/5 3.1 ಎಕರೆ ಪಟ್ಟಾ ಜಮೀನಿನಲ್ಲಿ ಮರಳು ಯಾರ್ಡ್‌ನ್ನು ಖಾಸಗಿ ಗುತ್ತಿಗೆ ಕಂಪನಿ ಪರವಾನಿಗೆ ಪಡೆದಿದೆ. ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಕಾರ್ಯನಿರ್ವಹಿಸುತ್ತಿದೆ. ರಾಜಧನ ಪಾವತಿಸದ ಟಿಪ್ಪರ್‌ಗಳಿಗೆ ಮರಳು ನೀಡುತ್ತಿದ್ದು, ತೂಕದ ಯಂತ್ರ, ಸಿಸಿ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿಲ್ಲ. ಬಹುತೇಕ ಟಿಪ್ಪರ್‌ಗಳಿಗೆ ನಂಬರ್ ಪ್ಲೇಟ್‌ಗಳೇ ಇಲ್ಲ..! ಜೊತೆಗೆ ರಾಯಲ್ಟಿ ಇಲ್ಲದೇ ವಾಹನಗಳು ನಿರಂತರವಾಗಿ ಅಕ್ರಮ ದಂಧೆ ನಡೆಸುತ್ತಿದ್ದು, ವಾಹನದ ನಂಬರ್ ಇಲ್ಲಂದ್ರೆ ರಾಯಲ್ಟಿ ಹೇಗೆ ಕೊಡಲು ಸಾಧ್ಯ ಎಂದು ಇಲ್ಲಿನ ಜನರು ಪ್ರಶ್ನೆ ಮಾಡುತ್ತಿದ್ದಾರೆ.

**ರಾಜಕೀಯ ಮುಖಂಡರ, ಖಾಕಿಯ ನೆರಳು..!**

ಅಕ್ರಮ ಮರಳು ದಂಧೆಗೆ ರಾಜಕೀಯ ಮುಖಂಡರು, ಪೊಲೀಸ್ ಇಲಾಖೆ ಅಧಿಕಾರಿಗಳ ಅಭಯ ಇದೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ಬುಧವಾರ ಸ್ಟಾಕ್ ಯಾರ್ಡ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೇದೆಯೊಬ್ಬ ಅಕ್ರಮ ಮರಳು ದಂಧೆಗೆ ಸಹಕಾರ ನೀಡುತ್ತಿರುವದು ಕಂಡು ಬಂದಿದೆ. ಮಾಹಿತಿ ಮೇರೆಗೆ ತಾಲೂಕಿನ ಗೋಮರ್ಸಿ ಪಟ್ಟಾ ಜಮೀನಿಗೆ ಗಣಿ, ಭೂ ವಿಜ್ಞಾನ ಇಲಾಖೆಯ ಭೂವಿಜ್ಞಾನಿ ಅಮೃತ ಭೇಟಿ ನೀಡಿ ಪರಶೀಲಿಸಿದ್ದಾರೆ.



### ಎಲ್ಲಾ ಇಲ್ಲಗಳ ನಡುವೆ ಕಾರ್ಯ..!

ತೂಕದ ಯಂತ್ರ ಕಾರ್ಯನಿರ್ವಹಿಸುತ್ತಿಲ್ಲ. ದಾಖಲಾತಿ ತೋರಿಸುತ್ತಿಲ್ಲ. ರಿಜಿಸ್ಟರ್ ಇಲ್ಲ. ಇನ್–ಔಟ್ ನೋಂದಣಿಯಿಲ್ಲ. ಸಿಸಿ ಕ್ಯಾಮೆರಾ ಫುಟೇಜ್ ತೋರಿಸುತ್ತಿಲ್ಲ. ಸ್ಟಾಕ್ ಯಾರ್ಡ್ ಸರಿಯಾಗಿ ನಿರ್ವಹಿಸುತ್ತಿಲ್ಲ. ಟಿಪ್ಪರ್‌ಗಳಿಗೆ ಹೊದಿಕೆ ಹಾಕುತ್ತಿಲ್ಲ. ನಂಬರ್ ಪ್ಲೇಟ್‌ಗಳಿಲ್ಲದ ಟಿಪ್ಪರ್‌ಗಳ ಬಳಕೆ ಮಾಡುವ ಮೂಲಕ ನಿಯಮಗಳನ್ನು ಉಲ್ಲಂಘಿಸಿದ್ದು, ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ವರದಿ ನೀಡುತ್ತೇನೆ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

**ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಸೇರಿ ಏನೇ ಬದಲಾವಣೆ ಇದ್ದರೂ 4 ಮಂದಿಯ ನಿರ್ಧಾರವೇ ಅಂತಿಮ: ಸಚಿವ ಪ್ರಿಯಾಂಕ್ ಖರ್ಗೆ**

# ಕೋಣಮೇಳಕುಂದಾದಲ್ಲಿ ಬಸವ ಜ್ಯೋತಿ ಯಾತ್ರೆಗೆ ಅದ್ದೂರಿ ಸ್ವಾಗತ

**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಭಾಲ್ಕಿ ಪಟ್ಟಣದಲ್ಲಿ ಏ.20 ರಿಂದ 22ರ ವರೆಗೆ ನಡೆಯಲಿರುವ ಬಸವ ಜಯಂತಿ, ವಚನ ಜಾತ್ರೆ–2026, ಡಾ.ಚನ್ನಬಸವ ಪಟ್ಟದ್ದೇವರ 27ನೆಯ ಸ್ಮರಣೋತ್ಸವ ಮತ್ತು ಡಾ.ಬಸವಲಿಂಗಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭದಲ್ಲಿ ಗ್ರಾಮದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಹಿರೇಮಠ ಸಂಸ್ಥಾನದ ಶಿವಬಸವ ಸ್ವಾಮೀಜಿ ಮನವಿ ಮಾಡಿದರು.

ತಾಲೂಕಿನ ಕೋಣಮೇಳಕುಂದಾ ಗ್ರಾಮದಲ್ಲಿ ನಿಮಿತ್ತ ಹಿರೇಮಠ ಸಂಸ್ಥಾನ, ಅಭಿನಂದನಾ ಸಮಿತಿ ವತಿಯಿಂದ ಮಂಗಳವಾರ ಆಯೋಜಿಸಿದ್ದ ಬಸವ ಜ್ಯೋತಿ ಯಾತ್ರೆ ಸ್ವಾಗತ



### ಬಸವಜ್ಯೋತಿ ಯಾತ್ರೆಗೆ ಸ್ವಾಗತ

**ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಬಸ್ ನಿಲ್ದಾಣ ಸಮೀಪದ ಬೀದರ್–ಭಾಲ್ಕಿ ಮುಖ್ಯ ರಸ್ತೆಯಲ್ಲಿ ಬಸವ ಜ್ಯೋತಿ ಯಾತ್ರೆಗೆ ಅದ್ದೂರಿ ಸ್ವಾಗತ ಕೋರಲಾಯಿತು. ಪ್ರಚಾರದ ರಥಕ್ಕೆ ಭಕ್ತರು ಮಾಲಾರ್ಪಣೆ ಸಲ್ಲಿಸಿ ಬಸವ ಜ್ಯೋತಿ ಯಾತ್ರೆಗೆ ಬರಮಾಡಿಕೊಂಡರು. ಮಾರ್ಗದುದ್ದಕ್ಕೂ ಪಟಾಕಿ ಸಿಡಿಸಿ, ಪುಷ್ಪವೃಷ್ಟಿ ಸುರಿದು ಬಸವ ಜ್ಯೋತಿ ಯಾತ್ರೆಯ ಮೆರಗು ಹೆಚ್ಚಿಸಿದರು. ಬಸವಣ್ಣನವರ ವಚನಗಳಿಗೆ ಶಾಲಾ ಮಕ್ಕಳು ಕೋಲಾಟದ ಮೂಲಕ ಹೆಜ್ಜೆ ಹಾಕಿ ಗಮನ ಸೆಳೆದರು.**

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಡಾ.ಬಸವಲಿಂಗ ಪಟ್ಟದ್ದೇವರು ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಮತ್ತು ಅಧ್ಯಾತ್ಮಿಕ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಸೇವೆ ಅವಿಸ್ಮರಣೀಯ ಎಂದರು. ಅಂತಹ ಪೂಜ್ಯರ ಅಮೃತ ಮಹೋತ್ಸವಕ್ಕೆ ನಾಡಿನ ಮಠಾಧೀಶರು, ಗಣ್ಯರು ಸಾಕ್ಷಿಯಾಗಲಿದ್ದಾರೆ. ಗ್ರಾಮಸ್ಥರು ಕೂಡ ಈ ಐತಿಹಾಸಿಕ ಸಮಾರಂಭದಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶಂಭುಲಿಂಗ ಕಾಮಣ್ಣ, ತಾಲೂಕು ವಚನ ಸಾಹಿತ್ಯ ಪರಿಷತ್ತು ಅಧ್ಯಕ್ಷ ಗುಂಡಪ್ಪ ಸಂಗಮಕರ್ ಮಾತನಾಡಿದರು.

ಈ ಸಂದರ್ಭದಲ್ಲಿ ಬಸವ ಜ್ಯೋತಿಯ ಪ್ರಮುಖರಾದ ಬಸವರಾಜ ಪರಸಣ್ಣೆ, ನಾಗಶೆಟ್ಟಿ ಚೋಳಾ, ರಮೇಶ ಬಾಬು, ಸಿದ್ರಾಮ ಧುಳೆ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಸಂತೋಷ ಮಾನಕಾರ, ಹಿರಿಯರಾದ ಈಶ್ವರಪ್ಪ ಬನ್ನಾಳೆ, ಏಕ ರಕ್ಷಣಾ ವೇದಿಕೆಯ ರಾಜ್ಯ ಯುವ ಘಟಕದ ಅಧ್ಯಕ್ಷ ಶಿವರಾಜ ಪಟ್ನೆ, ಪ್ರಮುಖರಾದ ಕಾಶಪ್ಪ ವಾಲೆ, ರಮೇಶ ಪಂಚಾಳ, ಮಲ್ಲಿಕಾರ್ಜುನ ಮಾನಕಾರ, ಬಸವರಾಜ ಮರೆ, ಶಿವಕಾಂತ ಬಿರಾದಾರ್, ಜಾಲೇಂದ್ರ ಭೌರಾ, ಭೀಮಣ್ಣ ಕನಶೆಟ್ಟೆ, ರಾಜಕುಮಾರ ಮಾನಕಾರ, ರಾಜಕುಮಾರ ಹೂಗಾರ, ಗಣಪತಿ ಸಿರ್ಸೆ, ಕೃಷ್ಣ ಮಾನಕಾರ, ಶ್ರೀನಿವಾಸ ರೆಡ್ಡಿ, ಆನಂದ ತುಗಶೆಟ್ಟೆ, ಸುನಿಲ ಮಾನಕಾರ, ರಾಜಕುಮಾರ ಪಟ್ನೆ, ಸುಭಾಷ ವಾಲೆ, ರಾಜಶೇಖರ, ವೀರೇಂದ್ರ, ಗಣೇಶ ಪಾಟೀಲ್, ಲಕ್ಷ್ಮಣ ಹಡಪದ ಸೇರಿದಂತೆ ಹಲವರು ಇದ್ದರು. ಶಿಕ್ಷಕ ಮಹೇಶ ಬನ್ನಾಳೆ ನಿರೂಪಿಸಿ, ವಂದಿಸಿದರು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ಎಲ್ಲಾ ಸಮಾಜದವರನ್ನು ಸಮಾನರಾಗಿ ಕಾಣುವ ಮನೋಭಾವ ಬೆಳೆಸಬೇಕು

ಭಾರತವು ವೈವಿಧ್ಯತೆಯ ನಾಡು. ಇಲ್ಲಿ ಅನೇಕ ಜಾತಿ, ಧರ್ಮ, ಭಾಷೆ ಮತ್ತು ಸಂಸ್ಕೃತಿಯ ಜನರು ಒಟ್ಟಾಗಿ ಜೀವನ ನಡೆಸುತ್ತಿದ್ದಾರೆ. ಇಂತಹ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಅಭಿವೃದ್ಧಿ ಸ್ಥಿರವಾಗಿರಬೇಕಾದರೆ ಎಲ್ಲರನ್ನು ಸಮಾನವಾಗಿ ಕಾಣುವ ಮನೋಭಾವ ಅತ್ಯಂತ ಅಗತ್ಯ.


ಆದರೆ ದುಃಖಕರ ಸಂಗತಿಯೆಂದರೆ ಇಂದಿಗೂ ಕೆಲವು ಕಡೆ ಜಾತಿ, ವರ್ಗ ಮತ್ತು ಧರ್ಮದ ಆಧಾರದ ಮೇಲೆ ಭೇದಭಾವ ಕಂಡು ಬರುತ್ತಿದೆ. ಇದು ಸಮಾಜದ ಏಕತೆ ಮತ್ತು ಅಭಿವೃದ್ಧಿಗೆ ದೊಡ್ಡ ಅಡ್ಡಿಯಾಗಿದೆ. ಸಮಾಜದಲ್ಲಿ ಒಬ್ಬರನ್ನು ಮೇಲ್ನೋಟದಿಂದ ಮತ್ತು ಮತ್ತೊಬ್ಬರನ್ನು ಕೀಳು ದೃಷ್ಟಿಯಿಂದ ನೋಡುವ ಮನೋಭಾವ ನಿಲ್ಲಬೇಕು. ಪ್ರತಿಯೊಬ್ಬ ಮಾನವನಿಗೂ ಸಮಾನ ಹಕ್ಕುಗಳು ಮತ್ತು ಗೌರವ ದೊರಕಬೇಕು.

ನಮ್ಮ ಸಂವಿಧಾನವು ಎಲ್ಲ ನಾಗರಿಕರನ್ನು ಸಮಾನವಾಗಿ ಕಾಣಬೇಕು ಎಂದು ಹೇಳುತ್ತದೆ. ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯ ಎಂಬ ಮೌಲ್ಯಗಳ ಮೇಲೆ ನಮ್ಮ ದೇಶದ ಪ್ರಜಾಪ್ರಭುತ್ವ ನಿರ್ಮಾಣವಾಗಿದೆ. ಆದ್ದರಿಂದ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯನ್ನು ಗೌರವದಿಂದ ಕಾಣುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

ಶಿಕ್ಷಣ, ಜಾಗೃತಿ ಮತ್ತು ಉತ್ತಮ ಸಂಸ್ಕಾರಗಳ ಮೂಲಕ ಸಮಾನತೆಯ ಚಿಂತನೆ ಬೆಳೆಸಬೇಕು. ಕುಟುಂಬದಿಂದಲೇ ಮಕ್ಕಳಿಗೆ ಸಮಾನತೆ ಮತ್ತು ಮಾನವೀಯತೆಯ ಪಾಠ ಕಲಿಸಬೇಕು. ಆಗ ಮಾತ್ರ ಭೇದಭಾವವಿಲ್ಲದ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ.

ಎಲ್ಲಾ ಸಮಾಜದವರನ್ನು ಸಮಾನವಾಗಿ ಕಾಣುವ ಮನೋಭಾವ ಬೆಳೆದಾಗ ಮಾತ್ರ ನಿಜವಾದ ಸಾಮಾಜಿಕ ನ್ಯಾಯ ಸ್ಥಾಪನೆ ಆಗುತ್ತದೆ. ಆಗ ಮಾತ್ರ ದೇಶದಲ್ಲಿ ಏಕತೆ, ಶಾಂತಿ ಮತ್ತು ಅಭಿವೃದ್ಧಿ ಮತ್ತಷ್ಟು ಬಲವಾಗುತ್ತದೆ.

# ಕಾರಂಜಾ ಸಂತ್ರಸ್ತರ ಬೃಹತ ಸಮಾವೇಶ ಭದ್ರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ



**• ಮಲ್ಲಮ್ಮ ನುಡಿ ವಾರ್ತೆ, ಬೀದರ**

ಕಾರಂಜಾ ಮುಳುಗಡೆ ಸಂತ್ರಸ್ತರ ದಶಕಗಳ ನ್ಯಾಯಯುತ ಬೇಡಿಕೆಗಳು ಈಡೇರಲೆಂದು ಭದ್ರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಮಾತನಾಡಿದ ಸಂತ್ರಸ್ತ ಹೋರಾಟ ಸಮಿತಿಯ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲ ಸರ್ಕಾರ ಕಾರಂಜಾ ಮುಳಗಡೆ ಸಂತ್ರಸ್ತರಿಗೆ ಕಡೆಗಣಿಸುತ್ತಿದೆ. ಮಾತಿನಲ್ಲಿ ಮನೆ ಕಟ್ಟುತ್ತಿದ್ದಾರೆ. ಇನ್ನು ಈ ಭ್ರಮೆಗಳೆಲ್ಲಾ ಬೇಡ. ರೈತರೆಲ್ಲ ಒಟ್ಟಾಗುತ್ತಿದ್ದಾರೆ. ಎಲ್ಲ ಸಂತ್ರಸ್ತರ ಸರ್ಕಾರದ ವಿರುದ್ಧ ಅಳಲು ತೋಡು ಕೊಳ್ಳುತ್ತಿದ್ದಾರೆ,

ರಾಜಪ್ಪಾ ಕೋಸಮ ಮಾತನಾಡಿ ಏಪ್ರಿಲ್ 11ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದು ಬೀದರ್ ಜಿಲ್ಲೆಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಬೃಹತ್ ಹಕ್ಕೊತ್ತಾಯ ಸಮಾವೇಶ. ಹಮ್ಮಿಕೊಳ್ಳಲಾಗಿದೆ ಭೂಮಿ ಕಳೆದುಕೊಂಡ 28 ಗ್ರಾಮದ ರೈತರು ಸಮಾವೇಶದಲ್ಲಿ ಭಾಗಿಯಾಗಬೇಕು ಎಂದರು ತಿಳಿಸಿದ್ದಾರೆ,

> “ಭದ್ರೇಶ್ವರ ಮಠದ ಶ್ರೀ ಶಿವುಕುಮಾರ ಸ್ವಾಮೀಜಿ ಮಾತನಾಡಿ ನಾಲ್ಕು ದಶಕಗಳಿಂದ ಕಾರಂಜ ಸಂತ್ರಸ್ತರು ಹೋರಾಟ ಮಾಡುತ್ತಿರುವುದು ಸರ್ಕಾರ ಗಮನದಲ್ಲಿದೆ ಸರಕಾರ ಯಾವುದೇ ರೀತಿ ಕೈಗೊಳ್ಳದಿರುವುದು ಕಾರಂಜ ಸಂತ್ರಸ್ತರ ಕಡೆಗಣಿಸುತ್ತಿದೆ ಸರ್ಕಾರ ಸಂತ್ರಸ್ತರಿಗೆ ನ್ಯಾಯ ಕೊಡಿಸಬೇಕು ಎಂದರು,
> **ಶಿವುಕುಮಾರ ಸ್ವಾಮಿ, ಭದ್ರೇಶ್ವರ ಮಠದ**

ಇದೇ ಸಂದರ್ಭದಲ್ಲಿ ಚಂದ್ರಶೇಖರ್ ಪಾಟೀಲ್ ಭದ್ರೇಶ್ವರ ಮಠದ ಶಿವುಕುಮಾರ ಸ್ವಾಮೀ ಹುಚಕನಳ್ಳಿ, ರಾಜಪ್ಪ, ಸಂಗಾರೆಡ್ಡಿ ಔರದ ಬಸವರಾಜ್ ಹಿಂದಾ ಈಸುಪಮಿಯಾ ಬಗದಲ ಏಮದಪಾಸ ಬಗದಲ ಮಾದಪ್ಪ,ಖೌದೆ ರಾಜಶಖರ ಮಹೇಶ್ ಬೀರಾದರ ರೇವಣಪ್ಪಾ ಮರಕಲ ವೀರೇಂದ್ರ ಭತಮುರ್ಗೆ, ಮೊಹಮ್ಮದ್ ಅಹಮದ್ ಇದರು

# ಸಂತರ ಮಾರ್ಗವೇ ಸುಖೀ ಜೀವನಕ್ಕೆ ದಾರಿ

ಮಲ್ಲಮ್ಮ ನುಡಿ ವಾರ್ತೆ, ಕಮಲನಗರ

ಸಂತರ ಮಾರ್ಗವೇ ಸುಖೀ ಜೀವನಕ್ಕೆ ದಾರಿ, ಸಂತ ಶಿಖಾಮನಿಗಳು ಹಾಗೂ ಯುವ ಪುರುಷರಾದ ರಾಮ ಕೃಷ್ಣ ಸಂತರ ತತ್ವಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ನಿರಂತರ ನಾಮ ಜಪ ಮಾಡುವುದರಿಂದ ಜೀವನದ ಕಷ್ಟಗಳು ದೂರವಾಗುತ್ತವೆ ಎಂದು ಖ್ಯಾತ ಕೀರ್ತನಕಾರ ಮೋಹನ ಮಹಾರಾಜರು ಹೇಳಿದರು.

ತಾಲೂಕಿನ ಹುಲಸೂರ(ಖೇಡ) ಗ್ರಾಮದಲ್ಲಿ ಹನುಮ ಜಯಂತಿ ನಿಮಿತ್ತ ಹಮ್ಮಿಕೊಳ್ಳಲಾದ 20ನೇ ವರ್ಷದ 'ಅಖಂಡ ಹರಿನಾಮ ಸಪ್ತಾಹ ಹಾಗೂ ಜ್ಞಾನೇಶ್ವರಿ ಪಾರಾಯಣ' ಕಾರ್ಯಕ್ರಮವು ಅತ್ಯಂತ ಭಕ್ತಿ ಮತ್ತು ಸಡಗರದಿಂದ ಜರುಗಿತು, ಈ ಕಾರ್ಯಕ್ರಮದಲ್ಲಿ ಅವರು ಕೀರ್ತನೆ ಮೂಲಕ ಹಲುವು ಧಾರ್ಮಿಕ ಸಂದೇಶ ಸಾರಿದರು.

ಸಂತರ ಆದರ್ಶಗಳನ್ನು ಪಾಲಿಸಿದರೆ ನಮ್ಮಿಂದ ಯಾವುದೇ ತಪ್ಪುಗಳು ಸಂಭವಿಸಲು ಸಾಧ್ಯವಿಲ್ಲ, ಎಂದು ಮಾರ್ಗದರ್ಶನ ನೀಡಿದರು. ಸಂತರ ಸ್ಮರಣೆ ಮತ್ತು ಅವರ ಬೋಧನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಮಾತ್ರ ಶಾಂತಿ ಹಾಗೂ ಸದೃಢ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಪ್ರತಿಪಾದಿಸಲಾಯಿತು.

ಕಳೆದ 20 ವರ್ಷಗಳಿಂದ ಸತತವಾಗಿ ನಡೆದು–ಕೊಂಡು ಬಂದಿರುವ ಈ ಅಖಂಡ ಹರಿನಾಮ ಸಪ್ತಾಹವು ಗ್ರಾಮದ ಆಧ್ಯಾತ್ಮಿಕ ಚೈತನ್ಯವನ್ನು ಎತ್ತಿ ಹಿಡಿಯುತ್ತಿದೆ. ಗ್ರಾಮದ ನೂರಾರು ಮಹಿಳೆಯರು, ಪುರುಷರು ಹಾಗೂ ಯುವಕರು ಪಾಲ್ಗೊಂಡು ಕೀರ್ತನೆಯ ಲಾಭ ಪಡೆದರು.

ಕಾರ್ಯಕ್ರಮದ ಅಂತ್ಯದಲ್ಲಿ ನೆರೆದಿದ್ದ ಸಕಲ ಭಕ್ತಾದಿಗಳಿಗೆ ಪ್ರಸಾದ ವಿತರಣೆ ಮಾಡಲಾಯಿತು. ಇಡೀ ಗ್ರಾಮವು ಭಜನೆ, ಕೀರ್ತನೆ ಹಾಗೂ ಹರಿನಾಮ ಸ್ಮರಣೆಯಿಂದ ಭಕ್ತಿ ಪರವಶವಾಗಿತ್ತು.

ಈ ಸಂದರ್ಭದಲ್ಲಿ ರಾಜೇಂದ್ರ ಮಹಾರಾಜ, ದೌಲತರಾವ ಪಾಟೀಲ ಬಬ್ರುವಾಹನ ವಡಗೆ, ರಾಜು ಪಾಟೀಲ, ದಮ್ಮು ಶಿಲ್ವಾನೆ, ದೀಪಕ ಸೋಮವಂಷಿ,ಅನಿಲ ಜಾಧವ,

,ಅನಿಲ ಮೂಧಾಳೆ, ರಾಜಕುಮಾರ ಶಿವಾಜಿ, ಅರ್ಜುನ ಸೋಮಂಷಿ, ಶ್ರೀಧರ ಕದಂ, ತಾನಾಜಿ ಪಾಟೀಲ ಸೇರಿದಂತೆ ಹುಲಸುರ(ಕೆ) ಮತ್ತು ಸುತ್ತ ಮುತ್ತಲಿನ ಸದ್ಭಕ್ತರು ಇದ್ದರು.



# ಕಲ್ಲಪ್ಪ ಮಹಾಜನ ನಿಧನ

**• ಮಲ್ಲಮ್ಮ ನುಡಿ ವಾರ್ತೆ, ಕಮಲನಗರ**




ತಾಲೂಕಿನ ಡಿಗ್ಗಿ ಗ್ರಾಮದ ಹಿರಿಯ ಜೀವಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿಶ್ರಾಂತ ಮುಖ್ಯಶಿಕ್ಷಕ ಸ್ವ. ಕಲ್ಲಪ್ಪ ತಂದೆ ಮೊಗಲಪ್ಪ ಮಹಾಜನ(85) ಬುಧವಾರ ಮಧ್ಯಾಹ್ನ ನಿಧನ ಹೊಂದಿದ್ದರು.

ಮೃತರು ಓರ್ವ ಪುತ್ರ, ಇಬ್ಬರೂ ಪುತ್ರಿಯರು ಹಾಗೂ ಅಪಾರ ಬಂಧು–ಬಳಗದಿಂದ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಿಗ್ಗೆ 9 ಗಂಟೆಗೆ ಸ್ವಗ್ರಾಮದ ಅವರ ಹೊಲದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ಮೂಲದವರು ತಿಳಿಸಿದ್ದಾರೆ.



ಕುರುಗೋಡು ಜೆಸ್ಕಾಂ ಉಪ–ವಿಭಾಗದ ಕಚೇರಿಗೆ ನೂತನವಾಗಿ ಆಗಮಿಸಿದ ಜೆಸ್ಕಾಂ ಎಇಇ ಶೇಕ್‌ಮಹಮ್ಮದ್‌ಜಾಪರ್ ಅವರು ನೂತನವಾಗಿ ಅಧಿಕಾರ ಸ್ವೀಕರಿಸಿದ್ದರಿಂದ ಅವರನ್ನು ಕುರುಗೋಡು ಜೆಸ್ಕಾಂ ಸೆಕ್ಷನ್‌ಆಫೀಸ್‌ನಿಂದ ಆತ್ಮೀಯವಾಗಿ ಹೂಮಾಲೆಹಾಕಿ ಸ್ವಾಗತಿಸಿದರು. ಪ್ರಾರಂಭದಲ್ಲಿ ಕುರುಗೋಡು ಜೆಸ್ಕಾಂ ಎಇಇ ಆಗಿ ಕಾರ್ಯನಿರ್ವಹಿಸಿ ಈಗ ಬಳ್ಳಾರಿಗೆ ವರ್ಗಾವಣೆಗೊಂಡ ರಾಜೇಂದ್ರಪ್ರಸಾದ್ ಅವರನ್ನು ಹೂಮಾಲೆ ಆತ್ಮೀಯವಾಗಿ ಬೀಳ್ಕೊಟ್ಟರು. ಕುರುಗೋಡು ಸೆಕ್ಷನ್‌ಅಧಿಕಾರಿ ಅನೀಫ್, ಕುಡಿತಿನಿಸೆಕ್ಷನ್‌ಅಧಿಕಾರಿ ಜಗ್ಗನಾಯಕ್, ಎಮ್ಮಿಗನೂರುಸೆಕ್ಷನ್ ಅಧಿಕಾರಿ ಬಸವರಾಜ ಹಾಗು ಕುರುಗೋಡು ಜೆಸ್ಕಾಂ ಉಪ–ವಿಭಾಗದ ಎಲ್ಲಾ ನೌಕರರು, ಹಾಗು ಸಿಬ್ಬಂದಿವರ್ಗದವರು ಇದ್ದರ

# ಮಲ್ಲಮ್ಮ ನುಡಿ ಪತ್ರಿಕೆಯ ಯುಗಾದಿ ವಿಶೇಷ ಸಂಚಿಕೆ ವಿತರಣೆ



ಹುಮನಾಬಾದ: ಬೀದರ್ ಮಹಾನಗರ ಪಾಲಿಕೆಯ ಗಾಂಧಿ ಗಂಜ್ ವಲಯ ಗ್ರೇಡ್ 2 ಆಯುಕ್ತರಾದ ನಾಗಣ್ಣ ಎಂ. ಪರೀಟ್ ಇವರನ್ನು ಮಲ್ಲಮ್ಮ ನುಡಿ ದಿನ ಪತ್ರಿಕೆಯ ಯುಗಾದಿ ವಿಶೇಷ ಸಂಚಿಕೆಯನ್ನು ಹುಮನಾಬಾದ ತಾಲೂಕ ವರದಿಗಾರ ಮಲ್ಲಿಕಾರ್ಜುನ ರೆಡ್ಡಿ ಅವರು ನೀಡಿದರು. ಇದೇ ಸಂದರ್ಭದಲ್ಲಿ ಚಿಟಗುಪ್ಪ ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಅವರು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಚಿಟಗುಪ್ಪ ತಾಲೂಕ ವರದಿಗಾರ ರಾಜಕುಮಾರ ಆರ್. ಹಡಪದ, ಅನೀಲಕುಮಾರ ಎಂ. ಸಿಂಧೆ, ತಬ್ಬರೇಜ್, ಶಿವಶರಣ ಚಾಂಗಲೇರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ದಾವಣಗೆರೆ, ಬಾಗಲಕೋಟೆಯಲ್ಲಿ ಕಾಂಗ್ರೆಸ್ ಜಯಭೇರಿ: ಖಂಡ್ರೆ

**• ಮಲ್ಲಮ್ಮ ನುಡಿ ವಾರ್ತೆ, ಬೆಂಗಳೂರು**

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಭೇರಿ ಬಾರಿಸುತ್ತಾರೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ವಿಶ್ವಾಸ ವ್ಯಕಪಡಿಸಿದ್ದಾರೆ.

ಬೆಂಗಳೂರಿನಲ್ಲಿಂದು ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾವು ದಾವಣಗೆರೆಯಲ್ಲಿ ಖುದ್ದು ಪ್ರಚಾರ ನಡೆಸಿದ್ದು, ಎಲ್ಲೆಡೆ ಕಾಂಗ್ರೆಸ್ ಪರವಾದ ಅಲೆ ಗೋಚರಿಸುತ್ತಿತ್ತು. ಪಕ್ಷದ ಅಭ್ಯರ್ಥಿ ಗೆಲ್ಲುವುದು ನಿಶ್ಚಿತ ಎಂದು ತಿಳಿಸಿದರು.

ಬಾಗಲಕೋಟೆ ಉಪ ಚುನಾವಣೆಯಲ್ಲೂ ಜನರು ಕಾಂಗ್ರೆಸ್ ಸರ್ಕಾರದ ಪರ ವಿಶ್ವಾಸ ಹೊಂದಿದ್ದಾರೆ. ಈ ಕ್ಷೇತ್ರದಲ್ಲೂ ಕಾಂಗ್ರೆಸ್ ಅಭ್ಯರ್ಥಿ ಗೆಲುವುದು ನಿಶ್ಚಿತ ಎಂಬ ವಿಶ್ವಾಸವನ್ನು ಈಶ್ವರ ಖಂಡ್ರೆ ವ್ಯಕ್ತಪಡಿಸಿದರು.

# ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತಿ ಅದ್ದೂರಿಯಾಗಿ ಆಚರಿಸೋಣ



**• ಮಲ್ಲಮ್ಮ ನುಡಿ ವಾರ್ತೆ, ಬೀದರ**

ಇದೇ ಏಪ್ರಿಲ್.20 ರಂದು ಬರುವ ಸಾಂಸ್ಕೃತಿಕನಾಯಕ ವಿಶ್ವಗುರು ಬಸವಣ್ಣನವರ ಜಯಂತಿ ಅದ್ದೂರಿಯಾಗಿ ಆಚರಿಸೋಣ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಬಿ.ಕರಾಳೆ ತಿಳಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏಪ್ರಿಲ್.20 ರಂದು ಬರುವ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತಿ ಆಚರಣೆ ಕುರಿತು ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬೆಳಿಗ್ಗೆ 9 ಗಂಟೆಗೆ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಬೆಳಿಗ್ಗೆ 10 ಗಂಟೆಗೆ ಬಸವೇಶ್ವರವೃತ್ತದಲ್ಲಿ ವಿಶ್ವಗುರು ಬಸವಣ್ಣನವರ ಮೂರ್ತಿಗೆ ಮಾಲಾರ್ಪಣೆ ನೆರವೇರಿಸಿ, ಬೆಳಿಗ್ಗೆ 11 ಗಂಟೆಗೆ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಅಂದು ಎಲ್ಲಾ ಶಾಲಾ ಕಾಲೇಜುಗಳಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದು. ಶಾಲಾ ಕಾಲೇಜುಗಳಲ್ಲಿ ಬಸವಣ್ಣನವರ ವಚನಗಳ ಕುರಿತು ಪ್ರಬಂಧ ಹಾಗೂ ಭಾಷಣ ಸ್ಪರ್ಧೆ ಏರ್ಪಡಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಮಹಾನಗರ ಪಾಲಿಕೆ ವತಿಯಿಂದ ಸದರಿ ದಿನಾಂಕದಂದು ನಗರದ ಎಲ್ಲಾ ಮಹನೀಯರ ವೃತ್ತಗಳ ಮೇಲೆ ದೀಪಾಲಂಕಾರ ಮಾಡುವುದು, ರಸ್ತೆಗಳ ಸುತ್ತಮುತ್ತ ಸ್ವಚ್ಚತೆ, ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾ ತಂಡಗಳ ವ್ಯವಸ್ಥೆ, ಪೊಲೀಸ್ ಇಲಾಖೆ ವತಿಯಿಂದ ಸೂಕ್ತ ಪೊಲೀಸ್ ಬಂದೋಬಸ್ತ ವ್ಯವಸ್ಥೆ ಮಾಡಲು ಸೂಚಿಸಿದರು.

ಇದೇ ಸಂದರ್ಭದಲ್ಲಿ ಸಮಾಜದ ಮುಖಂಡರು ವಿವಿಧ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಿದರು.

ಈ ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಚಂದ್ರಕಾಂತ ಪೂಜಾರ, ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಶರಣಪ್ಪ ಕೊಟ್ಟಪಗೋಳ, ಸಂಚಾರಿ ನಿರೀಕ್ಷಕರಾದ ರಮೇಶ ಮೈಲೂರಕರ, ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ರಾಮ ಶಿಂಧೆ, 2026ರ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣರ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷರಾದ ಡಾ.ರಜನೀಶ ವಾಲಿ, ಕಾರ್ಯದರ್ಶಿಗಳಾದ ಮಹಾನಗರ ಪಾಲಿಕೆ ಸದಸ್ಯರಾದ ಶಶಿಧರ ಹೊಸಳ್ಳಿ, ಮುಖಂಡರಾದ ಬಸವರಾಜ ಧನ್ನೂರ, ಶಿವಶರಣಪ್ಪಾ ವಾಲಿ, ಜಗನ್ನಾಥ ಹೆಬ್ಬಾಳೆ, ದೀಪಕವಾಲಿ, ಚಂದ್ರಶೇಖರ ಪಾಟೀಲ ಗಾದಗಿ, ಸೋಮಶೇಖರ ಪಾಟೀಲ ಗಾದಗಿ, ಮಹೇಶ ಗೋಳನಾಳಕರ್, ವಿನಯಕುಮಾರ ಮಾಳಗೆ, ಮಾರುತಿ ಬೌದ್ಧೆ, ವಿಜಯಕುಮಾರ ಸೋನಾರೆ, ಅಭಿ ಕಾಳೆ, ಶಾಮಣ್ಣ ಭಾವಗಿ, ಶಿವಶಂಕರ ಟೋಕರೆ, ಓಂಪ್ರಕಾಶ ರೊಟ್ಟೆ, ಶಶಿಕುಮಾರ ಪಾಟೀಲ ಸಂಗಮ, ಸಿದ್ರಾಮಯ್ಯ ಸ್ವಾಮಿ, ಮಾಣಿಕೇಶ ಪಾಟೀಲ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಂಘ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು

# ಇಓ ಕೌಟಗೆ ಯುಗಾದಿ ವಿಶೇಷಾಂಕ ವಿತರಣೆ



**• ಮಲ್ಲಮ್ಮ ನುಡಿ ವಾರ್ತೆ, ಕಮಲನಗರ**

ತಾಲೂಕ ಕಾರ್ಯನಿರ್ವಾಹಕ ಅಧಿಕಾರಿಗಳಾದ (ಇಓ) ಶ್ರೀ ಹಣಮಂತರಾಯ ಕೌಟಗೆ ಸರ್ ಅವರಿಗೆ ಅವರ ಕಚೇರಿಯಲ್ಲಿ ಭೇಟಿ ನೀಡಿ, ಮಲ್ಲಮ್ಮ ನುಡಿ ದಿನ ಪತ್ರಿಕೆ ಹೊರತಂದ ಯುಗಾದಿ ವಿಶೇಷಾಂಕ ವಿತರಣೆ ಮಾಡಲಾಯಿತು.

ಯುಗಾದಿ ಹಬ್ಬದ ಪ್ರಯುಕ್ತ ಹೊರತಂದ ಈ ವಿಶೇಷಾಂಕವು ಯುಗಾದಿ ಹಬ್ಬದ ಮತ್ತು ಇನ್ನಿತರ ಉಪಯುಕ್ತ ಮಾಹಿತಿ ಹೊಂದಿದೆ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಪತ್ರಿಕೆಯ ಕಮಲನಗರ ತಾಲೂಕ ವರದಿಗಾರರಾದ ಪರಮೇಶ ರಾಂಪುರೆ ಉಪಸ್ಥಿತರಿದ್ದರು.

# ಆರ್.ಬಸವನಗೌಡ ತುರ್ವಿಹಾಳ ಅಭಿಮತ.



ಮಲ್ಲಮ್ಮ ನುಡಿ ವಾರ್ತೆ ಮಸ್ಕಿ

ತಾಲೂಕಿನ ಮೆದಿಕಿನಾಳ ಗ್ರಾಮದ ಆರಾಧ್ಯ ದೈವ ಶ್ರೀ ಮರಿದೇವಿ ಜಾತ್ರಾ ಮಹೋತ್ಸವವು ಅರ್ಥಪೂರ್ಣವಾಗಿ ಜರುಗಿತು.ಪ್ರತಿ ವರ್ಷದ ವಾಡಿಕೆಯಂತೆ ಈ ವರ್ಷವೂ ಕೂಡ ಪಲ್ಲಕ್ಕಿ ಮೆರವಣಿಗೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು ನಂತರ ಪಲ್ಲಕ್ಕಿ ಮೆರವಣಿಗೆ ಕಾರ್ಯಕ್ರಮವು ಗಂಗಪ್ಪ ಬಡಿಗೇರ ಮನೆಯಿಂದ ಪ್ರಾರಂಭವಾಗಿ ಕನಕ ವೃತ್ತ,ಬಸ್ ನಿಲ್ದಾಣ, ಪಂಚಾಯತಿ ಕಟ್ಟೆ ಮುಖಾಂತರ ಊರಿನ ಅಗಸಿ ಮೂಲಕ ಸಾಗಿ ಮರಿದೇವಿ ದೇವಸ್ಥಾನಕ್ಕೆ ತಲುಪಿತು. ಸುತ್ತಮುತ್ತಲಿನ ಗ್ರಾಮಸ್ಥರು ಜಾತ್ರೆಯಲ್ಲಿ ಮರಿದೇವಿ ಅಮ್ಮನ ಉಚ್ಛಾಯವನ್ನು ಎಳೆದು ಅಮ್ಮನ ಕೃಪೆಗೆ ಪಾತ್ರರಾದರು.

ಈ ವೇಳೆ ಜಾತ್ರೆಯಲ್ಲಿ ಪಾಲ್ಗೊಂಡು ಬಸನಗೌಡ ತುರ್ವಿಹಾಳ ರವರು ಮಾತನಾಡಿ ಗ್ರಾಮೀಣ ಪ್ರದೇಶದ ಜಾತ್ರೆಗಳು ಭಾರತದ ಸಂಸ್ಕೃತಿಯ ಪ್ರತೀಕವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ವೇಳೆ,ಪೂಜಾರಿ ಮೌನೇಶ,ಹನುಮಂತಪ್ಪ ವೆಂಕಟಾಪೂರ,ಮಲ್ಲಯ್ಯ ಬಳ್ಳಾ,ಜಯಪ್ಪ ಹಿರೇಮನಿ,ಹುಲುಗಪ್ಪ ಹಿರೇಮನಿ,ಗೋಪಾಲ ಪೂಜಾರಿ,ಮೌನೇಶ ಐಹೋಳೆ,ಅಮೀರ್ ಸಾಬ್,ತಿಪ್ಪಣ್ಣ,ರಾಜಣ್ಣ ಪರಡ್ಡಿ,ಮಲ್ಕನಗೌಡ ಸೇರಿದಂತೆ ಗ್ರಾಮ ಪಂಚಾಯಿತಿ ಸದಸ್ಯರು ಊರಿನ ಎಲ್ಲಾ ಸಮುದಾಯದ ಮುಖಂಡರು ಹಾಗೂ ವಿವಿಧ ಗ್ರಾಮದ ಗ್ರಾಮಸ್ಥರು ಭಾಗಿಯಾಗಿದ್ದರು.

# ಅಂಬೇಡ್ಕರ್ ಜಯಂತಿ ಪ್ರಯುಕ್ತ ರಕ್ತದಾನ ಶಿಬಿರ ಎ.12 ಕ್ಕೆ

ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ 135 ನೇ ಜಯಂತಿ ಅಂಗವಾಗಿ ಎಪ್ರೀಲ್ 12ಕ್ಕೆ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಕೆಕೆಆರ್‌ಟಿಸಿ ಮಾಜಿ ಅಧ್ಯಕ್ಷ ವಿಲಾಸ ಮೋರೆ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು,ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಪ್ರೀಲ್ 12 ಕ್ಕೆ ಮುಂಜಾನೆ 10.00 ಗಂ–ಟೆಗೆ ಆಯೋಜಿಸಿರುವ ರಕ್ತದಾನ ಶಿಬಿರವನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಲಿದ್ದು,ಕಾರ್ಯಕ್ರಮದ ಅಧ್ಯಕ್ಷತೆ ಬೀದರ ಸಂಸದ ಸಾಗರ ಖಂಡ್ರೆ ವಹಿಸಲಿದ್ದಾರೆ.ಕಾರಣ ಅಂಬೇಡ್ಕರ್ ಅಭಿಮಾನಿಗಳು ಸೇರಿದಂತೆ ಎಲ್ಲ ಅರ್ಹ ಯುವಕ,ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡಲು ಸ್ವಇಚ್ಛೆಯಿಂದ ಮುಂದಾಗಬೇಕು ಎಂದು ಕರೆ ನೀಡಿದ್ದಾರೆ.ಇಂದಿನ ದಿನಮಾನಗಳಲ್ಲಿ ಎಲ್ಲ ಗುಂಪಿನ ರಕ್ತ ಅತ್ಯಾವಶ್ಯಕವಾಗಿರುವುದರಿಂದ ಸಾರ್ವಜನಿಕರು ರಕ್ತದಾನ ಮಾಡಿ ಮಾನವೀಯತೆ ಮೆರೆಯಬೇಕು ಎಂದು ವಿಲಾಸ ಮೋರೆ ಮನವಿ ಮಾಡಿದ್ದಾರೆ.



# ಸರಕಾರಿ ಶಾಲೆ ಉಳಿಸಿ

ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ

ಸರಕಾರಿ ಶಾಲೆಗಳನ್ನು ಕೆ.ಪಿ.ಎಸ್ ಮ್ಯಾಗ್ನೆಟ್ ಶಾಲೆ ಹೆಸರಿನಲ್ಲಿ ಮುಚ್ಚಲು ಹೊರಟಿರುವುದು ಅಕ್ಷಮ್ಯ ಅಪರಾದವಾಗಿದ್ದು ಇದು ಸಾಮಾನ್ಯ ಬಡ ಮಕ್ಕಳನ್ನು ಶಿಕ್ಷಣ ವಂಚಿತರನ್ನಾಗಿ ಮಾಡಲು ಹೊರಟಿರುವ ಕ್ರಮವಾಗಿದೆ ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಜಿಲ್ಲಾಧ್ಯಕ್ಷ ಮಧುಲತಾ ಗೌಡರ ಮಾತನಾಡಿದರು.



ಅವರು ಪಟ್ಟಣದ ಮಾಚಾಪೂರ ತಾಂಡಾದ ಶಾಲಾ ಆವರಣದಲ್ಲಿ ಮಾತನಾಡುತ್ತ ಕೆ.ಪಿ.ಎಸ್ ಮ್ಯಾಗ್ನೆಟ್ ಶಾಲೆ ಹೆಸರಿನಲ್ಲಿ ರಾಜ್ಯಾದ್ಯಂತ ನಲವತ್ತ ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚಲು ಹೊರಟಿರುವ ರಾಜ್ಯ ಸರ್ಕಾರದ ವಿರುದ್ದ ಮಾತನಾಡಿದರು

ತಾಂಡಾ ಗ್ರಾಮಸ್ಥರು ಎ.ಐ ಡಿ.ಎಸ್ ಓ ಹಾಗೂ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಿದರು.

ಇಸಂಧರ್ಬದಲ್ಲಿ ಕಾರ್ಯಧರ್ಶಿ ಗಂಗೂಬಾಯಿ ಕೋಕರೆ,ಉಪಾಧ್ಯಕ್ಷ ದೇವತ್ಕಲ್ ಗ್ರಾಮಸ್ಥರಾದ ವಾಸು ಲಮಾಣಿ,ವಾಚಪ್ಪ ಲಮಾಣಿ,ದೇವರಾಜ ಪೋಳ,ಪರಶುರಾಮ ಲಮಾಣಿ,ರಾಮು ಲಮಾಣಿ,ಅಣ್ಣಪ್ಪ ಲಮಾಣಿ,ಚಿದಾನಂದ ಲಮಾಣಿ,ಶ್ರೀನಿವಾಸ ಲಮಾಣಿ,ವೇಂಕಪ್ಪ ಲಮಾಣಿ,ಪ್ರಭು ಲಮಾಣಿ,ಶಿವಕ್ಕ ಲಮಾಣಿ,ರತ್ನವ್ವ ಲಮಾಣಿ,ಸಂಜಯ ಚವ್ಹಾಣ,ಮಂಜು ಲಮಾಣಿ, ವಾಲಪ್ಪ ಲಮಾಣಿ,ಯಂಕವ್ವ ಲಮಾಣಿ, ವಸಂತ ಲಮಾಣಿ ಇದ್ದರು.

ಚಿತ್ರ ಇದೆ 7 ಕೆ.ಎಲ್.ಜಿ.1 ಕಲಘಟಗಿ ಪಟ್ಟಣದ ಮಾಚಾಪೂರ ತಾಂಡಾ ಗ್ರಾಮಸ್ಥರು ಎ.ಐ ಡಿ.ಎಸ್ ಓ ಹಾಗೂ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆವತಿಯಿಂದ ಪ್ರತಿಭಟನೆ ನಡೆಸಿದರು.

# ಅನಧಿಕೃತ RO ಘಟಕಗಳಿಗೆ ಪುರಸಭೆಯಿಂದ ನೋಟಿಸ್

ಮಲ್ಲಮ್ಮ ನುಡಿ ವಾರ್ತೆ
ಲಿಂಗಸುಗೂರು



ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿಕಾರ್ಯನಿರ್ವಹಿಸುತ್ತಿರುವ ROPlant/ನೀರು ಶುದ್ಧೀಕರಣ ಘಟಕಗಳ ವಿರುದ್ಧ ಪುರಸಭೆ ಆಡಳಿತ ಕ್ರಮ ಕೈಗೊಳ್ಳಲು ಮುಂದಾಗಿದೆ.

ವಾರ್ಡ್ ನಂ. 18ರ ಕೈಗಾರಿಕಾ ಪ್ರದೇಶದಲ್ಲಿಕಾರ್ಯನಿರ್ವಹಿಸುತ್ತಿರುವ ಎರಡುನೀರುಶುದ್ಧೀಕರಣಘಟಕಗಳು ಪುರಸಭೆಯಅಗತ್ಯಅನುಮತಿಗಳಿಲ್ಲದೆ ಕಾರ್ಯನಿರ್ವಹಿಸುತ್ತಿರುವುದು ಬೆಳಕಿಗೆ ಬಂದಿದೆ. ಈ ಕುರಿತು ಇತ್ತೀಚೆಗೆ ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಆಧರಿಸಿ ಪುರಸಭೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ದಿನಾಂಕ 02 ಏಪ್ರಿಲ್ ರಂದು ಪುರಸಭೆ ಮುಖ್ಯಾಧಿಕಾರಿಗಳು, ಕಿರಿಯ ಅಭಿಯಂತರರು ಮತ್ತು ಕಿರಿಯ ಆರೋಗ್ಯ ನಿರೀಕ್ಷಕರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ, ಘಟಕಗಳಿಗೆ ಸಂಬಂಧಿಸಿದ ಮಾಲೀಕರು ಸ್ಥಳದಲ್ಲಿ ಲಭ್ಯವಿರಲಿಲ್ಲ. ಜೊತೆಗೆ, ಘಟಕಗಳಿಗೆಅಗತ್ಯವಾದಯಾವುದೇ ದಾಖಲೆಗಳು ಲಭ್ಯವಿಲ್ಲವೆಂದು ಅಧಿಕಾರಿಗಳಿಗೆ ತಿಳಿದು ಬಂದಿದೆ.

ಈಹಿನ್ನೆಲೆ,ಪುರಸಭೆವತಿಯಿಂದ ಸಂಬಂಧಿಸಿದ ಘಟಕಗಳಿಗೆ ನೋಟಿಸ್ ಜಾರಿಗೊಳಿಸಲಾಗಿದ್ದು, 03 ರಿಂದ 05 ದಿನಗಳೊಳಗಾಗಿ ಅಗತ್ಯದಾಖಲೆಗಳನ್ನುಸಲ್ಲಿಸಲು ಸೂಚಿಸಲಾಗಿದೆ.ಉದ್ದಿಮೆಪರವಾನಿಗೆ, ನೀರಿನ ಗುಣಮಟ್ಟ ಪರೀಕ್ಷಾ ವರದಿ, ಆರೋಗ್ಯ ಇಲಾಖೆಯ ಅನುಮತಿ ಸೇರಿದಂತೆ ಎಲ್ಲಾ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ.

ನಿಗದಿತ ಅವಧಿಯೊಳಗೆ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ, ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದ ಪುರಸಭೆ ಕಾಯ್ದೆ 1964ರ ಪ್ರಕಾರ ಯಾವುದೇ ಮುನ್ಸೂಚನೆನೀಡದೇ ಘಟಕಗಳನ್ನು ಮುಚ್ಚುವ ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪುರಸಭೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದಲ್ಲಿ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ನೀರು ಶುದ್ಧೀಕರಣ ಘಟಕಗಳಿಂದ ಸಾರ್ವಜನಿಕ

ಆರೋಗ್ಯಕ್ಕೆಅಪಾಯಉಂಟಾಗುವ ಸಾಧ್ಯತೆ ಇರುವುದರಿಂದ,ಪುರಸಭೆ ಕ್ರಮಕ್ಕೆ ಸಾರ್ವಜನಿಕರಿಂದ ಸಹ ಮೆಚ್ಚುಗೆ ವ್ಯಕ್ತವಾಗುತ್ತಿದೆ.

# ಅಂಗವೈಕಲ್ಯ ಸಾಧನೆಗೆ

## ಅಡ್ಡಿಯಾಗಬಾರದು ಚನ್ನ ಮಲ್ಲಪ್ಪ ಘಂಟಿ

ಮಲ್ಲಮ್ಮ ನುಡಿ ವಾರ್ತೆ
ಗುರುಮಠಕಲ್.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ಸಂಸ್ಥೆಯ ವತಿಯಿಂದ 62 ಜನ ವಿಶೇಷ ಚೇತನರಿಗೆ ಅಗತ್ಯ ಸಾಧನ ಸಲಕರಣೆಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಹಸೀಲ್ದಾರ್ ಚನ್ನ ಮಲ್ಲಪ್ಪ ಘಂಟಿ, "ನಿಮ್ಮ ಸಾಧನೆಗೆ ಅಂಗವೈಕಲ್ಯ ಅಡ್ಡಿಯಾಗದಿರಲಿ" ಎಂದು ಕರೆ ನೀಡಿದರು.

ಎಪಿಡಿ ಸಂಸ್ಥೆ ವಿಕಲಚೇತನರ ಪರ ವಿಶೇಷ ಕಾಳಜಿ ವಹಿಸಿ ಅವರಿಗೆ ಅಗತ್ಯ ಸಾಧನಗಳನ್ನು ಒದಗಿಸುವ ಮೂಲಕ ಆತ್ಮವಿಶ್ವಾಸ ತುಂಬುವ ಕಾರ್ಯ ಮಾಡುತ್ತಿದೆ ಎಂದು ಇನ್ನೋರ್ವ ಅಥಿತಿ ವೀರಣ್ಣ ದೊಡ್ಡಮನಿ ಅವರು ಪ್ರಶಂಸಿಸಿದರು.

ತಾಲೂಕಿನಲ್ಲಿ ವಿಕಲಚೇತನರಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವಲ್ಲಿ ಸಂಸ್ಥೆಯ ಪಾತ್ರ ಮಹತ್ವದ್ದಾಗಿದೆ. ಎಪಿಡಿ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದು ಡಾ. ಮಹೇಶ್ ಸಜ್ಜನ ಹೇಳಿದರು.

ಕಾರ್ಯಕ್ರಮದಲ್ಲಿ ವಿಕಲಚೇತನರಿಗೆ ವಾಕರ್, ಸ್ಟಿಕ್, ಸಿಪಿ ಚೇರ್, ಬ್ಲೈಂಡ್ ಸ್ಟಿಕ್ ಸೇರಿದಂತೆ ವಿವಿಧ ಸಾಧನಗಳನ್ನು ವಿತರಿಸಲಾಯಿತು.

ಸಂಸ್ಥೆಯ ಸಂಯೋಜಕ ವಿರೂಪಾಕ್ಷ ಪಾಟೀಲ ಸ್ವಾಗತಿಸಿದರು. ಎಪಿಡಿ ಸಂಸ್ಥೆಯ ಅತಿಸ್ ಕುಮಾರ್, ಜಸ್ಮಿತಾ ಜಾನ್, ಅಂಬಿಕಾ, ಶಿಲ್ಪಾ ಎಂ, ಶಿಲ್ಪಾ ಎಸ್, ನಾಗಮಣಿ, ರೇಷ್ಮಾ, ಸುರೇಶ, ಸವಿತಾ,

ಲಕ್ಷ್ಮಿ, ಸುಮಿತ್ರ, ಪಾರ್ವತಿ, ಯಲ್ಲಪ್ಪ, ಗೌರಮ್ಮ ಸೇರಿದಂತೆ ವಿವಿಧ ಗ್ರಾಮದ ಫಲಾನುಭವಿ ವಿಶೇಷಚೇತನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ದೇಶಕ್ಕೆ ಡಾ. ಜಗಜೀವನ ರಾಮ್ ಕೊಡುಗೆ ಅಪಾರ: ಲಾಲಪ್ಪ ರಾಂಪುರೆ

ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:

ಹಸಿರು ಕ್ರಾಂತಿಯ ಹರಿಕಾರರು, ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ ದೂರದೃಷ್ಟಿಯ ಕಾರಣದಿಂದಾಗಿ ಇಂದು ನಮ್ಮ ದೇಶ ಆಹಾರ ಭದ್ರತೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸಲು ಸಾಧ್ಯವಾಗಿದೆ. ಇಂದಿನ ಸದೃಢ ಭಾರತಕ್ಕೆ ಬಾಬು ಜಗಜೀವನ ರಾಮ್ ಅವರ ಕೊಡುಗೆ ಅಪಾರವಿದೆ ಎಂದು ಡಾ. ಬಾಬು ಜಗಜೀವನ ರಾಮ್ ಸಂಘಟನೆ ತಾಲೂಕಾಧ್ಯಕ್ಷ ಲಾಲಪ್ಪ ರಾಂಪುರೆ ಹೇಳಿದರು. ತಾಲೂಕಿನ ನಿರ್ಣಾ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಬಾಬು ಜಗಜೀವನ ರಾಮ್ ರವರ 119ನೇ ಜಯಂತಿಯಲ್ಲಿ ಮಾತನಾಡಿದ ಅವರು, ಶಿಕ್ಷಣ ಹಾಗೂ ಪರಿಶ್ರಮಗಳಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು, ಡಾ. ಬಿ.ಆರ್. ಅಂಬೇಡ್ಕರ್, ವಿಶ್ವಗುರು ಬಸವಣ್ಣ,. ಡಾ. ಬಾಬು ಜಗಜೀವನ ರಾಮ್ ಅಂತಹ ಮಹಾ ಪುರುಷರ ತತ್ವ ಆದರ್ಶಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳಬೇಕು ಎಂದರು. ಈ ಸಂದರ್ಭದಲ್ಲಿ ಕನ್ನಡ ಸೇನೆ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ, ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಸಂಜೀವಕುಮಾರ ಕಿರಣ, ಸಂಘಟನೆಯ ಪ್ರಧಾನ



ಕಾರ್ಯದರ್ಶಿ ಬಸವರಾಜ ಸೊಂಡಿ, ಉಪಾಧ್ಯಕ್ಷ ಸುಭಾಷ ಸೊಂಡಿ, ದೇವಿಡ್ ಅಳ್ಳಿಗಿಡ, ಶಂಭುಲಿಂಗ ದೂಳ್, ನಾಗರಾಜ ರಾಂಪೂರೆ, ಈಶ್ವರ ಅಳ್ಳಿಗಿಡ, ವಿಕ್ಕಿ ಕೋಡಂಬಲ, ರಾಜು ದುರ್ಗಿ, ಮಹೇಶ ಜೋಗಣಿ, ಬಾಬು ಅಳ್ಳಿಗಿಡ, ಗೋಪಾಲ ಜೋಗಣಿ, ಸತೀಶ ತೆಳಮನಿ, ಲಕ್ಷ್ಮಣ ಸಾತನೋರ, ತಿಪ್ಪಣ್ಣಾ ಮಾಲೆ, ಪ್ರಮುಖರಾದ ವೀರಶೆಟಿ ಬಂಬಳುಗಿ, ದಯಾನಂದ, ವಿನೋದ ಮಂಗಲಗಿ, ಎಲೀಶ ರೇಕುಳಗಿ, ಪ್ರಸನ್ನ ಮನ್ನಳ್ಳಿ, ಆಸ್ಕರ್ , ಪ್ರಭು ಪೋಲಕಪಳ್ಳಿ, ಆಸಕರ್ ಮನ್ನಾಎಖೇಳ್ಳಿ, ಭರತರೆಡ್ಡಿ, ರಮೇಶ ಧೂಳ್, ಶಾಮವೆಲ್ ಮೇತ್ರಿ, ರವಿ ಚಿರ್ಚಿ, ಶೇಕರ ಚಿರ್ಚಿ, ಹಣಮಂತ ವಾಡಿ, ರಾಜು ಮೇತ್ರೆಸಕ್ಕರ್, ಮಹಾಂತೇಶ ರಾಂಪೂರ, ದಶರಥ ಕಾಳಗಿ, ಮನೋಹರ ಉಡಬಾಳ, ಸಿರ್ಮೋನ್ ಉಡಬಾಳ, ಪುಟರಾಜ ಇಟಗಾ, ಅರುಣ ಇಟಗಾ, ದತ್ತು ಮುಸ್ತೂರಿ, ರಾಜು ಮುದನಾಳ, ಬಬ್ಲು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಡಾ. ಬಾಬು ಜಗಜೀವನ ರಾಮ್ ಜನ್ಮ ದಿನಾಚರಣೆ



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ : ದೇಶದ ಹಸಿವು ನೀಗಿಸಿದ ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್ ರವರ 119ನೇ ಜನ್ಮ ದಿನಾಚರಣೆಯನ್ನು ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಭಾನುವಾರ ಆಚರಿಸಲಾಯಿತು.

ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಅವರು ಡಾ. ಬಾಬು ಜಗಜೀವನ ರಾಮ್ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಿದರು.ಲ

ಈ ಸಂದರ್ಭದಲ್ಲಿ ಕೊಪ್ಪಳ ವಾರ್ತಾ ಇಲಾಖೆಯ ಸಿಬ್ಬಂದಿ ತಿಪ್ಪಯ್ಯ ನಾಯ್ಡು ಎನ್., ಹೊರಗುತ್ತಿಗೆ ಸಿಬ್ಬಂದಿ ಮಂಜುನಾಥ, ಅಪ್ರೆಂಟಿಶಿಪ್ ಅಭ್ಯರ್ಥಿ ಕಿರಣ್ ಕುಮಾರ್ ಮತ್ತು ಲಕ್ಷ್ಮೀಕಾಂತ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಏ 9 ರಂದು ಚಿತ್ತಾಪುರದಲ್ಲಿ "ತರಕಾರಿ ಬೀಜಗಳ ಕಿಟ್ ವಿತರಣಾ ಕಾರ್ಯಕ್ರಮ"

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ತೋಟಗಾರಿಕೆ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ "ತರಕಾರಿ ಬೀಜಗಳ ಕಿಟ್ ವಿತರಣಾ ಕಾರ್ಯಕ್ರಮ"ವನ್ನು ಏಪ್ರಿಲ್ 9 ರಂದು ಗುರುವಾರ ಬೆಳಿಗ್ಗೆ 9.30 ಗಂಟೆಗೆ ಚಿತ್ತಾಪುರ ಬಸವೇಶ್ವರ ವೃತ್ತದ ಬಜಾಜ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ತೋಟಗಾರಿಕೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್, ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ಆರ್. ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಉಮೇಶ ಜಾಧವ, ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ಸುನೀಲ್ ವಲ್ಲ್ಯಾಪುರೆ, ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ಡಾ. ತಳವಾರ ಸಾಬಣ್ಣ, ತಿಮ್ಮಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ದುಲ್ ರಶೀದ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಸಿದ್ರಾಮಪ್ಪ ಪಾಟೀಲ ಧಂಗಾಪುರ, ಜಿಲ್ಲಾ ಹಾಪಕಾಮ್ಸ್ ಅಧ್ಯಕ್ಷ ಮಲ್ಲಿಕಾರ್ಜುನ ಭೂಶೆಟ್ಟಿ ಅವರು ಅತಿಥಿಗಳಾಗಿ ಪಾಲ್ಗೊಳ್ಳುವರು.

# ಪರಿಸರ, ಕಾರ್ಖಾನೆ ಮಾಲಿನ್ಯ ಕುರಿತು ಕವನ ಆಹ್ವಾನ

ಮಲ್ಲಮ್ಮ ನುಡಿವಾರ್ತೆ
ಕೊಪ್ಪಳ

ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನಡೆಸುತ್ತಿರುವ ಬಲ್ಡೋಟ ತೊಲಗಿಸಿ ಹೋರಾಟ 159ನೇ ದಿನ ಪೂರೈಸಿತು.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆಯ ಶಿಫಾರಸಿನಂತೆ ಹಿರೇಬಗನಾಳ, ಅಲ್ಲಾನಗರ ಸುತ್ತಲಿನ ಸ್ಪಾಂಜ್ ಐರನ್ ಘಟಕಗಳನ್ನು ಅತಿ ಶೀಘ್ರವಾಗಿ ಮುಚ್ಚಿ ಸಂತ್ರಸ್ತ ಹಳ್ಳಿಗಳ ಜನರ ಜೀವ ಉಳಿಸಬೇಕು. ಬಲ್ಡೋಟ ಅತಿಕ್ರಮಣ ಮಾಡಿರುವ ಬಸಾಪುರ ಕೆರೆಯನ್ನು ಹೈಕೋರ್ಟ್ ಆದೇಶದಂತೆ ಜಾನುವಾರು ನೀರು ಕುಡಿಯಲು ಕಾಂಪೌಂಡ್ ತೆರವುಗೊಳಿಸಬೇಕು, ತುಂಗಭದ್ರಾ ಜಲಾಶಯ ವಿಷಗೊಳಿಸಿದ ಕಾರ್ಖಾನೆಗಳನ್ನು ಸೀಜ್ ಮಾಡಬೇಕು, 22 ಹಳ್ಳಿಗಳು ಕಾರ್ಖಾನೆ ಮಾಲಿನ್ಯದಿಂದ ಬಾಧಿತವಾಗಿದ್ದು ಪುನರುಜ್ಜೀವನ ಮಾಡಲು ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು ಎಂದು ನಡೆದ ಅನಿರ್ದಿಷ್ಟಾವಧಿ ಧರಣಿಯನ್ನು ಉದ್ದೇಶಿಸಿ ಹಿರಿಯ ಸಾಹಿತಿ, ವೇದಿಕೆ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಇದುವರೆಗೆ ಹೋರಾಟಕ್ಕೆ ಪ್ರೇರಣೆ–ಯಾಗಿ ಸಾಹಿತಿಗಳು ಹಲವರು ಪರಿಸರ ಜಾಗೃತಿಯ, ಕಾರ್ಖಾನೆ ಮಾಲಿನ್ಯ, ಬಾಧಿತ ಹಳ್ಳಿಯ ಜನ, ಭವಿಷ್ಯ, ಆರೋಗ್ಯ, ಅಪಾಯದ



ಕುರಿತು ಕವನ ರಚಿಸಿ ವೇದಿಕೆಯಲ್ಲಿ ವಾಚನ ಮಾಡಿದ್ದಾರೆ. ಸೃಜನಶೀಲ ವಿಚಾರ, ಜೀವಪರ ಕಾಳಜಿಯ ಕೆಲಸ ಚಳವಳಿಯ ಶಕ್ತಿಯಾಗಿದೆ. ಈ ಸಾಹಿತ್ಯವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ವೇದಿಕೆ ನಿರ್ಣಯಿಸಿದೆ. ಹೊಸದಾಗಿ ಕವನ ಬರೆದು ವಾಚನ ಮಾಡುವವರು ಹೋರಾಟ ವೇದಿಕೆಗೆ ಬಂದು ಕವನ ವಾಚನ ಮಾಡಲು ವೇದಿಕೆ ಸ್ವಾಗತಿಸುತ್ತದೆ. ಅಂತಹ ಕವನಗಳನ್ನು ವೇದಿಕೆ ಮೂಲಕ ಕೃತಿ ರೂಪದಲ್ಲಿ ಪ್ರಕಟ ಮಾಡಲಾಗುವದು. ವೇದಿಕೆಗೆ ಬರಲು ಆಗದಿದ್ದರೆ ಅಂತವರು ಮೋ. ಸಂಖ್ಯೆ: 9844049205 ಸಂಪರ್ಕಿಸಿ ಅಥವಾ ನೇರವಾಗಿ ಅಲ್ಲಮಪ್ರಭು ಬೆಟ್ಟದೂರು, ಅಮರಚೇತನ, ಕಲ್ಯಾಣನಗರ, ಕಿನ್ನಾಳ ರಸ್ತೆ, ಕೊಪ್ಪಳ–583231 ಇಲ್ಲಿಗೆ ಅಂಚೆ ಮೂಲಕ ಕಳಿಸಬಹುದು ಎಂದರು.

ಧರಣಿಯಲ್ಲಿ ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ ಮತ್ತು ಮಂಜುನಾಥ ಜಿ. ಗೊಂಡಬಾಳ, ನಿವೃತ್ತ ಪ್ರಾಚಾರ್ಯ ಎಸ್.ಬಿ. ರಾಜೂರು, ಶಂಭುಲಿಂಗಪ್ಪ ಹರಗೇರಿ, ಪ್ರಕಾಶಕ ಡಿ.ಎಂ. ಬಡಿಗೇರ, ನಿಂಗಪ್ಪ ಜಿ. ಎಸ್. ಬೆಣಕಲ್, ಭರಮಾಜಿ ತಿಗರಿ, ಮೂಕಪ್ಪ ಮೇಸ್ತ್ರಿ ಬಸಾಪುರ, ಡಾ. ಬಸವರಾಜ ಪೂಜಾರ, ಎಂ.ಬಿ. ಕುರಿ ಬಿಕನಹಳ್ಳಿ, ರವಿ ಕಾಂತನವರ, ಸುರೇಶ ಹ್ಯಾಟಿ, ಈಶಪ್ಪ ದೊಡ್ಡಮನಿ, ನಾಗರಾಜ ಕುಷ್ಟಗಿ, ಬಸವರಾಜ ಕುರಿ, ಪಂಪಣ್ಣ ಚಿಂತಪಲ್ಲಿ, ಮಹಾದೇವಪ್ಪ ಮಾವಿನಮಡು, ಮಲ್ಲಪ್ಪ ಮಾದಿನೂರು, ವೈ. ಸತ್ಯನಾರಾಯಣ, ಬಸಪ್ಪ ಕಲಕೇರಿ, ವಿಜಯ ಮಹಾಂತೇಶ ಹಟ್ಟಿ, ಶಿವಪ್ಪ ಜಲ್ಲಿ, ಭೀಮಪ್ಪ ಯಲಬುರ್ಗಾ, ಸುಂಕಮ್ಮ ಪಡಚಿಂತಿ, ಗಂಗಮ್ಮ ದೊಡ್ಡಮನಿ ಇನ್ನಿತರರು ಇದ್ದರು.

# ಶಿವಶರಣ ಹಡಪದ ಅಪ್ಪಣ್ಣ ಮೂರ್ತಿ ಪ್ರತಿಷ್ಠಾಪನೆಗೆ ತಹಶೀಲ್ದಾರ್‌ಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

12ನೇ ಶತಮಾನದ ಶಿವಶರಣ ಹಡಪದಅಪ್ಪಣ್ಣನವರ ಮೂರ್ತಿಯನ್ನು ಬೀದರ್‌ಜಿಲ್ಲೆಯ ಬಸವನಕಲ್ಯಾಣದ ಅನುಭವಮಂಟಪದ ತ್ರಿಪುರಾಂತಕ ಕೆರೆ ಹತ್ತಿರ ಇರುವ ಹಡಪದಅಪ್ಪಣ್ಣನವರ ಅರಿವಿನಗವಿಯಲ್ಲಿ ಅನ್ಯಶರಣರ ಮೂರ್ತಿ ಪ್ರತಿಷ್ಠಾಪನೆಯನ್ನು ವಿರೋಧಿಸಿ, ಆ ಜಾಗದಲ್ಲಿ ಹಡಪದಅಪ್ಪಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪನೆಯನ್ನು ಮಾಡಬೇಕೆಂದು ಹಡಪದಅಪ್ಪಣ್ಣ ಕುರುಗೋಡು ತಾಲೂಕುಘಟಕದಿಂದ ಅಲವಾರು ಮಂದಿ ಮುಖಂಡರು ಕುರುಗೋಡು ತಹಶೀಲ್ದಾರ್ ಅವರಿಗೆ ಮನವಿಸಲ್ಲಿಸಿದರು. ಸರ್ಕಾರ ಅರಿವಿನ ಗವಿಯಲ್ಲಿ ಅನ್ಯಶರಣರ ಮೂರ್ತಿ ಪ್ರತಿಷ್ಠಾಪಿಸಿದರೆ ಹಡಪದ ಅಪ್ಪಣ್ಣ ಸಂಘದಿಂದ ಹೋರಾಟ ಮಾಡಲಾಗುವುದು ಎಂದು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು. ಮನವಿಯನ್ನು ಸ್ವೀಕರಿಸಿದ ಕುರುಗೋಡು ತಹಶೀಲ್ದಾರ್ ನರಸಪ್ಪ ಅವರು ಕೂಡಲೇ ಮೇಲಾಧಿಕಾರಿಗಳಿಗೆ ಕಳುಹಿಸುವುದಾಗಿ ಭರವಸೆ ನೀಡಿದರು.

ಮನವಿಯಲ್ಲಿ ಹಡಪದಅಪ್ಪಣ್ಣ ಸಂಘದ ಕುರುಗೋಡು ತಾಲೂಕುಅಧ್ಯಕ್ಷ ಹೆಚ್. ಮಂಜುನಾಥ, ರಾಜ್ಯಸಂಘಟನಾಕಾರ್ಯದರ್ಶಿ ಶಶಿಕುಮಾರ್, ಜಿಲ್ಲಾ ಸಂಚಾಲಕ ಹೆಚ್.ಅಂಬರೇಷ್, ಜಿಲ್ಲಾಸಂಘಟನಾಕಾರ್ಯದರ್ಶಿ ಹೆಚ್.ನಾಗರಾಜ, ಸಂಘದ ಹೆಚ್.ಹೆಚ್.ಶೇಖರಪ್ಪ, ಹೆಚ್.ಪೊಂಪಾಪತಿ, ಹೆಚ್.ನಾಗರಾಜ, ರಾಜಶೇಖರ, ದೊಡ್ಡಬಸಪ್ಪ, ಹನುಮೇಶ, ಮಂಜುನಾಥ, ಸಿದ್ದಪ್ಪ, ಮರಿಸ್ವಾಮಿ ಸೇರಿದಂತೆ ಇತರೆ ಕುರುಗೋಡು ಹಡಪದಅಪ್ಪಣ್ಣ ಸಂಘದ ಇತರೆ ಮುಖಂಡರು ಇದ್ದರು.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ**

ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ ಅವರು ಏಪ್ರಿಲ್ 9 ರಂದು ಗುರುವಾರ ಬೆಳಿಗ್ಗೆ 10 ಗಂಟೆಗೆ ಕಲಬುರಗಿಯಿಂದ ರಸ್ತೆ ಮೂಲಕ ಸೇಡಂಗೆ ಪ್ರಯಾಣಿಸುವರು.

ನಂತರ ಅಂದು ಬೆಳಿಗ್ಗೆ 11 ಗಂಟೆಗೆ ಸೇಡಂ ತಾಲೂಕು ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಸೇಡಂ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಚರ್ಚಿಸಲು ಸಭೆ ನಡೆಸುವರು. ನಂತರ ಮಧ್ಯಾಹ್ನ 2.30 ಗಂಟೆಗೆ ಸೇಡಂದಿಂದ ರಸ್ತೆ ಮೂಲಕ ಹೈದ್ರಾಬಾದಿಗೆ ಪ್ರಯಾಣಿಸುವರು.

# 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಅವಕಾಶ

• **ಮಲ್ಲಮ್ಮ ನುಡಿ ವಾರ್ತೆ, ಕಾರವಾರ**

ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶದಂತೆ ರಾಜ್ಯ ಮಟ್ಟದ ಸಮಿತಿಯಿಂದ ಮಾನ್ಯತೆ ನೀಡಲಾದ ಪ್ರತಿಷ್ಠಿತ ಶಾಲೆಗಳಿಗೆ 6ನೇ ತರಗತಿಗೆ ಪ್ರವೇಶ ನೀಡಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಏ.15 ರಿಂದ ಮೇ.4 ರೊಳಗೆ ಆಯಾ ತಾಲೂಕಿನ ಸಂಬಂಧಪಟ್ಟ ಸಹಾಯಕ ನಿರ್ದೇಶಕರು ಗ್ರೇಡ್-1&2 ಸಮಾಜ ಕಲ್ಯಾಣ ಇಲಾಖೆ ರವರಿಂದ ಅರ್ಜಿ ಪಡೆದು ಭರ್ತಿ ಮಾಡಿ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಬಹುದು. ಷರತ್ತುಗಳು: ವಿದ್ಯಾರ್ಥಿಯು ಕರ್ನಾಟಕ ರಾಜ್ಯದವರಾಗಿರಬೇಕು, ವಿದ್ಯಾರ್ಥಿಯು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು (ಕಡ್ಡಾಯವಾಗಿ ಆರ್.ಡಿ. ಸಂಖ್ಯೆಯ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರವನ್ನು ಹೊಂದಿರಬೇಕು), 2025-26ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ಶೇಕಡಾ 60% ಅಂಕ ಪಡೆದಿರಬೇಕು (5ನೇ ತರಗತಿಯ ಅಂಕಪಟ್ಟಿ ಕಡ್ಡಾಯವಾಗಿ ಎಸ್.ಎ.ಟಿ.ಎಸ್.ನಲ್ಲಿ ನಮೂದು ಮಾಡಿದ ದೃಢೀಕೃತ ಪ್ರಗತಿಯನ್ನು ಲಗತ್ತಿಸಬೇಕು). ವಿದ್ಯಾರ್ಥಿಯ ಕುಟುಂಬದ ಆದಾಯ ಮಿತಿ 2.50 ಲಕ್ಷದೊಳಗಿರಬೇಕು. (ತಹಶೀಲ್ದಾರಿಂದ ಪಡೆದ ಇತ್ತೀಚಿನ ಆದಾಯ ಪ್ರಮಾಣ ಪತ್ರದ ದೃಢೀಕರಣ ಪ್ರತಿ ಲಗತ್ತಿಸುವುದು), ಒಂದು ಕುಟುಂಬದಲ್ಲಿ ಎರಡು ಮಕ್ಕಳಿಗೆ ಮಾತ್ರ ಅವಕಾಶವಿರುತ್ತದೆ.

# ಅಕಸ್ಮಿಕ ಬೆಂಕಿ ಅಧಿಕಾರಿಗಳ ಬೇಟಿ ಪರಿಹಾರಕ್ಕೆ ರೈತರ ಒತ್ತಾಯ



• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

ಸಮೀಪದ ಕಲ್ಲುಕಂಬ ಗ್ರಾಮದಲ್ಲಿ ಪ್ರಗತಿಪರ ರೈತ ಶ್ರೀಮತಿನಿರ್ಮಲಚೆನ್ನಬಸಪ್ಪ ಎಂಬ ಪ್ರಗತಿಪರ ರೈತರಲ್ಲಿ ಬೆಳೆಯಲಾಗಿದ್ದ ಹ್ಯಾಪಿಲ್‌ಬರ್ ತಳಿಯ ಬಾರೆಹಣ್ಣು ತೋಟವು ಆಕಸ್ಮಿಕ ಬೆಂಕಿಯಿಂದ ಸುಟ್ಟುಕರಕಲಾಗಿದ್ದು ರೈತರು ಅಂತಕ್ಕೀಡಾಗಿದ್ದ ಹಿನ್ನಲೆಯಲ್ಲಿ ತೋಟಗಾರಿಗೆ ಇಲಾಖೆಯ ಜಂಟಿನಿರ್ದೇಶಕರು, ಹಾಗು ತೋಟಗಾರಿಕೆ ಇಲಾಖೆಯ ಸಹಾಯಕಹಿರಿಯ ನಿರ್ದೇಶಕರು, ಹಾಗು ಗ್ರಾಮಲೆಕ್ಕಾಧಿಕಾರಿಗಳು ಬೇಟಿ ನೀಡಿ ಪರಿಶೀಲಿಸಿದರು.

ನಂತರ ತೋಟಗಾರಿಕೆ ಇಲಾಖೆಯ ಜಂಟಿನಿರ್ದೇಶಕರಾದ ಶಶಿಕಾಂತಕೋಟಿಮನೆ, ಹಾಗು ತೋಟಗಾರಿಕೆಇಲಾಖೆಯ ಹಿರಿಯ ಸಹಾಯಕನಿರ್ದೇಶಕ ಶಂಕರ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಆಕಸ್ಮಿಕ ಬೆಂಕಿಯಿಂದ ಬಾರೆಹಣ್ಣು ತೋಟವು ಸುಟ್ಟಿದೆ. ರೈತರು ಯಾವುದೇ ಕಾರಣಕ್ಕೂ ದೃತಿಗೆಡಬಾರದು ಎಂದು ಸಾಂತ್ವನಹೇಳಿದರು.

ಬಾರೆಹಣ್ಣುತೋಟವನ್ನು ಸಾಗುವಳಿ ಮಾಡಿದ ರೈತ ಸುಧಾಕರ್ ಮಾತನಾಡಿ, ಬಿರುಬಿಸಿಲಿನಲ್ಲಿ ಗಾಳಿ ಇದ್ದು, 2 ಎಕರೆ ಪ್ರದೇಶದ ಜಮೀನಿನಲ್ಲಿ ನಮ್ಮ ಹೊಲದ ಮೇಲಿಂದ ಆಕಸ್ಮಿಕ ಬೆಂಕಿಯಿಂದ ಹ್ಯಾಪಲ್‌ಬರ್ ತಳಿಯ ಸುಮಾರು 850 ಬಾರೆಹಣ್ಣುಗಿಡಗಳು ಸುಟ್ಟಿವೆ. 'ಕೈಗೆ ಬಂದತುತ್ತು ಬಾಯಿಗೆ ಬರಲಿಲ್ಲ' ಎಂಬಂತೆ ಆಗಿದೆ ನಮ್ಮ ಪರಿಸ್ಥಿತಿ. ಜೊತೆಗೆ 2 ಮೋಟರ್, ಮತ್ತು ಹನಿನೀರಾವರಿಯೋಜನೆಯ ಸಣ್ಣವೇರ್‌ಗಳು ಸಹ ಸುಟ್ಟುಕರಕಲಾಗಿವೆ ಎಂದು ನೋವಿನಿಂದ ನುಡಿದರು. ಇದರಿಂದ ಲಕ್ಷಾಂತರ ರೂಗಳಷ್ಟು ನಷ್ಟಸಂಬವಿಸಿದೆ ಎಂದು ಕಳವಳವ್ಯಕ್ತಪಡಿಸಿದರು. ಆಕಸ್ಮಿಕ ಬೆಂಕಿ ಹಾರಿಸಲು ಕುರುಗೋಡು ಅಗ್ನಿಶ್ಯಾಮಕಠಾಣೆಯ ಸಿಬ್ಬಂದಿವರ್ಗದವರು ಬಂದು ಹೆಚ್ಚಿನ ಅನಾಹುತವನ್ನು ತಪ್ಪಿಸಿದ್ದಾರೆ.

ಪರಿಹಾರಕ್ಕೆ ಒತ್ತಾಯ ;

ಸುಮಾರು 2 ಎಕರೆಪ್ರದೇಶದಲ್ಲಿ ಬೆಳೆಯಲಾದ ಹ್ಯಾಪಲ್‌ಬರ್ ತಳಿಯ ಬಾರೆಹಣ್ಣುತೋಟವು ಆಕಸ್ಮಿಕ ಬೆಂಕಿಯಿಂದ ಸುಟ್ಟುಕರಕಲಾಗಿದ್ದು, ಲಕ್ಷಾಂತರ ರೂಗಳಷ್ಟು ನಷ್ಟಉಂಟಾಗಿದೆ. ಆದ್ದರಿಂದ ಸಂಬಂದಪಟ್ಟ ಇಲಾಖೆಯ ಅಧಿಕಾರಿಗಳು ಹಾಗು ಕ್ಷೇತ್ರದ ಶಾಸಕರು ನೊಂದ ರೈತರಿಗೆ ಪರಿಹಾರ ನೀಡಬೇಕೆಂದು ಗ್ರಾಮದ ರೈತ ಮುಖಂಡ ಹೆಚ್.ಬಸಪ್ಪ, ನಿರ್ಮಲಮ್ಮಚೆನ್ನಬಸಪ್ಪ, ಸುಮಲತಸುಧಾಕರ್, ಗಾದಿಲಿಂಗಪ್ಪ, ಗುರುವ

# ಕೌಟುಂಬಿಕ ಸಂಕಷ್ಟದಲ್ಲಿರುವ ಮದ್ಯ ವ್ಯಸನಿಗಳ ನೆರವಿಗೆ ಒತ್ತು

• **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ**



ಮದ್ಯಪಾನವು ಕೇವಲ ವ್ಯಕ್ತಿಯ ಆರೋಗ್ಯವನ್ನು ಹಾಳುಗೆಡವುದಲ್ಲದೆ, ಇಡೀ ಕುಟುಂಬದ ನೆಮ್ಮದಿಯನ್ನೇ ಕಸಿದುಕೊಳ್ಳುತ್ತದೆ. ಮದ್ಯದ ವ್ಯಸನಕ್ಕೆ ದಾಸರಾಗುವ ಬದಲು, ಆ ಅಭ್ಯಾಸದಿಂದ ಹೊರಬಂದು ಪತ್ನಿ-ಮಕ್ಕಳೊಂದಿಗೆ ಗೌರವಯುತ, ಆರೋಗ್ಯಕರ ಜೀವನ ನಡೆಸಲು ಸಂಕಲ್ಪ ಮಾಡಿ ಎಂದು ರಾಜ್ಯ ಪೊಲೀಸ್ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕ, ಡಿ.ಜಿ.ಪಿ. ಅರುಣ ಚಕ್ರವರ್ತಿ ಅವರು ಹೇಳಿದರು.

ಬುಧವಾರ ಇಲ್ಲಿನ ಪೊಲೀಸ್ ಆಯುಕ್ತಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮದ್ಯಪಾನ ಒಂದು ಸಾಮಾಜಿಕ ಕಳಂಕ ಅಥವಾ ಶಿಸ್ತು ಉಲ್ಲಂಘನೆಯಾಗಿ ನೋಡುವ ಬದಲು, ಅದನ್ನು ಗುಣಪಡಿಸಬಹುದಾದ ಒಂದು 'ಕಾಯಿಲೆ' ಎಂದು ಪರಿಗಣಿಸುವುದು ಅಗತ್ಯವಾಗಿದೆ.

1956ರಲ್ಲೇ ವಿಶ್ವ ಆರೋಗ್ಯ ಸಂಸ್ಥೆಯು (ಘಊಔ) ಮದ್ಯಪಾನ ವ್ಯಸನವನ್ನು ಒಂದು ಕಾಯಿಲೆ ಎಂದು ವರ್ಗೀಕರಿಸಿದೆ ಎಂದು ಹೇಳಿದರು.

ಮಧುಮೇಹ ಅಥವಾ ರಕ್ತದೊತ್ತಡ ಇರುವವರನ್ನು ಸಮಾಜ ಹೇಗೆ ಕೀಳಾಗಿ ನೋಡುವುದಿಲ್ಲವೋ, ಹಾಗೆಯೇ ಮದ್ಯವ್ಯಸನಿಗಳನ್ನು ಬಹಿಷ್ಕರಿಸಬಾರದು. ಅವರಿಗೆ ಸರಿಯಾದ ವೈದ್ಯಕೀಯ ಚಿಕಿತ್ಸೆ ಹಾಗೂ ಮಾನಸಿಕ ಸ್ಥೈರ್ಯ ತುಂಬುವ ಮೂಲಕ ಈ ಸುಳಿಯಿಂದ ಹೊರತರುವ ಪ್ರಯತ್ನ ಮಾಡಬೇಕು. ಮದ್ಯಪಾನ ಆರೋಗ್ಯಕ್ಕೆ ಎಂದಿಗೂ ಒಳಿತಲ್ಲ ಎಂದು ಎಚ್ಚರಿಸಿದರು.

ಪೊಲೀಸ್ ಇಲಾಖೆಯ ಕರ್ತವ್ಯದ ಒತ್ತಡದ ಬಗ್ಗೆ ಮಾತನಾಡಿದ ಅವರು, ಸಿಬ್ಬಂದಿಗಳ ಮಾನಸಿಕ ಆರೋಗ್ಯ ಕಾಪಾಡಲು ಇಲಾಖೆಯಲ್ಲಿ 'ವೆಲ್ ಬೀಯಿಂಗ್ ಆಫೀಸರ್ಸ್' (Well-being Officers) ಎಂಬ ಹೊಸ

ಪರಿಕಲ್ಪನೆಯನ್ನು ತರಲಾಗಿದೆ. ಅಧಿಕಾರಿಗಳು ಒತ್ತಡದ ಕಾರಣಕ್ಕೆ ಮದ್ಯದ ದಾಸರಾಗಬಾರದು. ಅದಕ್ಕಾಗಿ ಕೌನ್ಸೆಲಿಂಗ್ ಮತ್ತು ಮಾರ್ಗದರ್ಶನ ನೀಡಲಾಗುತ್ತಿದೆ. ಪ್ರತಿಯೊಬ್ಬ ಸಿಬ್ಬಂದಿಯೂ ತನ್ನ ಕುಟುಂಬದ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಆಲ್ಕೋಹಾಲಿಕ್ಸ್ ಅನಾಲಿಮಸ್ ವಿಶ್ವದ 168ಕ್ಕೂ ಹೆಚ್ಚು ದೇಶಗಳಲ್ಲಿ ಸಕ್ರಿಯವಾಗಿರುವ 'ಆಲ್ಕೋಹಾಲಿಕ್ಸ್ ಅನಾಲಿಮಸ್' ಸಂಸ್ಥೆಯ ಕಾರ್ಯವೈಖರಿಯನ್ನು ವಿವರಿಸಿದ ಅವರು, ಇದೊಂದು ವಿಶಿಷ್ಟ ಸ್ವಯಂ ಸೇವಾ ಕಾರ್ಯಕ್ರಮ. ಇಲ್ಲಿ ಒಬ್ಬ


ಮದ್ಯವ್ಯಸನಿಯು ತನ್ನಂತೆಯೇ ಸಂಕಷ್ಟದಲ್ಲಿರುವ ಇನ್ನೊಬ್ಬ ವ್ಯಸನಿಗೆ ಈ ಅಭ್ಯಾಸದಿಂದ ಮುಕ್ತಿ ಪಡೆಯಲು ಬೆಂಬಲ ನೀಡುತ್ತಾನೆ. ಪರಸ್ಪರರ ಅನುಭವಗಳ ಹಂಚಿಕೆಯಿಂದ ಅನೇಕರು ಈಗಾಗಲೇ ಮದ್ಯಪಾನ ತ್ಯಜಿಸಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಇದು ಸಂಪೂರ್ಣ ಉಚಿತ ಮತ್ತು ಗೌಪ್ಯವಾಗಿ ನಡೆಯುವ ಸೇವೆಯಾಗಿದೆ ಎಂದರು.

ಮದ್ಯಪಾನದಂತಹ ವ್ಯಸನಗಳಿಂದ ಮುಕ್ತರಾಗಿ ಸಮಾಜದಲ್ಲಿ ಘನತೆಯಿಂದ ಬದುಕುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಅರುಣ್ ಚಕ್ರವರ್ತಿ ತಿಳಿಸಿದರು.

ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಈಶಾನ್ಯ ವಲಯ ಪೊಲೀಸ್ ಉಪಮಹಾನಿರೀಕ್ಷಕ ಶಾಂತನು ಸಿನ್ಹಾ, ಇದ್ದರು.

# ಮಕ್ಕಳ ಬಗ್ಗೆ ಜಾಗೃತೆ ವಹಿಸುವುದು ಪೋಷಕರ ಕರ್ತವ್ಯ: ನಾಯ್ಕ

• **ಮಲ್ಲಮ್ಮನುಡಿವಾರ್ತೆ, ಕುಕನೂರ**



ಶಾಲಾ ಕಾಲೇಜುಗಳಿಗೆ ಬೇಸಿಗೆ ರಜೆ ಆರಂಭವಾಗುತ್ತಿದ್ದಂತೆಯೇ ಮಕ್ಕಳ ಸುರಕ್ಷತೆ ಕುರಿತಾಗಿ ಕುಕನೂರು ಪೊಲೀಸ್ ಠಾಣೆ ಪಿಎಸ್‌ಐ ಎಸ್.ಪಿ ನಾಯಕ ಜಾಗೃತಿಯನ್ನು ನೀಡುತ್ತಾ ಇತ್ತೀಚಿನ ದಿನಗಳಲ್ಲಿ ನಿರ್ಲಕ್ಷ್ಯದಿಂದಾಗಿ ಸಂಭವಿಸುತ್ತಿರುವ ದುರ್ಘಟನೆಗಳ ಹಿನ್ನೆಲೆ ಪೋಷಕರಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ಪಾಲಿಸುವಂತೆ ಮಾಹಿತಿ ನೀಡಿದರು.


ಪೊಲೀಸ ಇಲಾಖೆಯ ಪ್ರಕಾರ ಚಿಕ್ಕ ಮಕ್ಕಳು ಆಟವಾಡುವ ವೇಳೆ ಅನಿಯಂತ್ರಿತವಾಗಿ ಸಂಚರಿಸುವ ಪ್ರವೃತ್ತಿ ಹೆಚ್ಚಾಗಿದ್ದು, ಇದು ಅಪಾಯಕರ ಪರಿಸ್ಥಿತಿಗಳಿಗೆ ಕಾರಣವಾಗುತ್ತಿದೆ. ವಿಶೇಷವಾಗಿ ಕೆರೆ ಕಟ್ಟೆಗಳು, ಕೃಷಿ ಹೊಂಡಗಳು ಮತ್ತು ನೀರು ನಿಂತಿರುವ ಪ್ರದೇಶಗಳು ಮಕ್ಕಳಿಗೆ ಜೀವಾಪಾಯಕಾರಿ ಯಾಗಬಹುದು ಆದ್ದರಿಂದ ಪೋಷಕರು ತಮ್ಮ ಮಕ್ಕಳ ಚಲನ-ವಲನಗಳ ಮೇಲೆ ಕಟ್ಟುನಿಟ್ಟಿನ ಗಮನ ಹರಿಸಬೇಕು. ನಿರ್ಲಕ್ಷ್ಯದಿಂದ ಮಕ್ಕಳನ್ನು ನೀರಿನ ಪ್ರದೇಶಗಳ ಬಳಿ ಬಿಡುವುದು ಜೀವಕ್ಕೆ ಅಪಾಯವನ್ನುಂಟುಮಾಡುತ್ತದೆ" ಎಂದು ಹೇಳಿದ್ದಾರೆ.

ಯಾವುದೇ ಕಾರಣಕ್ಕೂ ಪೋಷಕರು ತಮ್ಮ ಮಕ್ಕಳನ್ನು ಏಕಾಂಗಿಯಾಗಿ ಹೊರಗೆ ಬಿಡಬಾರದು, ಅಪಾಯಕರ ಪ್ರದೇಶಗಳ ಬಳಿ ಹೋಗದಂತೆ ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು ಮತ್ತು ಅವಶ್ಯಕವಾದಲ್ಲಿ ಹಿರಿಯರ ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಈ ಸೂಚನೆಗಳನ್ನು ಲಘುವಾಗಿ ತೆಗೆದುಕೊಳ್ಳುವ ಪೋಷಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಕ್ಕೂ ಪೊಲೀಸ್ ಇಲಾಖೆ ಹಿಂದೇಟು ಹಾಕುವುದಿಲ್ಲ ಅದರಿಂದ ಪೋಷಕರು ತಮ್ಮ ಮಕ್ಕಳ ಅಮೂಲ್ಯವಾದ ಜೀವದ ಕಡೆಗೆ ಗಮನಹರಿಸಬೇಕು ಎಂದು ತಿಳಿಸಿರುತ್ತಾರೆ.

# ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲಾಗುವುದು: ಶರಣಬಸಪ್ಪ ದರ್ಶನಾಪುರ

• **ಮಲ್ಲಮ್ಮ ನುಡಿ ವಾರ್ತೆ , ಕಲಬುರಗಿ**



ಎಫ್‌ಕೆಸಿಸಿಐ ಮತ್ತು ಕಾಸ್ಸಿಯಾ ಸಂಸ್ಥೆಗಳ ಅನಿಸಿಕೆಯಂತೆ ಕರ್ನಾಟಕದಲ್ಲಿ ಪ್ರತ್ಯೇಕ ಒಖಒಇ (ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ) ಸಚಿವಾಲಯ ಸ್ಥಾಪಿಸುವ ಬಗ್ಗೆ ಬಜೆಟ್‌ನಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಘೋಷಣೆ ಮಾಡಿದ್ದಾರೆ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರಾದ ಶರಣಬಸಪ್ಪ ದರ್ಶನಾಪುರ ಅವರು ಹೇಳಿದರು.

ಬುಧವಾರ ನಗರದ ಸೂಪರ್ ಮಾರ್ಕೆಟ್ ಪ್ರದೇಶದ ಕೆ.ಕೆ.ಸಿ.ಸಿ.ಐ ಎಸ್.ಆರ್. ರಘೋಜಿ ಸಭಾಂಗಣದಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಪ್ರತ್ಯೇಕ ಕೈಗಾರಿಕಾ ನೀತಿ ರೂಪಿಸುವಗಾಗಿ ಕಲಬುರಗಿ ವಿಭಾಗ ಮಟದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಪಾಲುದಾರರ ಸಮಾಲೋಚನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ನಮ್ಮ ಸರ್ಕಾರದ ಉದ್ದೇಶ ಕೇವಲ ಬೆಂಗಳೂರಿಗೆ ಸೀಮಿತವಾಗಿರದೆ, ಕಲ್ಯಾಣ ಕರ್ನಾಟಕ, ಮುಂಬೈ ಕರ್ನಾಟಕ ಮತ್ತು ಹುಬ್ಬಳ್ಳಿ-ಧಾರವಾಡ ಭಾಗಗಳಲ್ಲಿಯೂ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದಾಗಿದೆ. ಈ ಹಿಂದೆ ಉತ್ತರ ಕರ್ನಾಟಕದಲ್ಲಿ ನೀರಿನ ಸಮಸ್ಯೆ ಇತ್ತು, ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ನಮ್ಮ ಭಾಗದ ಉದ್ದಿಮೆದಾರರು ಬೆಂಗಳೂರಿಗೆ ಹೋಗಿ ಬಂಡವಾಳ ಹೂಡುವ ಬದಲು ಇಲ್ಲೇ ಕೈಗಾರಿಕೆಗಳನ್ನು ಸ್ಥಾಪಿಸುವಂತಾಗಬೇಕು ಎಂದು ತಿಳಿಸಿದರು.

ಹೊಸ ಕೈಗಾರಿಕಾ ನೀತಿಯಲ್ಲಿ ಈ ಭಾಗದ ಜಿಲ್ಲೆಗಳಿಗೆ ಮತ್ತು ನಂಜುಂಡಪ್ಪ ವರದಿಯ ಅನ್ವಯ ಹಿಂದುಳಿದ ತಾಲೂಕುಗಳಿಗೆ ಹೆಚ್ಚಿನ ಸೌಲತ್ತುಗಳನ್ನು ನೀಡುವತ್ತ ಸರ್ಕಾರ ಗಮನ ಹರಿಸಿದೆ. ನಿಮ್ಮೆಲ್ಲರ ಸಲಹೆ ಮತ್ತು ಸೂಚನೆಗಳನ್ನು ಪಡೆದು ಶೀಘ್ರದಲ್ಲೇ ಹೊಸ ಒಖಒಇ ಪಾಲಿಸಿಯನ್ನು ಜಾರಿಗೆ ತರಲಾಗುವುದು ಎಂದರು.

2032ರ ವೇಳೆಗೆ ಕರ್ನಾಟಕವನ್ನು 1 ಟ್ರಿಲಿಯನ್ ಡಾಲರ್ ಆರ್ಥಿಕ ಶಕ್ತಿಯನ್ನಾಗಿ ರೂಪಿಸುವ ಬೃಹತ್ ಗುರಿಯೊಂದಿಗೆ ರಾಜ್ಯ ಸರ್ಕಾರವು ಹೊಸ ಒಖಒಇ (ಸಣ್ಣ, ಸೂಕ್ಷ್ಮ ಮತ್ತು ಮಧ್ಯಮ ಉದ್ದಿಮೆಗಳು) ನೀತಿ ಜಾರಿಗೆ ಸಜ್ಜಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ಮ ಅವರು ಮಾತನಾಡಿ, ಸ್ಥಳೀಯ ಮಟ್ಟದ ಕೈಗಾರಿಕಾ ಸಿದ್ಧತೆಗಳ ಬಗ್ಗೆ ಬೆಳಕು ಚೆಲ್ಲಿದರು. ಭೂಸ್ವಾಧೀನ ಪ್ರಕ್ರಿಯೆ ಕಲಬುರಗಿಯ 3ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ 595 ಎಕರೆ ಭೂಮಿ ಹಂಚಿಕೆಗೆ ಸಿದ್ಧವಾಗಿದೆ.

ಮಹಿಳಾ ಸಬಲೀಕರಣ: ಜಿಲ್ಲೆಯ ರೊಟ್ಟಿ ತಯಾರಿಕಾ ಘಟಕ'ದ ಯಶಸ್ಸನ್ನು ಉಲ್ಲೇಖಿಸಿದ ಅವರು, ಸಾವಿರಾರು ಮಹಿಳೆಯರು ಆರ್ಥಿಕ ಸ್ವಾವಲಂಬನೆ ಸಾಧಿಸಿರುವುದು ರಾಜ್ಯಕ್ಕೆ ಮಾದರಿ ಎಂದರು.

ಉದ್ಯಮಿಗಳಿಗೆ ಬೆಂಬಲ (ಇಚಿಟಿಜುಬಟಜ-ಬಟಿರ): ಹೊಸ ಉದ್ಯಮಿಗಳಿಗೆ ಒಂದು ವರ್ಷದವರೆಗೆ ಮಾರ್ಗದರ್ಶನ, ಬ್ರ್ಯಾಂಡಿಂಗ್ ಮತ್ತು ಆನ್‌ಲೈನ್ ಮಾರ್ಕೆಟಿಂಗ್ ತರಬೇತಿ ನೀಡುವ ಮೂಲಕ ಜಾಗತಿಕ ಸ್ಪರ್ಧೆಗೆ ಸಿದ್ಧಪಡಿಸಲಾಗುವುದು.

ಈ ನೂತನ ನೀತಿಯು ಟಿಯರ್-2 ಮತ್ತು ಟಿಯರ್-3 ನಗರಗಳ ಅಭಿವೃದ್ಧಿ, ಮಹಿಳಾ ಮತ್ತು ಯುವ ಉದ್ಯಮಿಗಳಿಗೆ ಆದ್ಯತೆ, ಹಾಗೂ ಸರಳೀಕೃತ ನಿಯಂತ್ರಣ ಪ್ರಕ್ರಿಯೆಗಳ ಮೇಲೆ ಗಮನ ಹರಿಸಿದೆ. ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಮತ್ತು ಸಬ್ಸಿಡಿಗಳ ಕುರಿತು ಪಾಲುದಾರರಿಂದ ಸಲಹೆಗಳನ್ನು ಪಡೆಯಲಾಗಿದ್ದು, ಕರ್ನಾಟಕವನ್ನು ದೇಶದ ಅತ್ಯಂತ ಒಖಒಇ ಸ್ನೇಹಿ ರಾಜ್ಯವನ್ನಾಗಿ ಮಾಡುವುದು ಸರ್ಕಾರದ ಅಂತಿಮ ಗುರಿಯಾಗಿದೆ ಎಂದು ಹೇಳಿದರು.

ಅಪರ ನಿರ್ದೇಶಕರು (ಎಂ.ಎಸ್.ಎಂ.ಇ. & ಪಿಪಿ) ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ ಬೆಂಗಳೂರು. ಮಾಣಿಕ್ ವಿ ರಘೋಜಿ, (ಎಂಎ□□ಎಂಇ ಮತ್ತು ಪಿಪಿ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಅಪರ ನಿರ್ದೇಶಕರು ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು.

ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಲಯದ ಅಪಾರ ನಿರ್ದೇಶಕ ವಿ ಎಸ್ ಹೊನ್ನ ಮನೆ ,ಮುದ್ದು ಕುಮಾರ್, ಅರುಣ್ ಕುಮಾರ್, ಕಲ್ಯಾಣ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಕಾರ್ಯದರ್ಶಿ ಶಿವರಾಜ್ ಇಂಗಿನಶೆಟ್ಟಿ, ಕಲ್ಯಾಣ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಮಾಜಿ ಅಧ್ಯಕ್ಷ ಶಶಿಕಾಂತ್ ಬಿ ಪಾಟೀಲ್, (ಕೈಗಾರಿಕೆ ಮತ್ತು ಎಂಎ□□ಎಂಇ), ಕಲ್ಯಾಣ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಅಧ್ಯಕ್ಷ ಅಭಿಜೀತ್ ಆರ್ ಪಡಶೆಟ್ಟಿ, ವಾಣಿಜ್ಯ ಮಂಡಳಿ ರಾಯಚೂರು ಜಂಬಣ್ಣ ಯಕಾಸ್ಲಪುರ, ಕಾರ್ಯದರ್ಶಿ, ಯಾದಗಿರಿ ಉಪಾದ್ಯಕ್ಷ ವಿಷ್ಣುವ್ಯಾಸ, ಜಿಲ್ಲಾ ಕೈಗಾರಿಕ ಇಲಾಖೆಯ ಜಂಟಿ ನಿರ್ದೇಶಕ ಅಬ್ದುಲ್ ಅಜೀಮ್ ಸೇರಿದಂತೆ ವಿಭಾಗಮಟ್ಟದ ಅಧಿಕಾರಿಗಳು ಸಂಘ ಸಂಸ್ಥೆಯ ಪದಾಧಿಕಾರಿಗಳು ಇತರರು ಭಾಗವಹಿಸಿದ್ದರು.

# ರಾಜ್ಯದಲ್ಲಿ ಆಟೋ ಗ್ಯಾಸ್ ಕೊರತೆ ವದಂತಿಗಳಿಗೆ ಕಿವಿಗೊಡಬೇಡಿ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ರಾಜ್ಯದ ವಿವಿಧ ಆಟೋ ಗ್ಯಾಸ್ ಬಂಕ್‌ಗಳಲ್ಲಿ ಅನಿಲದ ದಾಸ್ತಾನು ಕೊರತೆಯಿದೆ ಎಂಬ ತಪ್ಪು ಮಾಹಿತಿಯ ಆಧಾರದ ಮೇಲೆ, ಕಳೆದ ಕೆಲವು ದಿನಗಳಿಂದ ಆಟೋ ಮಾಲೀಕರು ಮತ್ತು ಚಾಲಕರು ಬಂಕ್‌ಗಳ ಮುಂದೆ ಸುದೀರ್ಘ ಸರತಿ ಸಾಲಿನಲ್ಲಿ ನಿಲ್ಲುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳು ಕೇವಲ ವದಂತಿಗಳಾಗಿದ್ದು, ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಸ್ಪಷ್ಟಪಡಿಸಿದೆ.

ಕೆಲವು ಖಾಸಗಿ ಆಟೋ ಗ್ಯಾಸ್ ಸರಬರಾಜು ಸಂಸ್ಥೆಗಳಲ್ಲಿ ಮಾತ್ರ ಅಲ್ಪಮಟ್ಟಿನ ಕೊರತೆ ಕಂಡುಬಂದಿದ್ದು, ಇದನ್ನು ಸರಿಪಡಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಖಔಅ (ಇಂಡಿಯನ್ ಆಯಿಲ್), ಃಕಅ (ಭಾರತ್ ಪೆಟ್ರೋಲಿಯಂ) ಮತ್ತು ಊಕಅ (ಹಿಂದೂಸ್ತಾನ್ ಪೆಟ್ರೋಲಿಯಂ) ಮೂಲಕ ಹೆಚ್ಚಿನ ಪ್ರಮಾಣದ ಅನಿಲವನ್ನು ಪೂರೈಕೆ ಮಾಡಲಾಗುತ್ತಿದೆ.

ಹಿಂದೆ ಈ ಮೂರು ಸಂಸ್ಥೆಗಳು ಸರಾಸರಿ 56.67 ಮೆಟ್ರಿಕ್ ಟನ್ ಆಟೋ ಗ್ಯಾಸ್ ಅನ್ನು ಸರಬರಾಜು ಮಾಡುತ್ತಿದ್ದವು. ಆದರೆ ಪ್ರಸ್ತುತ ಬೇಡಿಕೆಯನ್ನು ಪೂರೈಸಲು ಸರಬರಾಜು ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಾಗಿದ್ದು, ಸದ್ಯ ಪ್ರತಿದಿನ ಸರಾಸರಿ 83.58 ಮೆಟ್ರಿಕ್ ಟನ್ ಗ್ಯಾಸ್ ಅನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೂರೈಸಲಾಗುತ್ತಿದೆ.

ಕಳೆದ ಐದು ದಿನಗಳ ಪೂರೈಕೆ ವಿವರ: ಕಳೆದ ಏಪ್ರಿಲ್ 2 ರಿಂದ ಏಪ್ರಿಲ್ 6 ರವರೆಗಿನ ಅಂಕಿಅಂಶಗಳನ್ನು ಗಮನಿಸಿದರೆ, ಪೂರೈಕೆಯಲ್ಲಿ ಸ್ಥಿರತೆ ಇರುವುದು ಕಂಡುಬರುತ್ತದೆ. ಏಪ್ರಿಲ್ 2 ರಂದು 87.78 ಮೆಟ್ರಿಕ್ ಟನ್, ಏಪ್ರಿಲ್ 3 ರಂದು 86.05 ಮೆಟ್ರಿಕ್ ಟನ್, ಏಪ್ರಿಲ್ 4 ರಂದು 84.80 ಮೆಟ್ರಿಕ್ ಟನ್, ಏಪ್ರಿಲ್ 5 ರಂದು ಗರಿಷ್ಠ 94.11 ಮೆಟ್ರಿಕ್ ಟನ್ ಹಾಗೂ ಏಪ್ರಿಲ್ 6 ರಂದು 83.58 ಮೆಟ್ರಿಕ್ ಟನ್ ಅನಿಲವನ್ನು ಈ ಮೂರು ಪ್ರಮುಖ ಸಂಸ್ಥೆಗಳು ಯಶಸ್ವಿಯಾಗಿ ಪೂರೈಕೆ ಮಾಡಿವೆ.

ಆದ್ದರಿಂದ, ರಾಜ್ಯದ ಆಟೋ ಮಾಲೀಕರು ಮತ್ತು ಚಾಲಕರು ಇಂತಹ ಯಾವುದೇ ಸುಳ್ಳು ವದಂತಿಗಳನ್ನು ನಂಬಬಾರದು ಮತ್ತು ಆತಂಕಕ್ಕೊಳಗಾಗಿ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಲ್ಲಬಾರದು ಎಂದು ಸರ್ಕಾರ ಮನವಿ ಮಾಡಿದೆ. ಅನಿಲ ಪೂರೈಕೆ ವ್ಯವಸ್ಥಿತವಾಗಿ ನಡೆಯುತ್ತಿದ್ದು, ಸಾರ್ವಜನಿಕರು ಇಲಾಖೆಯೊಂದಿಗೆ ಸಹಕರಿಸಬೇಕೆಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

## ಸಮಾಜಸೇವೆ ಬೆಳೆಸುವ ಶಕ್ತಿ ಎನ್‌ಎಸ್‌ಎಸ್ ಯೋಜನೆಗಿದೆ: ಪಂಚಾಳ



• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ಪ್ರತಿಯೊಬ್ಬರಲ್ಲಿ ಸಮಾಜ ಸೇವೆಯ ಮನೋಭಾವನೆ ಬೆಳೆಸುವಂತ ಶಕ್ತಿ ಎನ್‌ಎಸ್‌ಎಸ್ ಯೋಜನೆಗಿದೆ. ಎಲ್ಲರೂ ಒಗ್ಗೂಡಿಕೊಂಡು ಕೆಲಸವನ್ನು ಶ್ರದ್ಧೆಯಿಂದ ಕೈಗೊಂಡಾಗ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗಲಿದೆ ಎಂದು ತಹಶೀಲ್ದಾರ್ ಮಂಜುನಾಥ ಪಂಚಾಳ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಲಾದ ಏಳು ದಿನಗಳ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಸುಧಾರಣೆ ಕಾಣಬೇಕಾದರೆ ವಿದ್ಯಾರ್ಥಿ ಜೀವನದಲ್ಲಿಯೇ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಬೇಕು. ಆಗ ಸದೃಢ ಭಾರತ ನಿರ್ಮಾಣ ಸಾಧ್ಯ ಎನ್ನುವ ಉದ್ದೇಶದಿಂದ ಮಹಾತ್ಮ ಗಾಂಧೀಜಿ ಅವರ ಜನ್ಮ ದಿನದ ಸವಿನೆನಪಿಗಾಗಿ ಕಾಲೇಜು ಹಂತದಲ್ಲಿಯೆ ರಾಷ್ಟ್ರೀಯ ಸೇವಾ ಯೋಜನೆಯನ್ನು ಜಾರಿಗೆ ತಂದು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆ ಬೆಳೆಸಲಾಗುತ್ತಿದೆ ಎಂದರು.

ವಿದ್ಯಾರ್ಥಿಗಳು ದಿನ ನಿತ್ಯ ಪತ್ರಿಕೆಗಳು ಓದುವ ಹವ್ಯಾಸದೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಯಾಗಬೇಕೆಂದು ಹೇಳಿದರು. ಬಿಎಸೆಸ್ಕ ನಿರ್ದೇಶಕ ಮಲ್ಲಿಕಾರ್ಜುನ ಪಾಟೀಲ್ ಮಾತನಾಡಿ, ವಿದ್ಯಾರ್ಥಿಗಳಿಗೆ ತಮ್ಮ ಗುರಿ ಮತ್ತು ಉದ್ದೇಶಗಳು ಮುಖ್ಯವಾಗಿರಬೇಕು. ವ್ಯಾಸಂಗದ ಸಮಯದಲ್ಲಿ ರೂಢಿಸಿಕೊಂಡ ಶಿಸ್ತು, ಸಂಯಮ, ಸೇವೆ, ಶ್ರಮ, ರಾಷ್ಟ್ರೀಯತೆ ಮತ್ತು ಲೋಕಸೇವೆಯು ಜೀವನದ ಮುಂದಿನ ಕಾಲಘಟ್ಟಕ್ಕೆ ಸೇವಾ ಮನೋಭಾವನೆ ಬೆಳೆಸಿಕೊಳ್ಳಲು ಸಹಕಾರಿಯಾಗುತ್ತವೆ ಎಂದರು. ಕಾಲೇಜಿನ ಪ್ರಾಂಶುಪಾಲ ಡಾ. ಜಯಕುಮಾರ ಸಿಂಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ ಮಹಾ ವಿದ್ಯಾಲಯದಲ್ಲಿ 550 ವಿದ್ಯಾರ್ಥಿಗಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆ. ಆದರೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕುಳಿತುಕೊಂಡು ಅಧ್ಯಯನ ಮಾಡಲು ಆಸನ ವ್ಯವಸ್ಥೆ ಇಲ್ಲ 550 ವಿದ್ಯಾರ್ಥಿಗಳಿದ್ದಾರೆ ಆದರೆ ಕಾಲೇಜಿನಲ್ಲಿ ಕೇವಲ 100 ಬ್ರೇನ್ಸ್ ಮಾತ್ರ ಇವೆ. ವಿದ್ಯಾರ್ಥಿಗಳಿಗೆ ಬ್ರೇನ್ಸ್ ವ್ಯವಸ್ಥೆ ಸರ್ಕಾರ ಕಲ್ಪಿಸಿ ಕೊಡಬೇಕೆಂದು ಎಂದರು. ಸೇಡಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಕೆ. ಪಂಡಿತ ವಿಶೇಷ ಉಪನ್ಯಾಸ ನೀಡಿದರು.

ಎನ್‌ಎಸ್‌ಎಸ್ ಅಧಿಕಾರಿ ಶಾಂತಕುಮಾರ್ ಪಾಟೀಲ್ ಸರ್ವರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದಾರ್, ಪುರಸಭೆ ಮುಖ್ಯಾಧಿಕಾರಿ ಸತೀಶ ಗುಡ್ಡೆ, ಪುರಸಭೆ ಮಾಜಿ ಅಧ್ಯಕ್ಷ ದಿಲೀಪಕುಮಾರ ಬಗ್ದಲಕರ್, ಡಾ. ಕೆ.ಶಿವಕುಮಾರ ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಭೂಮಿಕಾ ನಿರೂಪಿಸಿದರು. ಚಿತ್ರಶೇಖರ್ ಚಿರಳ್ಳಿ ವಂದಿಸಿದರು.

## ಮಾಧ್ಯಮ ಯಾವತ್ತೂ ನೈಜ ಹೋರಾಟದ ಜತೆಗೆ ನಿಲ್ಲುತ್ತದೆ: ನಾಗರಾಜ

• **ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ**




ಬಲ್ಡೋಟ ಹಠಾವೋ 160ನೇ ದಿನದ ಧರಣಿ ವೇದಿಕೆಯಲ್ಲಿ ಮಾಧ್ಯಮ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಕಿನ್ನಾಳ ಯುವಕರು ಎಸ್.ಕೆ. ಮೂವೀಸ್ ಹೆಸರಿನಲ್ಲಿ ಕಿಕ್ ಔಟ್ ಬಲ್ಡೋಟ ಹಾಗೂ ಕಾರ್ಖಾನೆಗಳು ಎನ್ನುವ ಬಾಧಿತ ಹಳ್ಳಿಯ ಜನರ ಸಂತ್ರಸ್ತರ ಗೋಳಿನ ಕಿರುಚಿತ್ರವನ್ನು ಬಿಡುಗಡೆ ಮಾಡಿ ಪ್ರೊಜೆಕ್ಟರ್ ಮೂಲಕ ಚಿತ್ರ ಪ್ರದರ್ಶನ ಮಾಡಲಾಯಿತು.

ಕರ್ನಾಟಕ ಮಾಧ್ಯಮ ಅಕಾಡಮಿ ಪ್ರಜಾ ಸಂದೇಶ ದತ್ತಿ ಪ್ರಶಸ್ತಿ ಪಡೆದ ವರದಿಗಾರ ನಾಗರಾಜ ವೈ. ವೇದಿಏಕ ಮೂಲಕ ಸನ್ಮಾನ ಸ್ವೀಕರಿಸಿ ಮಾತನಾಡಿ, ಮಾಧ್ಯಮ ಮತ್ತು ಹೋರಾಟ ಎರಡೂ ಸಮಾಜದ ಬದಲಾವಣೆಗೆ ಕೆಲಸ ಮಾಡುತ್ತವೆ. ಏನಾದರೂ ವ್ಯವಸ್ಥೆಯಲ್ಲಿ ಅನ್ಯಾಯವಾದಾಗ, ಧ್ವನಿ ಇಲ್ಲದವರ ಧ್ವನಿಯಾಗಿ ಮಾಧ್ಯಮ ಮಿಡಿದರೆ ಹೋರಾಟ ಧ್ವನಿಯಾಗಿ ಅವರನ್ನು ದಡ ತಲುಪಿಸುತ್ತದೆ. ಇಂತ ವೇದಿಕೆಯಲ್ಲಿ ಪ್ರಶಸ್ತಿ ಸ್ವೀಕರಿಸುವುದು ಹೆಮ್ಮೆ ಎನಿಸುತ್ತದೆ. ಈ ಹೋರಾಟ ವೇದಿಕೆ ಅತ್ಯಂತ ವಿಶಿಷ್ಟವಾದದ್ದು. ಲಕ್ಷಾಂತರ ಜನರ ಜೀವ, ಆರೋಗ್ಯ ಉಳಿಸಲು ಕಾರ್ಪೊರೇಟ್ ವ್ಯವಸ್ಥೆ ವಿರುದ್ಧ ಹೋರಾಡುವುದು ಅಷ್ಟು ಸುಲಭವಲ್ಲ. ಈಗ 50 ರಷ್ಟು ಹೋರಾಟ ತನ್ನ ಗತಿ ತಲುಪಿದೆ. ಇನ್ನರ್ಧ ದಾರಿ ಕ್ರಮಿಸಬೇಕು, ಅದಕ್ಕೆ ಎಲ್ಲಾ ಮಾಧ್ಯಮದವರು ಜೊತೆಗೆ ನಿಲ್ಲುತ್ತಾರೆ ಎಂದರು.

ಸಾಮಾಜಿ/ಮಾನವೀಯ ಮಿಡಿತ ವರದಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಮಟ್ಟದ ಪ್ರಶಸ್ತಿ ಪಡೆದ ಪತ್ರಕರ್ತ ರಾಜು ಬಿ. ಆರ್. ವೇದಿಕೆ ಸನ್ಮಾನ ಸ್ವೀಕರಿಸಿ ಮಾತನಾಡಿ, ಇಲ್ಲಿರುವ ಎಲ್ಲಾ ಹೋರಾಟಗಾರರು ಸಮಾನವಾದ ಶ್ರಮ ಹಾಕಿ ದೊಡ್ಡ ಹೋರಾಟ ರೂಪಿಸಿದ್ದೀರಿ, ಇಡೀ ಈ ಭಗದಲ್ಲಿಯೇ ಇದೊಂದು ವಿಶಿಷ್ಟ ಹೋರಾಟ, ಜನರ ಬದುಕಿಗಾಗಿ ಇನ್ನೊಬ್ಬರು ಮಿಡಿಯುವದು ಬಹಳ ದೊಡ್ಡದು, ನಮ್ಮ ಲೇಖನ, ವರದಿ, ಪ್ರಶಸ್ತಿ ಎಲ್ಲಕ್ಕೂ ಮಿಗಿಲಾದುದು ಈ ವೇದಿಕೆಯ ಪ್ರಾಮಾಣಿಕ ಹೋರಾಟ, ಇಲ್ಲಿ ಸಿಕ್ಕ ಗೌರವ ನಿಜಕ್ಕೂ ದೊಡ್ಡದು ಎಂದರು.

ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಈ ಹೋರಾಟ ಮಾಧ್ಯಮದ ಸಹಕಾರದಿಂದ ಬೆಳೆದು ನಿಂತಿದೆ. ಕಿರುಚಿತ್ರ ಮಾಡಿದ ಯುವಕರು ಮುಂದೆ ಹೆಚ್ಚಿನ ಸಂಖ್ಯೆಯಲ್ಲಿ ಜಾಗೃತಿ ಮೂಡಿಸಿ ಕೊಪ್ಪಳ ಜನರ ಸೇವೆ ಮಾಡಲಿ ಎಂದರು.

ವೇದಿಕೆಯಲ್ಲಿ ಸಂಚಾಲಕರಾದ ಮಲ್ಲಿಕಾರ್ಜುನ ಗೋನಾಳ, ಮಂಜುನಾಥ ಜಿ. ಗೊಂಡಬಾಳ, ಮಹಿಳಾ ನಾಯಕಿ ಜ್ಯೋತಿ ಎಂ. ಗೊಂಡಬಾಳ, ಸರೋಜಾ ಬಾಕಳೆ ಮಾತನಾಡಿದರು.

ಧರಣಿಯಲ್ಲಿ ಮಹಿಳಾ ಮುಖಂಡರಾದ ಕಾವ್ಯಾ ಗಡಾದ, ವಿದ್ಯಾ ನಾಲ್ವಾಡ, ಪ್ರಕಾಶಕಿ ಮಾಲಾ ಬಡಿಗೇರ, ಕಿರುಚಿತ್ರ ನಟಿ ಪ್ರಿಯಾಂಕಾ ಕಿನ್ನಾಳ, ಇಂಜಿನೀಯರ್ ಅನುರಾಧಾ, ನಿರ್ದೇಶಕ ಸಲ್ಮಾನ್ ಖಾನ್ ಕಿನ್ನಾಳ, ನಟ ಹನುಮೇಶ ಕಿನ್ನಾಳ, ಚಲನಚಿತ್ರ ನಿರ್ದೇಶಕ ರಮೇಶ ಸುರ್ವೆ, ಪ್ರಕಾಶಕ ಡಿ.ಎಂ. ಬಡಿಗೇರ, ನಿವೃತ್ತ ಪ್ರಾಚಾರ್ಯ ಬಿ.ಜಿ. ಕರಿಗಾರ, ಎಲ್.

ಎಫ್. ಪಾಟೀಲ್, ಶರಣು ಶೆಟ್ಟರ್, ರಾಘವೇಂದ್ರ ನೇಕಾರ, ಶಾಂತಯ್ಯ ಅಂಗಡಿ, ಈಶಪ್ಪ ದೊಡ್ಡಮನಿ, ಮೂಕಪ್ಪ ಮೇಸ್ತ್ರಿ ಬಸಾಪುರ, ಯಮನೂರಪ್ಪ ಹಾಲಳ್ಳಿ ಬಸಾಪುರ, ಗಂಗಾಧರ ಖಾನಾಪೂರ, ಮಹಾದೇವಪ್ಪ ಮಾವಿನಮಡು, ರಾಜಶೇಖರ ಏಳುಬಾವಿ, ಕಾಶಪ್ಪ ಚಲವಾದಿ, ಶಿವರಾಜ ಚಲವಾದಿ, ದುರುಗಪ್ಪ ಕನಕಮನಿ, ವಿಜಯ ಮಹಾಂತೇಶ ಹಟ್ಟಿ, ಶಿವಪ್ಪ ಜಲ್ಲಿ, ಪಂಪಣ್ಣ ಚಿಂತಪಲ್ಲಿ, ಬಸಪ್ಪ ಕಲಕೇರಿ, ಭೀಮಪ್ಪ ಯಲಬುರ್ಗಾ, ಗಂಗಮ್ಮ ಕೊಡೇಕಲ್ ಇದ್ದರು.

## ಮೊಬೈಲ್ ಟವರ್‌ಯಿಂದ ಮಕ್ಕಳಿಗೆ ವೃದ್ಧರಿಗೆ ತೊಂದರೆಯಾಗುತ್ತದೆ ಸ್ಥಳಾಂತರ ಬೇಡ: ಜನರ ತೀವ್ರ ವಿರೋಧ

• **ಮಲ್ಲಮ್ಮ ನುಡಿ ವಾರ್ತೆ**, ಬಳ್ಳಾರಿ

ನಗರದ 28 ವಾರ್ಡ್ ಪ್ರದೇಶದ ಯಾಸಿನ್ ಸಾಬ್ ಮಸೀದಿಯ ವಾಣಿಜ್ಯ ಸಂಕೀರ್ಣಗಳ ಕಟ್ಟಡದ ಮೇಲೆ ಈಗಾಗಲೇ 1989ರಿಂದ ಏರ್ಟೆಲ್ ಕಂಪನಿ ಗೆ ಸಂಬಂಧಿಸಿದ ಮೊಬೈಲ್ ಟವರ್ ಅನ್ನು ಸ್ಥಾಪಿಸಲಾಗಿತ್ತು , ಆದರೆ ಈ ಮೊಬೈಲ್ ಟವರ್ ಅನ್ನು ಈಗ ಏಕಾಏಕಿ ತೆರವುಗೊಳಿಸಿ ಅತ್ಯಂತ ಜನನಿಬಿಡ ಮತ್ತು ಜನವಸತಿ ಪ್ರದೇಶದ ಸಮೀಪದಲ್ಲಿರುವ ಅದೇ ಮಸೀದಿಯ ಹಿಂದಿನ ಭಾಗದಲ್ಲಿ ಅಳವಡಿಸಲು ಮಸೀದಿಯ ಕಮಿಟಿಯವರು ಹುನ್ನಾರ ನಡೆಸುತ್ತಿದ್ದಾರೆ, ಈ ಮೊಬೈಲ್ ಟವರನ್ನು ಈಗ ಎಲ್ಲಿದೆಯೋ ಅಲ್ಲಿ ಹಾಗೆ ಬಿಡಲಿ ಅಥವಾ ಬೇಡವಾದರೆ ಅದನ್ನು ಈ ಪ್ರದೇಶದಿಂದ ಸಂಪೂರ್ಣವಾಗಿ ತೆರವುಗೊಳಿಸಲು ಯಾವುದೇ ಕಾರಣಕ್ಕೂ ಮಸೀದಿ ಹಿಂದಿನ ಜಾಗದಲ್ಲಿ ಮೊಬೈಲ್ ಟವರ್ ಅಳವಡಿಸಬಾರದು ಎಂದು ಈ ಪ್ರದೇಶದ ಮಾಜಿ ಕಾರ್ಪೊರೇಟರ್ ಇಸ್ಮಾಯಿಲ್ ಮತ್ತು ಯಾಸಿನ್ ಸಾಬ್ ಮಸೀದಿಯ ಸುತ್ತಮುತ್ತಲ ವಾಸಿಸುವ ಸಾರ್ವಜನಿಕರು ತೀವ್ರವಾದ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ.

ಈ ಹಿಂದೆ ಹಲವಾರು ಬಾರಿ ಈಗಾಗಲೇ ಸಂಬಂಧಿಸಿದ ಶಾಸಕರಿಗೆ ಸಂಸದರಿಗೆ, ಜಿಲ್ಲಾಧಿಕಾರಿಗಳಿಗೆ ಮಹಾನಗರ ಪಾಲಿಕೆಯ ಆಯುಕ್ತರಿಗೆ ಮತ್ತು ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ದೂರನ್ನು ನೀಡಿ ಈ ಮೊಬೈಲ್ ಟವರ್ ಈ ಪ್ರದೇಶದಲ್ಲಿ ಅಳವಡಿಸ ದಂತೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದರು. ಆದರೂ ಸಹ ಯಾವೊಬ್ಬ ಅಧಿಕಾರಿಗಳು ಈ ಮೊಬೈಲ್ ಟವರ್ ಅಳವಡಿಕೆಯನ್ನು ತಡೆಯಲು ಮುಂದಾಗಿಲ್ಲದ ಕಾರಣ ಕಂಪನಿ ಈ ಜನವಸತಿ ಪ್ರದೇಶದ ಹತ್ತಿರ ಮೊಬೈಲ್ ಟವರ್ ಅಳವಡಿಸಲು ಮುಂದಾಗಿರುತ್ತದೆ, ಕಂಪನಿಯ



ಮ್ಯಾನೇಜರ್ ಖಲೀಲ್ ಅಹ್ಮದ್ ಅವರನ್ನು ಕೇಳಿದಾಗ ಸಮಿತಿಯ ಕೆಲ ಜನ ಈ ಟವರನ್ನು ಸ್ಥಳಾಂತರಿಸಲು ತಿಳಿಸಿದ್ದಾರೆ ಕಾರಣ ಅದನ್ನು ನಾವು ಕಂಪನಿ ವತಿಯಿಂದ ಕಟ್ಟಡದ ಮೇಲಿನಿಂದ ಈ ಕೆಳಗಿನ ಸ್ಥಳಕ್ಕೆ ಸ್ಥಳಾಂತರ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಯಾರು ಹೇಳಿದರು ಎಂದರೆ ಹೆಸರು ಹೇಳಲು ಇಚ್ಚಿಸದ ಖಲೀಲ್ ನನ್ನನ್ನು ಏನು ಕೇಳಬೇಡಿರಿ ಸಮಿತಿಯವರನ್ನೇ ಕೇಳಿ ಎಂದು ಹಾರೈಕೆ ಉತ್ತರ ನೀಡುತ್ತಿದ್ದಾರೆ.

ಒಂದು ವೇಳೆ ಈ ಮೊಬೈಲ್ ಟವರ್ ಅನ್ನು ಈಗಿನ ಪ್ರಸ್ತಾಪಿತ ಸ್ಥಳದಲ್ಲಿ ಅಳವಡಿಸಿದ್ದೆ ಆದಲ್ಲಿ ಅದರ ಜನರೇಟರ್ ನಿಂದ ಶಬ್ದ ಮಾಲಿನ್ಯ ವಿಪರೀತ ಮೊಬೈಲ್ ರೇಡಿಯೇಷನ್ಗಳು ಉಂಟಾಗಿ ಮಕ್ಕಳಿಗೆ ಮತ್ತು ವೃದ್ಧರಿಗೆ ತೊಂದರೆಯಾಗುವ ಅಪಾಯವಿದೆ ಮತ್ತು ಅದಕ್ಕಿಂತಲೂ ಮುಖ್ಯವಾಗಿ ಎಳೆವಯಸ್ಸಿನ ಮಕ್ಕಳಿಗೆ ಮತ್ತು ಇಳಿ ವಯಸ್ಸಿನ ವೃದ್ಧರಿಗೆ ಹಲವಾರು ರೀತಿಯ ಅನಾರೋಗ್ಯ ಕಾಡುವ ಅಪಾಯವಿದೆ ಯಾವುದೇ ಕಾರಣಕ್ಕೂ ಈ ಮೊಬೈಲ್ ಟವರ್ ಅಳವಡಿಸುವುದನ್ನು ತಡೆಹಿಡಿಯಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಲ್ಲಿ ಮಾಧ್ಯಮದ ಮೂಲಕ ಇವರ ಅಕ್ರೋಶವನ್ನು ವ್ಯಕ್ತಪಡಿಸಿದರು.

ಈ ಮಸೀದಿಯು ವಕಾಫ್ ಬೋರ್ಡ್ ಆಸ್ತಿಯಲ್ಲ, ಬದಲಾಗಿ ಕೇವಲ ನಿರ್ವಹಣೆ ಮಾತ್ರ ಬೋರ್ಡಿಗೆ ಸಂಬಂಧಿಸಿದಂತೆ

ಮಸೀದಿಯ ಆದಾಯಕ್ಕಾಗಿ ಸಾರ್ವಜನಿಕರ ಆರೋಗ್ಯವನ್ನು ಹಾಳು ಗೆಡುವಲು ಮುಂದಾಗಿದ್ದಾರೆ ಯಾವುದೇ ಕಾರಣಕ್ಕೂ ಮೊಬೈಲ್ ಟವರ್ ಅಳವಡಿಕೆ ಬೇಡ ಎಂದು

ಮಾಜಿ ಕಾರ್ಪೊರೇಟರ್ ಇಸ್ಮಾಯಿಲ್, ಸ್ಥಳೀಯ ನಿವಾಸಿಗಳಾದ ರಿಯಾಜ್, ಶಬ್ಬೀರ್, ಮೌಸಿನ್ ಅಲಿ, ಖಾಜಾ ಮೌನಿದಿನ್, ಸುಲೇಮಾನ್, ಎಂ.ಡಿ. ಅಲಿ, ಮೊಹಮ್ಮದ್ ಭಾಷಾ, ರಮಾನಾಥ್ ರಾವ್, ನೇಯಾಜ್, ಅಹ್ಮದ್, ಅಯೂಬ್, ಆಶ್ರರ್ ಸುಹಾಲ್, ಮೊಹಮ್ಮದ್ ಇಶಾಕ್ ಸೇರಿದಂತೆ ಹಲವರು ಸಹಿ ಹಾಕಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು, ಸಾರ್ವಜನಿಕ ಸುರಕ್ಷತೆ ಮತ್ತು ಜನರ ಯೋಗಕ್ಷೇಮದ ಹಿತದೃಷ್ಟಿಯಿಂದ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

## ಮುಂಗಾರು ಹಂಗಾಮಿಗೆ ರಸಗೊಬ್ಬರ ಪೂರೈಕೆ ಸಮರ್ಪಕವಾಗಿರಲಿ: ಜಿಲ್ಲಾಧಿಕಾರಿ



• **ಮಲ್ಲಮ್ಮ ನುಡಿ ವಾರ್ತೆ ಕಾರವಾರ**

ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರೈತರಿಗೆ ರಸಗೊಬ್ಬರದ ಪೂರೈಕೆ ಹಾಗೂ ವಿತರಣೆಯಲ್ಲಿ ಯಾವುದೇ ರೀತಿಯ ವ್ಯತ್ಯಯವಾಗದಂತೆ, ಸಮರ್ಪಕವಾಗಿರುವಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅವರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಪೂರೈಕೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿಗೆ ವಿವಿಧ ಗ್ರೇಡ್‌ಗಳ ಒಟ್ಟು 36,560 ಟನ್ ರಸಗೊಬ್ಬರದ ಅವಶ್ಯಕತೆಯಿದ್ದು, ಪ್ರತಿ ತಿಂಗಳೂ ಬೇಡಿಕೆಗೆ ಅಗತ್ಯವಿರುವಷ್ಟು ರಸಗೊಬ್ಬರ ರೈತರಿಗೆ ದೊರೆಯುವ ನಿಟ್ಟಿನಲ್ಲಿ ಅಗತ್ಯ ದಾಸ್ತಾನು ಮಾಡಿಕೊಳ್ಳುವಂತೆ ತಿಳಿಸಿದ ಜಿಲ್ಲಾಧಿಕಾರಿಗಳು, ರಸಗೊಬ್ಬರ ಪೂರೈಕೆ ಮಾಡುವ ಕಂಪನಿಗಳ ಪ್ರತಿನಿಧಿಗಳು ಜಿಲ್ಲೆಯ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರ ಸರಬರಾಜು ಆಗುವಂತೆ ಎಚ್ಚರವಹಿಸಬೇಕು ಎಂದರು.

ರೈತರು ತಮ್ಮ ಬೆಳೆಗಳಿಗೆ ಯೂ–ರಿಯಾ ರಸಗೊಬ್ಬರದ ಜೊತೆಗೆ ಇತರೆ ಸಂಯುಕ್ತ ರಸಗೊಬ್ಬರಗಳನ್ನು ಬಳಸುವಂತೆ ತಿಳಿಸಿದ ಜಿಲ್ಲಾಧಿಕಾರಿಗಳು, ಈ ಕುರಿತಂತೆ ಜಿಲ್ಲೆಯಾದ್ಯಂತ ರೈತರಿಗೆ ಅರಿವು ಮತ್ತು ತಾಂತ್ರಿಕ ಮಾಹಿತಿಯನ್ನು ತಲುಪಿಸುವಂತೆ ಕೃಷಿ ವಿಜ್ಞಾನಿಗಳು ಮತ್ತು ಕೃಷಿ ಹಾಗೂ ತೋಟಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರಸಗೊಬ್ಬರ ಜೊತೆಗೆ ಮುಂಗಾರು ಹಂಗಾಮಿಗೆ ಅಗತ್ಯವಿರುವ ಭಿತ್ತನೆ ಬೀಜಗಳ ವಿತರಣೆಯಲ್ಲಿ ಕೂಡಾ ಯಾವುದೇ ವ್ಯತ್ಯಯವಾಗದಂತೆ ಎಚ್ಚರ ವಹಿಸುವಂತೆ ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ರೈತರಿಗೆ ಯೂ–ರಿಯಾ ರಸಗೊಬ್ಬರ ಮಾರಾಟ ಮಾಡುವ ಸಂದರ್ಭದಲ್ಲಿ ಪ್ರೂಟ್ಸ್ ನೋಂದಣಿ ಸಂಖ್ಯೆ ಪಡೆಯುವುದು ಕಡ್ಡಾಯವಾಗಿದ್ದು, ಪ್ರೂಟ್ಸ್ ಸಂಖ್ಯೆಯನ್ನು ಪೋರ್ಟಲ್ ನಲ್ಲಿ ಅಳವಡಿಸುವ ಬಗ್ಗೆ ರಸಗೊಬ್ಬರ ಪೂರೈಸುವ ಡೀಲರ್ ಗಳಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಜಿಲ್ಲೆಯ ರೈತರಿಗೆ ಕೂಡ ಯೂರಿಯಾ ಖರೀದಿ ಸಂದರ್ಭದಲ್ಲಿ ಪ್ರೂಟ್ಸ್ ನೋಂದಣಿ ಸಂಖ್ಯೆಯನ್ನು ನೀಡುವ ಬಗ್ಗೆ ಮಾಹಿತಿ ನೀಡಲಾಗುವುದು ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಿವಪ್ರಸಾದ್ ಗಾಂವಕರ್ ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಪ್ರಕಾಶ್ ಹಾಲಮ್ಮನವರ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಸತೀಶ್, ಜಿಲ್ಲೆಯ ಎಲ್ಲಾ ತಾಲೂಕುಗಳು ಕೃಷಿ ಮತ್ತು ತೋಟಗಾರಿಕಾ ಇಲಾಖೆಯ ಅಧಿಕಾರಿಗಳು, ರಸಗೊಬ್ಬರ ಪೂರೈಕೆ ಮಾಡುವ ಕಂಪನಿಗಳ ಪ್ರತಿನಿಧಿಗಳು ಮತ್ತಿತರರು ಇದ್ದರು.

## ಕೇಂದ್ರ ಕಾರಾಗೃಹದಲ್ಲಿ ಆಹಾರಕ್ಕಾಗಿ ಗಲಾಟೆ ಸಿಬ್ಬಂದಿ ಮೇಲೆ ಕೈದಿಗಳಿಂದ ಹಲ್ಲೆ



• **ಮಲ್ಲಮ್ಮ ನುಡಿ ವಾರ್ತೆ,** ಬಳ್ಳಾರಿ

ನಗರದ ಕೇಂದ್ರ ಕಾರಾಗೃಹದಲ್ಲಿ ನೀಡಲಾಗುತ್ತಿದ್ದ ಆಹಾರದ ವಿಚಾರಕ್ಕೆ ಸಂಬಂಧಿಸಿದಂತೆ ಕೈದಿಗಳು ಮತ್ತು ಜೈಲು ಸಿಬ್ಬಂದಿಯ ನಡುವೆ ಸಣ್ಣ ಗಲಾಟೆ ಉಂಟಾದ್ದರಿಂದ ಜೈಲಿನಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು ಎನ್ನಲಾಗಿದೆ.

ಮೂಲಗಳ ಪ್ರಕಾರ, ಕಳೆದ ಒಂದು ವಾರದಿಂದ ಜೈಲು ಎಸ್‌ಪಿ ಗೈರುಹಾಜರಿದ್ದ ಕಾರಣ ಆಡಳಿತದಲ್ಲಿ ಕೆಲವು ವ್ಯತ್ಯಾಸಗಳು ಉಂಟಾಗಿ ಈ ಘಟನೆಗೆ ಕಾರಣವಾಗಿರಬಹುದು ಎಂದು ಹೇಳಲಾಗುತ್ತಿದೆ.

ಈ ಮಾಹಿತಿ ತಿಳಿದ ತಕ್ಷಣ ಬಳ್ಳಾರಿ ಜಿಲ್ಲಾ ಪೊಲೀಸ್ ಅಧೀಕ್ಷಕ ಸುಮನ್ ಡಿ. ಪನ್ನೇಕರ್ ಅವರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ತಕ್ಷಣವೇ ಹೆಚ್ಚುವರಿ ಪೊಲೀಸ್ ಪಡೆಗಳನ್ನು ಕರೆಸಿಕೊಂಡು ಭದ್ರತೆಯನ್ನು ಬಿಗಿಗೊಳಿಸಿದ್ದಾರೆ.

ಘಟನೆಯ ವೇಳೆ ಅಶೋಕ್ ಹೊಸಮನೆ ಎಂಬ ಸಿಬ್ಬಂದಿಗೆ ಕುತ್ತಿಗೆಯ ಭಾಗದಲ್ಲಿ ಸಣ್ಣ ಪ್ರಮಾಣದ ಗಾಯವಾಗಿರುವುದಾಗಿ ತಿಳಿದುಬಂದಿದೆ. ಆದರೆ, ಇತರ ಯಾವುದೇ ಗಂಭೀರ ಗಾಯಾಳುಗಳ ಬಗ್ಗೆ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುನ್ನೆಚ್ಚರಿಕಾ ಕ್ರಮವಾಗಿ ಆಂಬುಲೆನ್ಸ್ ವ್ಯವಸ್ಥೆಯನ್ನೂ ಸಜ್ಜುಗೊಳಿಸಲಾಗಿತ್ತು. ಕಾರಾಗೃಹ ಇಲಾಖೆ ತಕ್ಷಣ ಗೇಟ್‌ಗಳನ್ನು ಲಾಕ್ ಮಾಡಿ ಒಳಾಂಗಣವನ್ನು ನಿಯಂತ್ರಣಕ್ಕೆ ತೆಗೆದುಕೊಂಡಿತು.

ಇದಲ್ಲದೆ, ಘಟನೆ ಸಂಬಂಧಿಸಿದಂತೆ ನಂತರ ಎಫ್‌ಐಆರ್ ದಾಖಲು ಮಾಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಪೊಲೀಸ್ ಪಡೆ ಆಗಮಿಸಿ ಪರಿಸ್ಥಿತಿಯನ್ನು ಶಾಂತಗೊಳಿಸಿದ್ದು, ಈಗ ಎಲ್ಲವೂ ನಿಯಂತ್ರಣದಲ್ಲಿದೆ. ಒಟ್ಟಾರೆ, ಬಳ್ಳಾರಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಸುಮನ್ ಡಿ ಪನ್ನೇಕರ್ ಪೊಲೀಸರು ಮತ್ತು ಕಾರಾಗೃಹ ಇಲಾಖೆ ತ್ವರಿತ ಕ್ರಮ ಕೈಗೊಂಡ ಪರಿಣಾಮ ಯಾವುದೇ ದೊಡ್ಡ ಅನಾಹುತ ತಪ್ಪಿದಂತಾಗಿದೆ.

## ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ**, ಕಾರವಾರ


ಹೆಸ್ಕಾಂ, ಕುಮಟಾ ಉಪವಿಭಾಗದ ಗ್ರಾಮೀಣ ಶಾಖೆಯ 11ಕೆ.ವಿ ಬಾಡಾ ಹಾಗೂ 11ಕೆ.ವಿ ಮಾಸುರ ಮಾರ್ಗದಲ್ಲಿ 11ಕೆ.ವಿ ಮಾರ್ಗದ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಏ.9 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಕುಮಟಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು(ವಿ)ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಾ.ಬಿ.ಆರ್.ಅಂಬೇಡ್ಕರ್ ಬಾಬು ಜಗಜೀವನರಾಮ್ ಜಯಂತಿ

• **ಮಲ್ಲಮ್ಮ ನುಡಿ ವಾರ್ತೆ, ಕಾರವಾರ**

ಹೊನ್ನಾವರ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ ರಾಮ್ ಅವರ ಜಯಂತಿಯನ್ನು ಏ.14 ರಂದು ಬೆಳಗ್ಗೆ 10.30 ಗಂಟೆಗೆ ಹೊನ್ನಾವರದ ಪಟ್ಟಣ ಪಂಚಾಯತ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸದರಿ ಕಾರ್ಯಕ್ರಮಕ್ಕೆ ತಾಲೂಕಿನ ಎಲ್ಲಾ ಸಂಘ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹಾಗೂ ಹಿಂದೂಳಿದ ವರ್ಗಗಳ ಎಲ್ಲಾ ಸಮಿತಿ ಪದಾಧಿಕಾರಿಗಳು, ಸಾರ್ವಜನಿಕರು ಹಾಜರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಹೊನ್ನಾವರ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಗ್ರೇಡ್–1 ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಸವಕಲ್ಯಾಣ :– ತಿಪುರಾಂತಿನ ಗವಿಮಠದಲ್ಲಿ ನಡೆದ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವದಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ಎ. ಜಿ. ಪಾಟೀಲ್. ಸರಸ್ವತಿ ಬೆಂಬಳೆ. ಜಯ ಪ್ರಕಾಶ್ ಸ್ವಾಮಿ. ದೀಲಿಪಗೀರ ಗೋಸ್ವಾಮಿ. ರವಿ ನೌದಗಿಕರ. ಶಿವಕುಮಾರ ಬಿರಾದಾರ. ಲೋಕೇಶ್ ಮೊಳಕೆರೆ. ಇವರೆಲ್ಲರಿಗೂ 2026 ರ. ಅಭಿನವಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಅಬಜಲಪುರದ ಪೂಜ್ಯ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು. ಪೂಜ್ಯ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಕಲಬುರ್ಗಿಯ ಪೂಜ್ಯ ಶ್ರೀ ರಾಜಶೇಖರ ಶಿವಾಚಾರ್ಯರು. ಮಹಾರಾಷ್ಟದ ಪೂಜ್ಯ ಶ್ರೀ ಸೂತ್ರೇಶ್ವರ ಶಿವಾಚಾರ್ಯರು. ಬೇನೂರ ಪೂಜ್ಯ ಶ್ರೀ ಸಿದ್ದ ರೇಣುಕ ಶಿವಾಚಾರ್ಯರು. ಮಾಜಿ ಶಾಸಕರಾದ ಮಲ್ಲಿಕಾರ್ಜುನ ಎಸ್ ಖೂಬಾ. ಬಾಬು ಹೂನ್ನನಾಯಕ. ಪ್ರದೀಪ ವಾತಡೆ. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ. ಶರಣಪ್ಪಾ ಬಿರಾದಾರ. ಅರ್ಜುನ ಕನಕ. ಬಸವರಾಜ ಸ್ವಾಮಿ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

(ಮಲ್ಲಮ್ಮ ನುಡಿ ಚಿತ್ರ)

# ಪೀಠಾಧಿಪತಿಯವರಿಂದ ರೆಡ್ಡಿ ದರ್ಶನ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ನಗರಕ್ಕೆ ಆಗಮಿಸಿರುವ ಉತ್ತರಾದಿ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ 1008 ಸತ್ಯಾತ್ಮ ತೀರ್ಥ ಶ್ರೀಪಾದಂಗಳ ಸ್ವಾಮಿಗಳನ್ನು ಇಂದು ಮಾಜಿ ನಗರ ಶಾಸಕರಾದ ಗಾಲಿ ಸೋಮಶೇಖರ್ ರೆಡ್ಡಿಯವರು ಭೇಟಿ ಮಾಡಿ ಆಶೀರ್ವಾದ ಪಡೆದರು.

ನಗರದ ಭಕ್ತರ ಮಧ್ಯೆ ನಡೆದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಕ್ತಿಭಾವದ ವಾತಾವರಣ ಕಂಗೊಳಿಸಿತು. ಗಾಲಿ ಸೋಮಶೇಖರ್ ರೆಡ್ಡಿಯವರು ಸ್ವಾಮಿಜಿಗಳ ಪಾದಪೂಜೆ ಸಲ್ಲಿಸಿ, ಗೌರವಪೂರ್ವಕವಾಗಿ ಆಶೀರ್ವಾದಗಳನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸ್ವಾಮಿಜಿಗಳು ಸಮಾಜದ ಶಾಂತಿ, ಸೌಹಾರ್ದತೆ ಮತ್ತು ಧಾರ್ಮಿಕ ಮೌಲ್ಯಗಳ ಬೆಳೆವಿಕೆಗೆ ವಿಶೇಷ ಉಪದೇಶ ನೀಡಿ, ಎಲ್ಲರಿಗೂ ಧರ್ಮಮಾರ್ಗದಲ್ಲಿ ನಡೆಯುವಂತೆ ಸಂದೇಶ ನೀಡಿದರು.ಗಾಲಿ ಸೋಮಶೇಖರ್ ರೆಡ್ಡಿಯವರು ಮಾತನಾಡಿ, ಇಂತಹ ಮಹಾನ್ ಯತಿಗಳ ದರ್ಶನ ಮತ್ತು ಆಶೀರ್ವಾದ ಪಡೆಯುವುದು

ಜೀವನದಲ್ಲಿ ಮಹತ್ವದ ಕ್ಷಣವಾಗಿದ್ದು, ಸಮಾಜದ ಒಳಿತಿಗಾಗಿ ಅವರು ನೀಡುವ ಮಾರ್ಗದರ್ಶನ ಪ್ರೇರಣಾದಾಯಕವಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಹಲವು ಭಕ್ತರು, ಮುಖಂಡರು ಮತ್ತು ಸ್ಥಳೀಯ ಗಣ್ಯರು ಭಾಗವಹಿಸಿ, ಸ್ವಾಮಿಜಿಗಳಿಂದ ಆಶೀರ್ವಾದ ಪಡೆದುಕೊಂಡರು. ಕಾರ್ಯಕ್ರಮವು ಶ್ರದ್ಧಾಭಕ್ತಿಯ ನಡುವೆ ಯಶಸ್ವಿಯಾಗಿ ನೆರವೇರಿತು.

# ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಕೊರತೆಯಾಗದಂತೆ ನಿಗಾ ವಹಿಸಿ ಡಿಸಿ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಏ.08: ಸಾಲಿನ ಮುಂಗಾರು ಹಂಗಾಮು ಪ್ರಾರಂಭವಾಗುತ್ತಿರುವ ನಿಟ್ಟಿನಲ್ಲಿ ಜಿಲ್ಲೆಯ ರೈತರಿಗೆ ಬಿತ್ತನೆ ಬೀಜ,ರಸಗೊಬ್ಬರ ಸೇರಿದಂತೆ ಅಗತ್ಯ ಕೃಷಿ ಪರಿಕರಗಳ ಕೊರತೆಯಾಗದಂತೆ ಸಕಾಲದಲ್ಲಿ ಪೂರೈಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಕೃಷಿ ಇಲಾಖೆ ಹಾಗೂ ಜಿಲ್ಲಾಡಳಿತ ವತಿಯಿಂದ ಆಯೋಜಿಸಲಾದ ಕೃಷಿ ಪರಿಕರಗಳ ವಿತರಣೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಗೂ ಸಹಕಾರ ಸಂಘಗಳಲ್ಲಿ ರೈತರ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಬೀಜ ಮತ್ತು ರಸಗೊಬ್ಬರವನ್ನು ಮುನ್ನೆಚ್ಚರಿಕೆಯಾಗಿ ದಾಸ್ತಾನು ಮಾಡಿಕೊಳ್ಳಬೇಕು. ರೈತರಿಗೆ ವಿತರಿಸುವ ಬಿತ್ತನೆ ಬೀಜಗಳು ಉತ್ತಮ ಗುಣಮಟ್ಟದ್ದಾಗಿರಬೇಕು. ಮಾರುಕಟ್ಟೆಯಲ್ಲಿ ನಕಲಿ ಬೀಜ ಅಥವಾ ಕಳಪೆ ಗುಣಮಟ್ಟದ ರಸಗೊಬ್ಬರ ಮಾರಾಟವಾಗದಂತೆ




ತಡೆಯಲು ವಿಶೇಷ ಜಾಗೃತ ದಳ ರಚಿಸಿ ನಿರಂತರವಾಗಿ ದಾಳಿ ನಡೆಸಬೇಕು ಎಂದು ತಾಕೀತು ಮಾಡಿದರು. ಯಾವುದೇ ಖಾಸಗಿ ಮಾರಾಟಗಾರರು ನಿಗದಿತ ಬೆಲೆಗಿಂತ ಹೆಚ್ಚಿನ ದರ ವಸೂಲಿ ಮಾಡಿದರೆ ಅಂತಹ ಮಳಿಗೆಗಳ ಪರವಾನಗಿ ರದ್ದುಗೊಳಿಸಲಾಗುವುದು ಎಂದ ಅವರು, ರೈತರು ಖರೀದಿಸಿದ ಪರಿಕರಗಳಿಗೆ ಕಡ್ಡಾಯವಾಗಿ ರಸೀದಿ ನೀಡಬೇಕು ಮತ್ತು ರೈತರಿಗೆ ಕಾಣುವಂತೆ ದಾಸ್ತಾನು ಫಲಕ ಪ್ರದರ್ಶಿಸಬೇಕು. ಕೃಷಿ ಇಲಾಖೆಯ ಅಧಿಕಾರಿಗಳು ಕಚೇರಿಗೆ ಸೀಮಿತವಾಗದೆ ಕ್ಷೇತ್ರ ಮಟ್ಟದಲ್ಲಿ ಸಂಚರಿಸಿ ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಬಿತ್ತನೆ ಸಮಯದಲ್ಲಿ ತಾಂತ್ರಿಕ ಸಲಹೆ ಮತ್ತು ಹವಾಮಾನ ಮುನ್ಸೂಚನೆ ಕುರಿತು ರೈತರಿಗೆ ಸಲಹೆ ಸೂಚನೆ ನೀಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಿದರು.

ವಿತರಣಾ ಸಮಯದಲ್ಲಿ ಯಾವುದೇ ಗೊಂದಲ ಉಂಟಾಗದಂತೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರು. ಇದ–ಕ್ಕೆ ಪ್ರತಿಕ್ರಿಯಿಸಿದ ಕೃಷಿ ಇಲಾಖೆ ಜಂಟಿ ನಿರ್ದೇಶಕರು ಜಿಲ್ಲೆಯಲ್ಲಿ ಒಟ್ಟು 2.78 ಲಕ್ಷ ಹೆಕ್ಟೇರ್ ಕೃಷಿ ಭೂಮಿಯಿದ್ದು, ಪ್ರಸ್ತುತ 1.33 ಟನ್ ರಸಗೊಬ್ಬರದ ಬೇಡಿಕೆಯಿದೆ. ಸದ್ಯಕ್ಕೆ ರಸಗೊಬ್ಬರ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ. ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಹೆಚ್ಚಿನ ಬೇಡಿಕೆ ಇರಲಿದ್ದು, ಆ ಸಮಯಕ್ಕೆ ಪೂರೈಕೆ ಮಾಡಲು ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ರಸಗೊಬ್ಬರ ಮಾರಾಟಗಾರರ ಸಂಘದ ಅಧ್ಯಕ್ಷ ಶ್ರೀಧರ್ ಶೆಟ್ಟಿ ಮಾತನಾಡಿ, ಕೊಟ್ಟೂರಿನಲ್ಲಿ ರೈಲ್ವೆ ರೇಕ್ ಪಾಯಿಂಟ್ ಸ್ಥಾಪಿಸುವಂತೆ ಒತ್ತಾಯಿಸಿದರು. ಪ್ರಸ್ತುತ ದಾವಣಗೆರೆ, ಕೊಪ್ಪಳ ಮತ್ತು ಬಳ್ಳಾರಿಯಿಂದ ರಸಗೊಬ್ಬರ ತರಿಸಿಕೊಳ್ಳುತ್ತಿದ್ದು, ಇದರಿಂದ ಸಾರಿಗೆ ವೆಚ್ಚ ಅಧಿಕವಾಗುತ್ತಿದೆ. ಈ ರೇಕ್ ಪಾಯಿಂಟ್ ಯೋಜನೆಗೆ ಈಗಾಗಲೇ 40 ಕೋಟಿ ರೂಪಾಯಿ ಮಂಜೂರಾಗಿದ್ದರೂ ಕೆಲಸ ಪ್ರಾರಂಭವಾಗಿಲ್ಲ ಎಂದು ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಈ ಕುರಿತು ರೈಲ್ವೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು ಎಂದರು.

ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ್, ಗುಲ್ಬರ್ಗಾ ವಿಚಕ್ಷಣಾ ವಿಭಾಗದ ಜಂಟಿ ನಿರ್ದೇಶಕ ಶಿವಕುಮಾರ್ ಸೇರಿದಂತೆ ಮತ್ತಿತರರು ಇದ್ದರು.

# ಅಬಕಾರಿ ಇಲಾಖೆ ಅಧಿಕಾರಿಗಳ ವಿರುದ್ಧ ಸ್ಥಳೀಯರು ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ಅಬಕಾರಿ ಇಲಾಖೆ ಅಧಿಕಾರಿಗಳ ವಿರುದ್ಧ ನಗರದ 5ನೇ ವಾರ್ಡ್‌ನಲ್ಲಿ ಸ್ಥಳೀಯ ನಿವಾಸಿಗಳು ಬುಧವಾರ ಮುಂಡರಗಿ ಬೈಪಾಸ್ ಬಳಿಯ ತೀವ್ರ ಪ್ರತಿಭಟನೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳು ಮಾತನಾಡುತ್ತಾ ಮುಂಡರಗಿ ಬೈಪಾಸ್ ಬಳಿ ರಾಷ್ಟ್ರೀಯ ಹೆದ್ದಾರಿ ಇದ್ದು, ರೈಲ್ವೆ ಲೈನ್ ಸಮೀಪ ಇದ್ದು, ಹಾಗೂ ಕೈಗಾರಿಕಾ ಅಭಿವೃದ್ಧಿ ಕೇಂದ್ರಗಳು, ಮತ್ತು ಶಾಲಾ, ಕಾಲೇಜುಗಳು, ಅನೇಕ ಜೀನ್ಸ್ ಕೇಂದ್ರಗಳು ಇದ್ದಾವೆ. ಇದೇ ಬೈಪಾಸ್ ಸರ್ಕಲ್ ನಲ್ಲಿ ಅನೇಕ ಸಾವಿರಾರು ಮಹಿಳೆಯರು, ವಿದ್ಯಾರ್ಥಿನಿ, ವಿದ್ಯಾರ್ಥಿಗಳು ಇಲ್ಲಿಂದ ಹೋಗುತ್ತಾರೆ, ಬರುತ್ತಾರೆ ಆದರೆ ಬಳ್ಳಾರಿ ಅಬಕಾರಿ ಇಲಾಖೆಯ ಅಧಿಕಾರಿಗಳು ಈದೇ ಬೈಪಾಸ್ ಸರ್ಕಲ್ ನಲ್ಲಿ ಬೇರೆ ಒಂದು ಪ್ರವೇಟ್ ಬಾರ್ ಅಂಡ್ ರೆಸ್ಟೋರೆಂಟ್ ನಿರ್ಮಾಣ ಮಾಡುವುದಕ್ಕೆ ಸ್ಥಳ ಪರಿಶೀಲನ ಮಾಡಿ ಪ್ರೈವೇಟ್ ಮಾಲೀಕನ ಜೊತೆ ಕೈ ಜೋಡಿಸಿ ಸಿದ್ಧತೆ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತವಾಗಿದ್ದಾರೆ. ಈ ಸ್ಥಳದಲ್ಲಿ ಬಾರ ಅಂಡ್ ರೆಸ್ಟೋರೆಂಟ್ ನಿರ್ಮಾಣವಾದರೆ

ದಿನನಿತ್ಯ ದಿನನಿತ್ಯಗಲಾಟೆ ಹಾಗೂ ಮಾದ್ಯಪಾನಿಗಳ ಅಸಭ್ಯ ವರ್ತನೆ ಮಹಿಳೆಯರು ಮತ್ತು ಮಕ್ಕಳಿಗೆ ಭದ್ರತಾ ಸಮಸ್ಯೆಗಳು ಇವುಗಳಿಂದ ಪ್ರದೇಶದ ಶಾಂತಿ ಸಂಪೂರ್ಣ ಭಂಗವಾಗಲಿದೆ. ಇಲ್ಲಿ ಬಾರ್

> “ ಮುಂಡರಗಿ ಬೈಪಾಸ್ ಸರ್ಕಲ್ ನಲ್ಲಿ ನಮ್ಮ ಇಲಾಖೆ ವತಿಯಿಂದ ಬಾರ್ ಅಂಡ್ ರೆಸ್ಟೋರೆಂಟ್ ನಿರ್ಮಾಣ ಮಾಡುವುದಕ್ಕೆ ಸ್ಥಳ ಪರಿಶೀಲನ ನಡೆದಿತ್ತು.. ಆದರೆ ಯಾವುದೇ ಬಾರ್ ಅಂಡ್ ರೆಸ್ಟೋರೆಂಟ್ ಗೆ ನಮ್ಮ ಇಲಾಖೆಯ ವತಿಯಿಂದ ಅನುಮತಿ ಇಲ್ಲ ಎಂದು ಅಧಿಕಾರಿ ಗಿರೀಶ್ ನಮ್ಮ ಪ್ರತಿನಿಧಿನೊಂದಿಗೆ ತಿಳಿಸಿದ್ದಾರೆ.

ಅಂಡ್ ರೆಸ್ಟೋರೆಂಟ್ ಆದರೆ ಸ್ಥಳೀಯರ ಜೀವನ ಅಸ್ತವಸ್ತವಾಗಲಿದೆ ಎಂದರು. ಅಬಕಾರಿ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಸಿದ್ಧತೆಗೆ ವ್ಯವಸ್ಥೆ ಮಾಡಿಕೋಟ್ಟ ಅವರ ಮೇಲೆ ತಕ್ಷಣವೇ ಕ್ರಮ ವಹಿಸಬೇಕೆಂದು ಡಿಮ್ಯಾಂಡ್ ಮಾಡಿದ್ದಾರೆ. ಇದೇ ಸ್ಥಳದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ನಿರ್ಮಾಣವಾದರೆ ಇಲ್ಲಿ ಸ್ಥಳೀಯರಿಂದ ತೀವ್ರ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಐದನೆಯ ವಾರ್ಡ್ ಸದಸ್ಯ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮಾಲೀಕರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಈ ವೇಳೆ ಸ್ಥಳೀಯ ಸಾರ್ವಜನಿಕರು ಪ್ರತಿಭಟನೆಯಲ್ಲಿ ಘೋಷಣೆಗಳನ್ನು ಕೂಗಿ ಇಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ನಿರ್ಮಾಣ ಬೇಡ ಎಂದು ಆಕ್ರೋಶ ವ್ಯಕ್ತವಾಗಿದ್ದಾರೆ. ಸ್ಥಳೀಯರ ಈ ಬೇಡಿಕೆಗೆ ಅಧಿಕಾರಿಗಳು ಸ್ಪಂದಿಸುತ್ತಾರಾ? ಅಥವಾ ಪ್ರತಿಭಟನೆ ಮತ್ತಷ್ಟು ದೊಡ್ಡ ರೂಪ ತಾಳುತ್ತದಾ ಎಂಬುದು ಕಾದು ನೋಡಬೇಕಾಗಿದೆ.

# ಸಹಕಾರ ಸಂಘ ಚುನಾವಣೆಯಲ್ಲಿ ಇಮ್ರಾನ್ ಖಾನ್ ಭರ್ಜರಿ ಗೆಲುವು

• ಮಲ್ಲಮ್ಮ ನುಡಿ ವಾರ್ತೆ ಬೀದರ

2026–2027ನೇ ಸಾಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಕಪಲಾಪುರ (ಎ) ಇದರ ಸಾಲಗಾರರಲ್ಲದ ಕ್ಷೇತ್ರದ ಚುನಾವಣೆಯಲ್ಲಿ ಎಂ.ಡಿ. ಇಮ್ರಾನ್ ಖಾನ್ ಅವರು ಭರ್ಜರಿ ಜಯ ಸಾಧಿಸಿದ್ದಾರೆ.

ಚುನಾವಣೆ ಏಪ್ರಿಲ್ 5ರಂದು ಕಪಲಾಪುರ ಹೈ ಸ್ಕೂಲ್‌ನಲ್ಲಿ ಶಾಂತಿಯುತವಾಗಿ ನಡೆದಿದ್ದು, ಅದೇ ದಿನ ಸಂಜೆ 7:30 ಗಂಟೆಗೆ ಮತ ಎಣಿಕೆ ಪೂರ್ಣಗೊಂಡು ಫಲಿತಾಂಶ ಪ್ರಕಟಿಸಲಾಯಿತು.


ಈ ಚುನಾವಣೆಯಲ್ಲಿ ಎಂ.ಡಿ. ಇಮ್ರಾನ್ ಖಾನ್ ಅವರು ತಮ್ಮ ಎದುರಾಳಿಯನ್ನು 56 ಮತಗಳ ಅಂತರದಿಂದ ಸೋಲಿಸಿ ಗೆಲುವು ಸಾಧಿಸಿದ್ದು, ಅವರ ಬೆಂಬಲಿಗರಲ್ಲಿ ಹರ್ಷೋಲ್ಲಾಸ ಮೂಡಿದೆ.



ಜಯದ ನಂತರ ಬೆಂಬಲಿಗರು, ಅಭಿಮಾನಿಗಳು ಹಾಗೂ ಸಹಕಾರ ಸಂಘದ ಸದಸ್ಯರು ಇಮ್ರಾನ್ ಖಾನ್ ಅವರನ್ನು ಅಭಿನಂದಿಸಿ, ಸಂಘದ ಅಭಿವೃದ್ಧಿ ಹಾಗೂ ಸದಸ್ಯರ ಹಿತಾಸಕ್ತಿಗಾಗಿ ಅವರು ಸಮರ್ಪಿತವಾಗಿ ಕೆಲಸ ಮಾಡುವರೆಂಬ ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಂ.ಡಿ. ಇಮ್ರಾನ್ ಖಾನ್ ಅವರು ತಮ್ಮ ಮೇಲೆ ವಿಶ್ವಾಸವಿಟ್ಟು ಮತ ನೀಡಿದ ಮತದಾರರು ಹಾಗೂ ಬೆಂಬಲಿಗರಿಗೆ ಕೃತಜ್ಞತೆ ಸಲ್ಲಿಸಿ, ಸಂಘದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ವಿಜಯೋತ್ಸವದ ಅಂಗವಾಗಿ ಗ್ರಾಮದಲ್ಲಿ ಮೆರವಣಿಗೆ ನಡೆಸಲಾಗಿದ್ದು, ಈ ಮೆರವಣಿಗೆಯಲ್ಲಿ ಅಜಯ್ ದೇಸಾಯಿ, ಅಮರ್ ಮಮ್ಮಾಪೂರೆ, ಸತೀಶ್, ಸಂಜು, ವಿವೇಕ್ ಬಿರಾದರ್, ಸಚಿನ್ ಮಮ್ಮಾಪೂರೆ, ಅರುಣ್, ಪ್ರಭಾಕರ್ ಮಾಲೆ, ಬಂಡೆಪ್ಪ ಅತಿವಾಳ ಸೇರಿದಂತೆ ಅನೇಕರು ಭಾಗವಹಿಸಿದ್ದರು.



# ಕಾನೂನು ಬಾಹಿರ ಚಟುವಟಿಗಳ ಬಗ್ಗೆ ನಿಗಾವಹಿ

• ಮಲ್ಲಮ್ಮ ನುಡಿ ವಾರ್ತೆ, ರಾಯಚೂರು

ಜಿಲ್ಲಾ ಸಮಿತಿ ರಚನೆಯಾಗಿದ್ದು, ಅಂತವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಭೂಮಿಯ ಫಲವತ್ತತೆ ಹಾಗೂ ಮಣ್ಣಿನ ಆರೋಗ್ಯದ ಹಿತದೃಷ್ಟಿಯಿಂದ ರೈತರು ಅನಗತ್ಯವಾಗಿ ಹೆಚ್ಚಿನ ರಸಗೊಬ್ಬರ ಬಳಕೆ ಮಾಡದೆ ಬೆಳೆಗೆ ಅನುಗುಣವಾಗಿ ಮಿತವಾಗಿ ರಸಗೊಬ್ಬರ ಬಳಸಬೇಕೆಂಬ ಉದ್ದೇಶದಿಂದ ಇಲಾಖೆಯು ಈ ಕ್ರಮ ಜಾರಿಗೆ ತಂದಿದೆ. ಅಲ್ಲದೆ, ರೈತರು ಇತರೆ ಸಾವಯವ ಗೊಬ್ಬರ, ಜೈವಿಕ ಗೊಬ್ಬರ ಮತ್ತು ಹಸಿರೆಲೆ ಗೊಬ್ಬರಗಳನ್ನು ಬಳಸುವಂತೆ ತಿಳಿಸಿದೆ.

ಅಧಿಕೃತ ರಸಗೊಬ್ಬರ ಮಾರಾಟಗಾರರು ಕಡ್ಡಾಯವಾಗಿ ಕೆ–ಕಿಸಾನ್ ತಂತ್ರಾಂಶದಲ್ಲಿ ರೈತರ ಎಫ್.ಐ.ಡಿ. ನಮೂದಿಸಿ ಯೂರಿಯಾ ಮಾರಾಟ ಮಾಡಬೇಕು. ಒಂದು ವೇಳೆ 'ಓ' ಫಾರಂ ನವೀಕರಿಸದೆ ಮಾರಾಟ ಮಾಡಿದರೆ, ನಿಗದಿಪಡಿಸಿದ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿನ ದರಕ್ಕೆ ಮಾರಿದರೆ ಅಥವಾ ಕೃಷಿಯೇತರ ಉದ್ದೇಶಗಳಿಗೆ ಸರಬರಾಜು ಮಾಡುವುದು. ಇತರ ಕಾನೂನುಬಾಹಿರ ಚುಟುವಟಿಕೆ ಕಂಡುಬಂದಲ್ಲಿ ಅಂತಹ ಮಾರಾಟಗಾರರ ವಿರುದ್ಧ ರಸಗೊಬ್ಬರ ನಿಯಂತ್ರಣ ಕಾಯ್ದೆ ಅನ್ವಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಗರದ ವಿವಿಧ ಕಡೆ ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ, ರಾಯಚೂರು

ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 1ರ ವ್ಯಾಪ್ತಿಗೆ ಬರುವ ಶಾಖೆ 2ರಲ್ಲಿ ರಸ್ತೆ ಕಾಮಗಾರಿ ನಿರ್ವಹಿಸುತ್ತಿರುವ ಪ್ರಯುಕ್ತ ಏಪ್ರಿಲ್–8ರ ಬೆಳಿಗ್ಗೆ 09:30 ಗಂಟೆಯಿಂದ ಸಾಯಂಕಾಲ 05:30 ಗಂಟೆವರೆಗೆ ಗೌಸಿಯಾ ಕಾಲೋನಿ, ಮಿನರಲ್ ವಟರ್ ಪ್ಲಾಂಟ್ ಅತಿರ, ಬಂದೇನವಾಜ್ ಕಾಲೋನಿ, ಎಕ್ಲಸ್ಪುರ್ ರಸ್ತೆ, ಚೌದರಿ ಲೇಔಟ್, ಗಾಂಧಿ ಲೇಔಟ್, ಹೇಮಾ ಪ್ರೈಡ್, ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಂದಕತೋಡಿದವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ಸರ್ಕಾರಿ ಖರಾಬ್ ಜಾಗದಲ್ಲಿ ಹೊಲಕ್ಕೆ ಹೋಗದಂತೆ ಅಡ್ಡ ಕಂದಕತೋಡಿ ತೊಂದರೆ ನೀಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ತಹಶೀಲ್ದಾರ್ ರವರಿಗೆ ಗ್ರಾಮಸ್ಥರಾದ ಗೋಪಾಲ್. ಬಂಗಾರಬೋವಿ. ಕೃಷ್ಣಭೋವಿ. ಚೆಲುವರಾಜ್. ಮಣಿ. ಪ್ರಕಾಶ್. ಅಜಿತ್ ಒತ್ತಾಯಿಸಿದ್ದಾರೆ.

ತಾಲೂಕಿನ ಕಸಬಾ ಹೋಬಳಿ ಸತ್ಯಗಾಲ ಕಾವಲ್ ಗ್ರಾಮದ ಸ ನಂ1 ರಲ್ಲಿ ಸರ್ಕಾರಿ ಗೋಮಾಳ ಒಟ್ಟು ವಿಸ್ತೀರ್ಣ 684. ಎಕರೆ1 ಗುಂಟೆ ಇದ್ದು ಈ ಭಾಗದಲ್ಲಿ ಸುತ್ತಮುತ್ತಲು ಪರಿಶಿಷ್ಟ ಜಾತಿಗೆ ಸೇರಿದ ಭೋವಿ ಜನಾಂಗ ದವರೇ ಹೆಚ್ಚು ಇದ್ದು ದರ್ಕಾಸ್ ಮೂಲಕ ಮಂಜೂರಾಗಿ ಸಂಬಂಧಿಸಿದ ದಾಖಲೆ ಪಡೆದು ಬೇಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ಬಂಗಾರಬೋವಿ. ಕೃಷ್ಣ ಭೋವಿ. ಚೆಲುವರಾಜ್ ಸೇರಿದಂತೆ ಮೂರು ಮಂದಿ ರೈತರ ಜಮೀನು ಒಟ್ಟು 8 ಎಕರೆ ವಿಸ್ತೀರ್ಣ ಇದ್ದು ಈ ಜಮೀನಿಗೆ ಆರಂಭದ ದಿನಗಳಿಂದಲೂ ಸಹ ಹೊಂದಾಣಿಕೆಯಿಂದ ರೂಢಿಗತ ರಸ್ತೆ ಮಾಡಿಕೊಂಡು ಜಮೀನಿನಲ್ಲಿ ಬೇಸಾಯ ಮಾಡಲಾಗುತ್ತಿತ್ತು.

ಆದರೆ ಹಿರಿಯ ಮುಖಂಡರೊಬ್ಬರು ಮರಣ ಹೊಂದಿದ ಹಿನ್ನೆಲೆಯಲ್ಲಿ ಆತನ



ಮಕ್ಕಳು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬಸ್ಥರಾದ ಕುಮಾರ. ಕಮಲಮ್ಮ. ಮಂಜುಳಮ್ಮ. ಶಾರದಾ. ವಸಂತ. ಸಂಗೀತ. ಶಶಿಕಲಾ. ಕವಿತಾ. ತಂಗರಾಜ್. ಮರಿಯಮ್ಮ. ಡಿ ಶಿವರಾಜ್. ಮುರುಗೇಶ್. ರಾಜಾಜಿ ಸೇರಿದಂತೆ ಇನ್ನು ಹಲವಾರು ಸೇರಿ ನಮ್ಮ ಹೊಲಕ್ಕೆ ಹೋಗದಂತೆ ಅಡ್ಡಲಾಗಿ ರಸ್ತೆಯಲ್ಲಿ ಕಂದಕ ತೋಡಿ ತೊಂದರೆ ನೀಡುತ್ತಿರುವುದರಿಂದ ಕಳೆದ ನಾಲ್ಕು ವರ್ಷಗಳಿಂದ ಬೇಸಾಯ ಮಾಡಲು ಆಗುತ್ತಿಲ್ಲ ಎಂದು ದೂರಿದ್ದಾರೆ.

ಈ ಜಮೀನಿನ ದೇಸಾಯವನ್ನೇ ಅವಲಂಬಿಸಿ ಸಹಕಾರ ಸಂಘಗಳಲ್ಲಿ ಸಾಲ ಪಡೆದು ಕೊಳವೆಬಾವಿ ತೂಡಿಸಿ ರಿಪೇರಿಗೆ ಬಂದಿದೆ ಇವುಗಳನ್ನು ರಿಪೇರಿ ಮಾಡಿಸಲು ಹಾಗೂ ಜನಜಾನುವಾರು ಓಡಾಡಲು ಅಡ್ಡಿಪಡಿಸುತ್ತಿರುವ ಪರಿಣಾಮ ಯಾವುದೇ ಕೃಷಿ ಚಟುವಟಿಕೆ ಮಾಡಲಾಗದೆ , ಪಾಳು ಬಿಡಲಾಗಿದೆ ಎಂದು ಗ್ರಾಮದ ಮುಖಂಡ ಗೋಪಾಲ್ ಮತ್ತು ಜಮೀನು ಮಾಲಿಕರಾದ ಬಂಗಾರ ಬೊಯಿ. ಕೃಷ್ಣ ಮೂವಿ.ಚೆಲುವರಾಜು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಆಗುತ್ತಿರುವ ತೊಂದರೆಯನ್ನು ಬಗೆಹರಿಸಿಕೊಡುವಂತೆ ತಾಲೂಕು ತಾಶಿಲ್ದಾರ್ ರವರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಭೂಮಾಪನ ಹಾಗೂ ಪೋಲಿಸ್ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸ್ಥಳಕ್ಕೆ ಆಗಮಿಸದಂತೆ ಮಹಿಳೆಯರೆಲ್ಲರೂ ಸೇರಿ ಇಲ್ಲಸಲ್ಲದ ಅಪಪ್ರಚಾರದೊಂದಿಗೆ ಧಮಿಕೆ ಹಾಕಿ ಅಡ್ಡಿಪಡಿಸಿದ್ದರಿಂದ ಮತ್ತೊಂದು ದಿನಾಂಕವನ್ನು ನಿಗದಿ ಮಾಡಿಕೊಂಡು ರಸ್ತೆ ಸಮಸ್ಯೆ ಪರಿಹರಿಸುವುದಾಗಿ ತಿಳಿಸಿ ನಿರ್ಗಮಿಸಿದ್ದಾರೆ ಎಂದು ವಿವರಿಸಿದ್ದರು.

ಯಾವುದೇ ಸ್ಮಶಾನ ಇಲ್ಲದೆ ತಮ್ಮ ಜಮೀನಿನಲ್ಲೆ ಅಂತ್ಯಕ್ರಿಯೆ ಮಾಡಬೇಕಾಗಿದೆ ಇಂತಹ ಘಟನೆಯ ಸಂದರ್ಭದಲ್ಲಿ ಸಹ ನಮಗೆ ಅಡ್ಡಿಪಡಿಸಿ ತೊಂದರೆ ನೀಡಿದ ಬಗ್ಗೆ ಅನೇಕ ಬಾರಿ ಪೊಲೀಸರಿಗೆ ದೂರು ಸಲ್ಲಿಸಲಾಗಿದೆ.

ಹೀಗಿರುವಾಗ ಸರ್ಕಾರಿ ಇಲಾಕ ಅಧಿಕಾರಿಗಳಿಗೂ ಸಹ ಇಲ್ಲ ಸಲ್ಲದ ಅಪಪ್ರಚಾರ ಮಾಡಿಕೊಂಡು ನಮಗೆ ಅವರಿಂದಲೂ ಸಹ ಯಾವುದೇ ಕೆಲಸವಾಗದಂತೆ ಅಡ್ಡಿಪಡಿಸಲು ಮುಂದಾಗಿದ್ದಾರೆ ಆದ್ದರಿಂದ ತಾಲೂಕು ತಹಶೀಲ್ದಾರ್ ಕೂಡಲೇ ಮಧ್ಯಪ್ರವೇಶಿಸಿ ಅಡ್ಡಿಪಡಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಮಳೆಗಾಲ ಸಮೀಪಿಸುತ್ತಿರುವುದರಿಂದ ನಮಗಿರುವ ರಸ್ತೆ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಬೇಕೆಂದು ಗ್ರಾಮಸ್ಥರಾದ ಗೋಪಾಲ್. ಬಂಗಾರಬೋವಿ, ಕೃಷ್ಣಭೋವಿ. ಚೆಲುವರಾಜ್. ಮಣಿ. ಪ್ರಕಾಶ್. ಅಜಿತ್ ಮನವಿ ಮಾಡಿಕೊಂಡಿದ್ದಾರೆ.

ಕ್ರಮವಹಿಸಲಾಗುವುದು : ತಾಲೂಕು ತಹಶೀಲ್ದಾರ್ ಮುಂದಿನ ಆದೇಶದಂತೆ ಮತ್ತು ರೈತರಿಗೆ ರಸ್ತೆಯ ಅನಿವಾರ್ಯತೆ ಇರುವುದರಿಂದ ನಿಯತ್ ಮತ ಪ್ರಕಾರ ಕ್ರಮವಹಿಸಲಾಗುವುದು ಎಂದು ಭೂ ಮಾಪನ ಇಲಾಖೆಯ ಸಹಾಯಕ ಅಧಿಕಾರಿ ನಾರಾಯಣಸ್ವಾಮಿ ಸ್ಪಷ್ಟಪಡಿಸಿದ್ದಾರೆ.

### ಬಳ್ಳಾರಿಯಲ್ಲಿ 2,591 ಹೆಣ್ಣುಮಕ್ಕಳಿಗೆ ಹೆಚ್‌ಪಿವಿ ಲಸಿಕೆ

# 16,495 ಗುರಿಯಲ್ಲಿ ಇನ್ನೂ ಹೆಚ್ಚಿನ ಸಾಧನೆ ಅಗತ್ಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯಲ್ಲಿ 14 ವರ್ಷದ ಹೆಣ್ಣುಮಕ್ಕಳಿಗೆ ನೀಡಲಾಗುತ್ತಿರುವ ಹೆಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮ ವೈರಸ್) ಲಸಿಕಾ ಕಾರ್ಯಕ್ರಮದಡಿ ಈವರೆಗೆ 2,591 ಮಂದಿಗೆ ಲಸಿಕೆ ನೀಡಲಾಗಿದೆ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಹನುಮಂತಪ್ಪ ತಿಳಿಸಿದ್ದಾರೆ.

ಜಿಲ್ಲೆಯ ಒಟ್ಟು ಜನಸಂಖ್ಯೆ 16,49,492ರಲ್ಲಿ ಶೇ. 1ರಷ್ಟು ಅಂದರೆ 16,495 ಹೆಣ್ಣುಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಈ ಪೈಕಿ ಈಗಾಗಲೇ 2,591 ಮಂದಿಗೆ ಲಸಿಕೆ ನೀಡಲಾಗಿದ್ದು, ಯಾರಿಗೂ ಯಾವುದೇ ಅಡ್ಡ ಪರಿಣಾಮ ಕಾಣಿಸಿಕೊಂಡಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ತಪ್ಪು ಮಾಹಿತಿಗಳಿಗೆ ಪಾಲಕರು ಕಿವಿಗೊಡಬಾರದು. ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಹೆಚ್‌ಪಿವಿ ಲಸಿಕೆಯನ್ನು ತಪ್ಪದೇ ಹಾಕಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಮಾರ್ಚ್ 11ರಿಂದ ಆರಂಭಗೊಂಡಿರುವ ಈ ಲಸಿಕಾ ಅಭಿಯಾನ 90 ದಿನಗಳವರೆಗೆ ನಡೆಯಲಿದೆ. 14 ವರ್ಷದ ಎಲ್ಲಾ ಹೆಣ್ಣುಮಕ್ಕಳು ಲಸಿಕೆ ಪಡೆಯಲು ಅರ್ಹರಾಗಿದ್ದು, ಲಸಿಕೆ ಪಡೆಯುವಾಗ ಜನನ ಪ್ರಮಾಣಪತ್ರ ಸೇರಿದಂತೆ ಗುರುತಿನ ದಾಖಲೆ ಹಾಗೂ ಪೋಷಕರೊಂದಿಗೆ ಹಾಜರಾಗುವುದು ಕಡ್ಡಾಯವಾಗಿದೆ.

ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಈ ಲಸಿಕೆ ಶೇ. 99ರಷ್ಟು ಪರಿಣಾಮಕಾರಿಯಾಗಿದೆ. 'ಕ್ಯಾನ್ಸರ್ ಮುಕ್ತ ನಾಳೆಗೆ ಇಂದೇ ಲಸಿಕೆ' ಎಂಬ ಘೋಷಣೆಯಡಿ ಕಾರ್ಯಕ್ರಮ ನಡೆಯುತ್ತಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಯಲ್ಲಾ ರಮೇಶ್ ಬಾಬು ಅವರು ಕೂಡ ಪಾಲಕರಿಗೆ ಕರೆ ನೀಡಿದ್ದು, ಹತ್ತಿರದ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಮಕ್ಕಳಿಗೆ ಉಚಿತವಾಗಿ ಲಸಿಕೆ ಹಾಕಿಸಬೇಕು ಎಂದು ತಿಳಿಸಿದ್ದಾರೆ.

ಹ್ಯೂಮನ್ ಪ್ಯಾಪಿಲೋಮ ವೈರಸ್ ಸೋಂಕು ಸಾಮಾನ್ಯವಾಗಿ ಅಶುದ್ಧತೆ, ಜನನಾಂಗ ಸಮಸ್ಯೆಗಳು ಹಾಗೂ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡಬಹುದು. ಈ ಸೋಂಕು ಕ್ರಮೇಣ ಗರ್ಭಕಂಠದ ಕೋಶಗಳಲ್ಲಿ ಬದಲಾವಣೆ ಉಂಟುಮಾಡಿ ಕ್ಯಾನ್ಸರ್‌ಗೆ ಕಾರಣವಾಗುವ ಸಾಧ್ಯತೆ ಇರುವುದರಿಂದ, ಸಮಯಕ್ಕೆ ಸರಿಯಾಗಿ ಲಸಿಕೆ ಪಡೆಯುವುದು ಅತ್ಯಂತ ಅಗತ್ಯ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

## ಅಂಗಡಿ, ಗೋಡನ್ ಸಂಪೂರ್ಣ ಭಸ್ಮ



**ಸುತ್ತೂರು:** ನಂಜನಗೂಡು ತಾಲೂಕು ಎಸ್ ಹೊಸಕೋಟೆ ಗ್ರಾಮದ ಹರ್ಷ ಮೇಘ ಅವರಿಗೆ ಸೇರಿದ ದಿನಸಿ ಮಾರಾಟ ಅಂಗಡಿ ಹಾಗೂ ದಿನಸಿ ಗೋಡನ್ ರಾತ್ರಿ ವಿದ್ಯುತ್ ಸ್ಪರ್ಶ ದಿಂದ ಸಂಪೂರ್ಣವಾಗಿ ಬಸ್ಮವಾಗಿದೆ.

ಅಂಗಡಿ ಮಾಲೀಕ ಹರ್ಷ ಮೇಘ ಅವರು ಎಂದಿನಂತೆ ರಾತ್ರಿ ಅಂಗಡಿ ವ್ಯಾಪಾರ ಮುಗಿಸಿ ಅಂಗಡಿಗೆ ಬೀಗ ಹಾಕಿಕೊಂಡು ಮನೆಗೆ ತೆರಳಿದರು ನೆನ್ನೆ ಮಧ್ಯರಾತ್ರಿಯಲ್ಲಿ ವಿದ್ಯುತ್ ಸ್ಪರ್ಶದಿಂದ ಬೆಂಕಿ ಕಾಣಿಸಿಕೊಂಡು, ಬೆಂಕಿಯಿಂದ ಉರಿಯುತ್ತಿರುವ ಅಂಗಡಿಯನ್ನು ಗಮನಿಸಿದ ಅಕ್ಕಪಕ್ಕದ ಜನರು ಮಾಲೀಕರಿಗೆ ಹಾಗೂ ಅಗ್ನಿಶಾಮದಳಕ್ಕೆ ವಿಷಯ ಮುಟ್ಟಿಸಿದರು. ತಕ್ಷಣ ಸುದ್ದಿ ತಿಳಿದ ಕೂಡಲೇ ಅಗ್ನಿಶಾಮಕ ದಳದ ಸಿಬ್ಬಂದಿ ವರ್ಗದವರು ಕೂಡಲೇ ಸ್ಥಳಕ್ಕಾಗಮಿಸಿ ಹತ್ತಿ ಉರಿಯುತ್ತಿರುವ ಬೆಂಕಿಯನ್ನು ನಿಯಂತ್ರಿಸಿ ಮುಂದೆ ಆಗುವ ಅನಾಹುತವನ್ನು ತಪ್ಪಿಸಿದರು.

ಈ ಅಂಗಡಿಯಲ್ಲಿ ಸುಮಾರು ಎರಡು ಕೋಟಿ ರೂಗಳಿಗೂ ಹೆಚ್ಚು ದವಸ ಧಾನ್ಯ ಅಂಗಡಿ ವಸ್ತುಗಳು ಸಂಪೂರ್ಣವಾಗಿ ನಾಶವಾಗಿದೆ. ಎಂದು ಅಂಗಡಿ ಮಾಲೀಕರಾದ ಹರ್ಷ ಮೇಘ ಅವರು ತಿಳಿಸಿದ್ದಾರೆ.

## ಕೇರಳದಲ್ಲಿ ಕಾಂಗ್ರೆಸ್–ಯುಡಿಎಫ್ ಮೈತ್ರಿಕೂಟ ಅಧಿಕಾರಕ್ಕೆ: ಈಶ್ವರ ಖಂಡ್ರೆ

**ಬೆಂಗಳೂರು:** ಕೇರಳದಲ್ಲಿ ಕಾಂಗ್ರೆಸ್–ಯುಡಿಎಫ್ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಬೆಂಗಳೂರುನಲ್ಲಿಂದು ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿ, ತಾವು ಕೇರಳದ ಅಲ್ಲಪುಳ, ವೈನಾಡು ಮತ್ತು ಸುಲ್ತಾನ ಬತ್ತೇರಿ ಮೊದಲಾದ ಕಡೆ ತಾವು ಚುನಾವಣೆ ಪ್ರಚಾರ ಕೈಗೊಂಡಿದ್ದು, ಜನರು ಕಾಂಗ್ರೆಸ್ –ಯುಡಿಎಫ್ ಮೈತ್ರಿಕೂಟದ ಪರವಿದ್ದಾರೆ. ಇಲ್ಲಿ ಈ ಬಾರಿ ನೂರಕ್ಕೆ ನೂರು ಪ್ರತಿಶತ ನಮ್ಮ ಮೈತ್ರಿಕೂಟವೇ ಅಧಿಕಾರಕ್ಕೆ ಬರಲಿದೆ ಎಂದರು.

ಚುನಾವಣೆ ಬಹಿರಂಗ ಪ್ರಚಾರದಲ್ಲಿ ನಿನ್ನೆ ಕಾಂಗ್ರೆಸ್ ನಾಯಕಿ, ಸಂಸತ್ ಸದಸ್ಯೆ ಪ್ರಿಯಾಂಕಾ ಗಾಂಧೀ ಅವರೊಂದಿಗೆ ಪ್ರಚಾರಸಭೆಯಲ್ಲಿ ಭಾಗಿಯಾಗಿದ್ದು, ಭಾರೀ ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮಕ್ಕೆ ಸಾಕ್ಷಿಯಾಗಿತ್ತು ಎಂದರು.

## ಹಂಪಾಪಟ್ಟಣದಲ್ಲಿ ಅವಿರೋಧ ಆಯ್ಕೆ



**ಹಗರಿಬೊಮ್ಮನಹಳ್ಳಿ:** ಹಂಪಾಪಟ್ಟಣ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ತೆರವಾದ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಶ್ರೀಮತಿ ಪತ್ರಿ ಗೀತಾ ಪತ್ರಿಯಲ್ಲಪ್ಪ ಅಧ್ಯಕ್ಷೆಯಾಗಿ ಹಾಗೂ ತಿಪ್ಪೆ ಗುಂಡಿ ಮಂಜುನಾಥ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷೆ ಉಪ್ಪಾರ್ ಹುಲಿಗೆಮ್ಮ ಮತ್ತು ಉಪಾಧ್ಯಕ್ಷ ಪಿ. ಗಣೇಶ್ ಅವರ ರಾಜೀನಾಮೆಯಿಂದಾಗಿ ಈ ಸ್ಥಾನಗಳು ತೆರವಾಗಿದ್ದವು. 18 ಸದಸ್ಯರನ್ನೊಳಗೊಂಡ ಪಂಚಾಯಿತಿಯಲ್ಲಿ ನಡೆದ ಚುನಾವಣೆಯಲ್ಲಿ ಏಕಮತದಿಂದ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿತು.

ತಹಸಿಲ್ದಾರ್ ಆರ್. ಕವಿತಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿ, ಚುನಾವಣೆಯನ್ನು ಶಾಂತಿಯುತವಾಗಿ ನಡೆಸಿದರು.

ಈ ಸಂದರ್ಭದಲ್ಲಿ ಸದಸ್ಯರಾದ ಬಿ. ನಾಗರಾಜ್, ಎನ್. ನಾಗರಾಜ್, ಸಿ.ಎಲ್. ಕುಮಾರ, ಮಂಜುಳಾ ಅಂಜಿನಪ್ಪ, ಎಚ್. ಹನುಮಕ್ಕ, ಉಪ್ಪಾರ್ ಹುಲಿಗೆಮ್ಮ, ಎಸ್. ಗಾಳಪ್ಪ ಬಿ.ವೆಂಕಟೇಶ್, ನಾಗರತ್ನ ಹಾಗೂ ಬಿ.ರಮೇಶ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬುಡ್ಡಿ ಬಸವರಾಜ್, ಹಿಂದುಳಿದ ಜಾತಿ ಒಕ್ಕೂಟದ ಜಿಲ್ಲಾಧ್ಯಕ್ಷ ಕೆ. ಹುಲುಗಪ್ಪ, ಭಜಂತ್ರಿ ಸೋಮನಾಥ, ಅಶೋಕ, ನಜೀರ್ ಸಾಬ್ . ಕೊಟ್ರಪ್ಪ. ಲಕ್ಷ್ಮಣ. ಮಣಿಗರ್ ನಾಗಭೂಷಣ. ಹಂಪಾಪಟ್ಟಣ ಗ್ರಾಮ ಪಂಚಾಯತಿ ವ್ಯಾಪ್ತಿ ಹಳ್ಳಿಗಳ ನಾಗರಿಕರು.ಸೇರಿದಂತೆ ಹಲವರು ನೂತನ ಪದಾಧಿಕಾರಿಗಳಿಗೆ ಶುಭಾಶಯಗಳನ್ನು ತಿಳಿಸಿದರು.

## ಕಾಂಗ್ರೆಸ್‌ಗೆ ಸೋಲು ಕಟ್ಟಿಟ್ಟ ಬುತ್ತಿ

**ಬೆಂಗಳೂರು:** ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿರುವುದು ಹತಾಶವಾದ ಮಾನಸಿಕ ಅಸ್ವಸ್ಥತೆಯನ್ನು ಪ್ರತಿಬಿಂಬಿಸುವ ರೀತಿ ಇದೆ. ಖರ್ಗೆ ಅವರ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿ ಯೋಗ್ಯ ಚಿಕಿತ್ಸೆ ಕೊಡಿಸಿ. ರಾಜಕೀಯ ನಿವೃತ್ತಿ ಕೊಡಿಸಿ ಎಂದು ಮಾಜಿ ಸಚಿವ ಸಿ ಟಿ ರವಿ ಅವರು ಆಗ್ರಹಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ “ಜಗನ್ನಾಥ ಭವನ”ದಲ್ಲಿ ಅವರು ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಖರ್ಗೆ ಅವರು ಆರು ದಶಕಗಳ ಕಾಲ ರಾಜಕಾರಣದಲ್ಲಿ ಹಲವಾರು ಹುದ್ದೆಗಳನ್ನು ಅನುಭವಿಸಿ ಇಂತಹ ಹೇಳಿಕೆ ನೀಡುವುದು ಒಳ್ಳೆಯದಲ್ಲ. ಹಿರಿತನದ ಹಾಗೂ ಮುತ್ಸದ್ಧಿತನದ ಹೇಳಿಕೆಗಳಾಗಿ ಕಾಣುತ್ತಿಲ್ಲ. ಇದೊಂದು ದ್ವೇಷದ ಹೇಳಿಕೆ ಎಂದರು.

ಗುಜರಾತ್ ಜನ ಅನಕ್ಷರಸ್ಥರಾಗಿರುವುದರಿಂದ ಬಿಜೆಪಿ ಗೆಲ್ಲಿಸಿದರು ಎಂದು ಖರ್ಗೆ ಅವರು ಹೇಳಿದರು. ಹೀಗೆ ಹೇಳಿ ಗುಜರಾತ್ ಜನರನ್ನು ಅವಮಾನಿಸಿದರು. ಕರ್ನಾಟಕದಲ್ಲಿ ನಿರಂತರವಾಗಿ ಲೋಕಸಭೆಗೆ ಬಿಜೆಪಿಯನ್ನು ಜನ ಬೆಂಬಲಿಸುತ್ತಿದ್ದಾರೆ, ಹಾಗಾದರೆ ಕರ್ನಾಟಕದ ಜನರೂ ಅನಕ್ಷರಸ್ಥರೇ ಎಂದು ಪ್ರಶ್ನಿಸಿದರು.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ವಿಷಸರ್ಪಕ್ಕೆ ಹೋಲಿಸಿದ್ದೀರಿ. ಮುಂದೆ ಮುಸ್ಲಿಮರನ್ನು ಪ್ರಚೋದಿಸುವ ಕೆಲಸ ಮಾಡಿದ್ದೀರಿ.

ಈ ಮೂಲಕ ಪ್ರಜಾಪ್ರಭುತ್ವ ವಿರೋಧಿಯಾಗಿ ನೀವು ವರ್ತಿಸಿದ್ದೀರಿ. ಮಹಾತ್ಮ ಗಾಂಧಿ ಅವರ ಅನುಯಾಯಿ ಆದ ನೀವು ಇಂತಹ ಹೇಳಿಕೆ ನೀಡಬಾರದು. ಗಾಂಧಿ ಅವರು ಇದನ್ನೇ ಬೋಧಿಸಿದ್ದೆ. ಅಹಿಂಸಾ ತತ್ವ ಅಂದರೆ ಇದೇನಾ. ಇವತ್ತಿನ ಗಾಂಧಿಗಳು ಇಂತಹ ಹೇಳಿಕೆ ನೀಡಿ ಎಂದು ಹೇಳಿಕೊಡುತ್ತಿದ್ದರಾ ಎಂದರು.

# ಸರ್ಕಾರಿ ಶಾಲಾ ಮಕ್ಕಳ ಶಿಕ್ಷಣಕ್ಕೆ ಕೊಕ್ಕೆ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಹೊಸಳ್ಳಿ ಗ್ರಾಮಸ್ಥರಿಂದ ಆಕ್ರೋಶ ಮಠಕ್ಕೆ ಬಂದ ಶಾಲೆಯ ನೀಡಿದ ಜಮೀನು ಶಾಲೆಗೆ ಬಿಟ್ಟುಬಿಡು ಎಂದ ಮನವಿ ಮಾಡಲು ಬಂದ ಗ್ರಾಮಸ್ಥರು

ಗ್ರಾಮಸ್ಥರು ಬರ್ತಾ ಇದ್ದಂತಯೇ ಮಠದಿಂದ ಹೊರಗಡೆ ಹೋಗಿರೋ ಸ್ವಾಮೀಜಿ ಮಠಕ್ಕೆ ನೀಡಿದ ಇನಾಮು ಜಮೀನಿನಲ್ಲಿ 1980 ರಲ್ಲಿ ಶಾಲೆಗೆ 5 ಎಕರೆ ಬಿಟ್ಟಕೊಟ್ಟಿದ್ದ ಕಲ್ಮಠದ ಮುಖ್ಯಸ್ಥರು ಐದು ಎಕರೆ ಜಮೀನಿನಲ್ಲಿ 3 ಎಕರೆ ಜಮೀನಿನನ್ನು ಮಠದ ಹೆಸರಿಗೆ ಮಾಡಿಕೊಳ್ಳಲು ಮುಂದಾಗಿರೋ ಕಲ್ಮಠದ ಸ್ವಾಮೀಜಿ ಮಠದ ಆಸ್ತಿ ಬಹಳಷ್ಟು ಇದೆ, ಅದನ್ನು ಬಿಟ್ಟು 3 ಎಕರೆ ಜಮೀನಿಗೆ ಕಣ್ಣು ಹಾಕೋದು ಯಾಕೆ ಎಂದು ಆಕ್ರೋಶ ಕಲ್ಮಠದ ಕೊಟ್ಟುರೇಶ್ವರ ಸ್ವಾಮೀಗಳು ತಮ್ಮ ನಡೆಯಿಂದ ಹಿಂದೆ ಸರಿಯಲಿ

ಇಲ್ಲವಾದಲ್ಲಿ ಹೊಸಳ್ಳಿ ಗ್ರಾಮದಿಂದ ಪಾದಯಾತ್ರೆ ಮಡ್ತೀವಿ ಎಂದು 3 4 20026ರಂದು ಶಾಲೆಯ ಆವರಣದಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಏಪ್ರಿಲ್ 6.2026 ರಂದು ಕಲ್ಮಠದ ಸ್ವಾಮಿಗಳಿಗೆ ಸಂದಾನಕ್ಕಾಗಿ ಭೇಟಿ ನೀಡಲು ಎಂದು 150ಕ್ಕೂ ಹೆಚ್ಚು ಜನ ಗ್ರಾಮಸ್ಥರು ಬಂದಿದ್ದೇವು ಆದರೆ ಸಂಧಾನ ನಡೆಯಲಿಲ್ಲ ಕಾರಣ ಸ್ವಾಮೀಜಿಗಳು





ಮಠದಲ್ಲಿ ಇರಲಿಲ್ಲ ಅವರು ಬೇರೆ ಕೆಲಸದ ಮೇಲೆ ಊರಿಗೆ ಹೋಗಿದ್ದಾರೆಂದು ತಿಳಿಸಿದರು.

ನಂತರ ಏಪ್ರಿಲ್,7. 2026 ರಂದು ಹೊಸಳ್ಳಿ ಗ್ರಾಮದ ಶಾಲಾ ಆವರಣದಿಂದ ಗ್ರಾಮಸ್ಥರು ಹಾಗೂ ಮುಖ್ಯಸ್ಥರು ಸೇರಿದಂತೆ ಗಂಗಾವತಿ ತಹಸಿಲ್ದಾರ್ ಕಚೇರಿಗೆ ಮನವಿ ಸಲ್ಲಿಸಲು ಪಾದಯಾತ್ರೆ ಮುಖಾಂತರ ಹೊರಟ ಗ್ರಾಮಸ್ಥರು ಗಂಗಾವತಿ ಶ್ರೀ ಕೃಷ್ಣದೇವರಾಯ ವೃತ್ತದ ಬಳಿ ಪ್ರತಿಭಟನೆ ನಡೆಸಿದರು. ಕಾರಣ ಸ್ಥಳಕ್ಕೆ ಗಂಗಾವತಿ ತಹಸೀಲ್ದಾರರು ಹಾಗೂ ಶೈಕ್ಷಣಾಧಿಕಾರಿಗಳು ಅವರು ಮನವಿಯನ್ನು ಸ್ವೀಕರಿಸಲು ಬಾರದೆ ತಸಿಲ್ದಾರ್ ಟು ಹಾಗೂ ಬಿಇಓ ಕಚೇರಿಯಲ್ಲಿರುವವಗೆ ಮನವಿ ಸಲ್ಲಿಸುವುದಿಲ್ಲ ಅಧಿಕಾರಿಗಳೇ ಬರಬೇಕು ಎಂದು ಮಾನವ ಸರಪಳಿ ಕಟ್ಟಿ ಪ್ರತಿಭಟನೆ ನಡೆಸಲು ಹೊರಟಾಗ ನಗರಾ ಠಾಣೆ ಸಿಪಿಐ ಪ್ರಕಾಶ್ ಎಲ್ ಮಾಳಿ ಅವರು ಸ್ಥಳಕ್ಕೆ ಆಗಮಿಸಿ ಅಧಿಕಾರಿಗಳು ಮೇಲ್ವಿಚಾರಕ್ಕಾಗಿ ಹೋದ ಕಾರಣ ತಾವುಗಳು ಕಚೇರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಬಹುದು ಎಂದು ಗ್ರಾಮಸ್ಥರಿಗೆ ಮನವರಿಕೆ ಮಾಡಿದರು. ಗ್ರಾಮಸ್ಥರಿಂದ ಕ್ಷಣ ಕಾಲ ವಾಗ್ವಾದದ ನಂತರ ಶಿಕ್ಷಣಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ತಹಸಿಲ್ದಾರ್ ಟು ಅವರಿಗೆ ಮನವಿ ಸಲ್ಲಿಸಿದರು

ಈ ಸಂದರ್ಭದಲ್ಲಿ ಮಲ್ಲಪ್ಪ ಪಾರಿವಾಳ, ಪರಸಪ್ಪ, ರಗಡಪ್ಪ ಯಂಕಪ್ಪ, ನಾಗರಾಜ ಬಡಗಿ, ದುರ್ಗಮ್ಮ, ನಿಂಗಪ್ಪ, ಹನುಮೇಶ, ಆಂಜನೇಯ ಕುರುಕುಂದಿ, ಶಿವರಾಜ, ಲಕ್ಷ್ಮಣ, ಮಹೇಶ್ ಡಿ. ವಿನೋದ, ನಾರಾಯಣಪ್ಪ, ಪಂಪನದಣಿ, ಶಂಕರಗೌಡ, ದೇವೇಂದ್ರ, ರಾಜಸಾಬ್, ವಿರುಪಾಕ್ಷಿ, ಸಿದ್ದಪ್ಪ ಪುಟಗಿ, ಮಲ್ಲಪ್ಪ ಪುಟ್ಟಗಿ, ವೀರೇಶ್ ಸೋಮಲಾಪುರ, ಮಲ್ಲಿಕಾರ್ಜುನ ಆಗಿದ್ದಾಳ, ಸೋಮು, ಬಸವ, ಮಲ್ಲೇಶ್, ಗುರಪ್ಪ ಮೆದಿಕಿನಾಳ, ಕೃಷ್ಣ ಯಂಕಪ್ಪ, ಜ್ಞಾನೇಶ್ ಎಸ್ ಎಫ್ ಐ ರಾಜ್ಯದ್ಯಕ್ಷರು ಎಸ್ ಅಪ್ಪ ಸದಸ್ಯರು ಹಾಗೂ ಹೊಸಳ್ಳಿಯ ಸಾರ್ವಜನಿಕರು ಇನ್ನಿತರರು ಇದ್ದರು.

## ತಗಡೂರು ಸುಜಾತಗೆ ಪಿಎಚ್‌ಡಿ ಪದವಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು




ಬೆಂಗಳೂರು ಕೇಂದ್ರದ ಡಾ.ಮನಮೋಹನ್ ಸಿಂಗ್ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರದ ಪ್ರೆಂಚ್ ಭಾಷೆಯ ಉಪನ್ಯಾಸಕಿಯಾದ ತಗಡೂರು ಹಾಲಪ್ಪಗೌಡ ಸುಜಾತ (ಟಿ.ಪಿ.ಸುಜಾತ ಸ್ವಾಮಿ) ಅವರಿಗೆ ಪಿಎಚ್‌ಡಿ ನೀಡಲಾಗಿದೆ.

ಎರಡು ಮಹಾ ಸಾಂಕ್ರಾಮಿಕ ರೋಗಗಳಾದ 1918 ರ ಸ್ಪಾನಿಷ್ ಜ್ವರ ಮತ್ತು 2019 ರ ಕೋವಿಡ್– 19 ರ ಸಂದರ್ಭದಲ್ಲಿ ರಾಷ್ಟ್ರದ ಮುಖ್ಯಸ್ಥರ ಪಾತ್ರದ ಹೋಲಿಕೆ ಕುರಿತು ಡಾ.ಮನಮೋಹನ್ ಸಿಂಗ್ ವಿವಿ ಪ್ರೊ. ಜ್ಯೋತಿ ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದು, ಈ ಪ್ರಬಂಧಕ್ಕೆ ಪಿಎಚ್‌ಡಿ ದೊರೆತಿದೆ.



ತಗಡೂರು ಹಾಲಪ್ಪಗೌಡ ಮತ್ತು ರತ್ನಮ್ಮ ಅವರ ಸುಪುತ್ರಿಯಾಗಿರುವ ಟಿ.ಪಿ.ಸುಜಾತ ಅವರು ಹೈಕೋರ್ಟ್ ವಕೀಲರಾದ ಕುಮಾರಸ್ವಾಮಿ ಸ್ವಾಮಿ ಅವರ ಪತ್ನಿ.

ಪ್ರೆಂಚ್ ಭಾಷೆಯಲ್ಲಿಯೇ ಅಧ್ಯಯನ ಮಾಡಿ ಪ್ರಬಂಧ ಮಂಡನೆ ಮಾಡಿ ಪಿಎಚ್‌ಡಿ ಪಡೆದಿರುವ ಟಿ.ಪಿ.ಸುಜಾತ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ಸ್ಥಳೀಯ ಸಂಘ ಸಂಸ್ಥೆಗಳು, ತಗಡೂರು, ಮಾರನಗೆರೆ ಗ್ರಾಮಸ್ಥರು ಅಭಿನಂದಿಸಿದ್ದಾರೆ.

## ನೀರಿನ ಸಮಸ್ಯೆ: ಸಹಾಯವಾಣಿ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ತಾಲೂಕಿನ ಗ್ರಾಮೀಣ ಭಾಗದಲ್ಲಿ ಬೇಸಿಗೆ ನಿಮಿತ್ತ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ತಾಲೂಕು ಪಂಚಾಯತಿ ಕಚೇರಿಯಲ್ಲಿ ಸಹಾಯವಾಣಿ ಕೇಂದ್ರ ತೆರೆಯಲಾಗಿದ್ದು, ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳುವಂತೆ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮರೆಡ್ಡಿ ಪಾಟೀಲ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ. ತಾಲೂಕಿನ ಗ್ರಾಮೀಣ ಭಾಗದಲ್ಲಿ ಬೇಸಿಗೆ ನಿಮಿತ್ಯ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಲು ಹಾಗೂ ತಕ್ಷಣವೇ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಸಲುವಾಗಿ ತಾಲೂಕು ಪಂಚಾಯತ ಕಾರ್ಯಾಲಯದಲ್ಲಿ ಸಹಾಯವಾಣಿ ಕೇಂದ್ರ ತೆರೆಯಲಾಗಿದ್ದು, ನಿಮ್ಮ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಉಲ್ಬಣಗೊಳ್ಳುವ ಕುಡಿವ ನೀರಿನ ಸಮಸ್ಯೆ ಕುರಿತು ಈ ಕೆಳಕಾಣಿಸಿದ ದೂರವಾಣಿಗೆ ಕರೆ ಮಾಡಿ



ದೂರುಗಳನ್ನು ದಾಖಲಿಸಿ ಕೂಡಲೇ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಕುಡಿವ ನೀರಿನ ಸಮಸ್ಯೆ ಇದ್ದರೆ ಎಸ್ ಡಿಎ ಎಂ.ಸಂತೋಷ ಬೆಳಗ್ಗೆ 09:00 ರಿಂದ 01:30 ರವರೆಗೆ ದೂರವಾಣಿ ಸಂಖ್ಯೆ 6361940327, ಮಾರುತಿ (ಕೈಪಂಪು ಆಪರೇಟರ್) ಮಧ್ಯಾಹ್ನ 02:00 ರಿಂದ ಸಂಜೆ 07:30 ರವರೆಗೆ ದೂರವಾಣಿ ಸಂಖ್ಯೆ : 9036892963 ಗೆ ಸಂಪರ್ಕಿಸಲು ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮರೆಡ್ಡಿ ಪಾಟೀಲ್ ಅವರು ಮಾಧ್ಯಮದ ಮುಖಾಂತರ ತಿಳಿಸಿದ್ದಾರೆ.

## ಕೆಎಲ್‌ಇ ಸಂಸ್ಥೆಯಿಂದ ರುದ್ರಗೌಡರ ಹೆಸರು ಉಳಿಯುವಂತಹ ಕೆಲಸ ಮಾಡಬೇಕು

• ಮಲ್ಲಮ್ಮ ನುಡಿ ವಾರ್ತೆ ಹಾವೇರಿ ( ಶಿಗ್ಗಾವಿ)

ಕೆಎಲ್ ಇ ಸಂಸ್ಥೆಯನ್ನು ಕಟ್ಟಿರುವ ಸಪ್ತರ್ಷಿಗಳಲ್ಲಿ ಅರಟಾಳ ರುದ್ರಗೌಡರು ಒಬ್ಬರು ಅವರಿಗೆ ಸಿಗಬೇಕಾದ ಗೌರವ ಸಿಕ್ಕಿಲ್ಲ. ಕೆಎಲ್ ಇ ಸಂಸ್ಥೆ ವತಿಯಿಂದ ಅವರ ಹೆಸರು ಶಾಸ್ವತ ಆಗುವಂತ ಕೆಲಸವನ್ನು ಬೆಳಗಾವಿ ಮತ್ತು ಅರಟಾಳದಲ್ಲಿ ಮಾಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಇಂದು ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಅರಟಾಳ ಗ್ರಾಮದಲ್ಲಿ ಶ್ರೀ ಮದ್ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಶ್ರೀ ವರವೀರಭದ್ರಸ್ವಾಮಿಯ 32 ನೇಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಅರಟಾಳ ನಮ್ಮ ಪ್ರದೇಶದ ಒಂದು ಭಾಗ ಆಗಿರುವುದು ನಮ್ಮೆಲ್ಲರ ಪುಣ್ಯ. ಯಾಕೆಂದರೆ ಈ ಮಣ್ಣು ಅತ್ಯಂತ ಶ್ರೇಷ್ಠ ಪುರುಷನಿಗೆ ಜನ್ಮ ಕೊಟ್ಟಿದೆ. ಪರಕೀಯರ ಆಡಳಿತದಲ್ಲಿ ಭಾರತ ದೇಶ ಇದ್ದಾಗ



ಯಾರಿಗೂ ಕೂಡ ಕಲ್ಪನೆ ಇಲ್ಲ. ಶಿಕ್ಷಣ ಅದರ ಮಹತ್ವ ಅದನ್ನು ನಮ್ಮಜನಕ್ಕೆ ಕೊಡಬೇಕು. ಪರಕೀಯರು ಬ್ರಿಟಿಷರು ನಮಗೆ ಶಿಕ್ಷಣ ಕೊಡುವುದಿಲ್ಲ. ನಮ್ಮನ್ನು ಎಲ್ಲಿ ಇಟ್ಟಿದ್ದರು ಅಲ್ಲಿಯೆ ಇಡುತ್ತಾರೆ. ಶಿಕ್ಷಣ ಮಾತ್ರ ನಮ್ಮನ್ನು ಉದ್ದಾರ ಮಾಡುತ್ತದೆ ಎಂದು ಸರ್ಕಾರದ ಬೆಂಬಲ ಇಲ್ಲದಾಗ ಅವತ್ತಿನ ದೇಶಗತ್ತಿ ಮನೆತನ, ದೇಸಾಯರು ನಾಡಗೌಡರ ಮನೆತನಗಳು ಬೆಳಗಾವಿ ವಿಭಾಗದಲ್ಲಿದ್ದವು. ಆಗ ಕಲ್ಪಿಸಿಕೊಂಡು ಹಿರಿಯರನ್ನು ದಾನ ಮಾಡುವಂತೆ ಮನವೊಲಿಸಿ ತಾವೆ ಮುಂದೆ ನಿಂತು ದಾನಮಾಡುವಂತೆ ಮಾಡಿ ಕೆಎಲ್ ಇ ಸಂಸ್ಥೆಯನ್ನು ತಾವೆ ಮುಂದೆ ನಿಂತು ಸಹಿ ಮಾಡಿಸಿದ ಸಪ್ತ ಋಷಿಗಳಲ್ಲಿ ಅರಟಾಳ ರುದ್ರಗೌಡರು ಒಬ್ಬರು. ಅರಟಾಳ ರುದ್ರಗೌಡ ಅವರಿಗೆ ಎಷ್ಟು ಗೌರವ ಸಿಗಬೇಕಿತ್ತೊ ಅಷ್ಟು ಸಿಕ್ಕಿಲ್ಲ. ಇದನ್ನು ಬೆಳಗಾವಿ ನಾಯಕರು ಒಪ್ಪಿಕೊಂಡು ಗುರುತು ಮಾಡಬೇಕು. ಇಲ್ಲದಿದ್ದರೆ ಕಾಲವೇ ಗುರುತು ಮಾಡುವ ಕಾಲ ಬರುತ್ತದೆ. ಆಗ ನಿಮ್ಮ ಪಾತ್ರ ಏನೂ ಇರುವುದಿಲ್ಲ. ಬಹಳ ಕಷ್ಟಪಟ್ಟು ಬೈದು ಇವರನ್ನು ಹುಬ್ಬಳ್ಳಿವರೆಗೂ ತಂದಿದ್ದೇವೆ ಎಂದು ಹೇಳಿದರು.

ಕೆಎಲ್ ಇ ಸಂಸ್ಥೆಯ ಹಿಂದಿನ ಮುಖ್ಯಸ್ಥರಾಗಿದ್ದ ಸಿ.ಬಿ ಕೋರೆಯವರು ಅವರ ಹಿಂದಿನವರೊಂದಿಗೆ ಪ್ರಭಾಕರ ಕೋರೆ ಬಂದರು ಅವರೊಂದಿಗೆ ಉತ್ತಮ ಸಂಬಂದ ಇಟ್ಟುಕೊಂಡಿದ್ದೇವೆ. ಈಗ ಅವರ ಮಗನೊಂದಿಗೂ ಉತ್ತಮ ಸಂಬಂಧ ಇಟ್ಟು ಕೊಂಡಿದ್ದೆವೆ. ಸಂಸ್ಥೆ ನಮಗೆ ಬಹಳ ಮುಖ್ಯ. ನಾವೆಲ್ಲ ಇಲ್ಲಿ ನಿಂತು ಮಾತನಾಡುವ ಶಕ್ತಿ ನೀಡಿದ್ದು ಕೆ ಎಲ್ ಇ ಸಂಸ್ಥೆ. ಈ ಸಂಸ್ಥೆಯ ಮೂಲಕ ಜ್ಞಾನ ಹಂಚುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ಹಲವಾರು ಊರುಗಳಲ್ಲಿ ಬಡವರಿಗೆ ಅನುಕೂಲವಾಗಿದೆ. ಇದರ ಮೂಲ ಅಂಕುರ ಹಾಕಿದವರು ಏಳು ಜನ ಸಪ್ತರ್ಷಿಗಳು. ರುದ್ರಗೌಡರ ಪಾತ್ರವನ್ನು ನೆನಪು ಮಾಡಿಕೊಂಡು ಅವರ ಹೆಸರು ಶಾಸ್ವತ ಆಗುವಂತ ಕೆಲಸವನ್ನು ಬೆಳಗಾವಿ ಮತ್ತು ಅರಟಾಳನಲ್ಲಿ ಮಾಡಬೇಕು ಎಂದು ಸಲಹೆ ನೀಡಿದರು.

1847 ರಲ್ಲಿ ಸ್ವಾತಂತ್ರ್ಯ ಚಳವಳಿ ಪ್ರಾರಂಭವಾಗಿದ್ದು ಅರಟಾಳ ರುದ್ರಗೌಡರು ಅವರು ಕ್ರಾಂತಿಯ ಕಾಲದಲ್ಲಿ ಹುಟ್ಟಿದ್ದರು ಅದಕ್ಕೆ ಕ್ರಾಂತಿ ಮಾಡಿದ್ದಾರೆ. ಅವರ ಸವಿ ನೆನಪಿಗಾಗಿ ಇಲ್ಲಿ ಸಂಸ್ಥೆ ಮಾಡಬೇಕು. ಈ ಭಾಗದಲ್ಲಿ ಶಿಕ್ಷಣ ದೊಡ್ಡ ಪ್ರಮಾಣದಲ್ಲಿ ಬೆಳೆಸಬೇಕು. ಇಲ್ಲಿ ಒಂದು ತಂಡ ಮಾಡಿ ಕೆ ಎಲ್ ಇ ಸಂಸ್ಥೆಯಿಂದ ಮಾಡುವ ಶಕ್ತಿ ಇದೆ ಎಂದು ಹೇಳಿದರು.

# ಬನ್ನಿ ಬಸವನ ನಾಡಿಗೆ ಸೂಫಿ ಸಂತರ ಬೀಡಿಗೆ



ಕಾರ್ಯಕ್ರಮ–ಸಂಭ್ರಮ

● ಶಿವಾನಂದ ತಗಡೂರು

ಅಧ್ಯಕ್ಷರು, (ಕೆಯುಡಬ್ಲ್ಯೂಜೆ)

ಶತಮಾನೋತ್ಸವದ ಕಡೆಗೆ ಚಲಿಸುತ್ತಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ನಲವತ್ತನೆ ರಾಜ್ಯಸಮ್ಮೇಳನ ಈ ಬಾರಿ ಮಹಾಮಾನವತಾವಾದಿ, ಕನ್ನಡ ನಾಡಿನ ಸಾಂಸ್ಕೃತಿಕ ನಾಯಕ ಬಸವಣ್ಣನ ಶರಣಭೂಮಿ ಬೀದರ್ ನಲ್ಲಿ ಏಪ್ರಿಲ್ 11 &12 ರಂದು ನಡೆಯುತ್ತಿದೆ.

ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರ ಮೊದಲ ದೇಣಿಗೆಯಿಂದ ಡಿ.ವಿ.ಗುಂಡಪ್ಪ(ಡಿವಿಜಿ) ಅವರಿಂದ ಸ್ಥಾಪಿತಗೊಂಡ ಮೈಸೂರು ಪತ್ರಕರ್ತರ ಸಂಘವು 1956ರಲ್ಲಿ ಏಕೀಕರಣದ ಬಳಿಕ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಎಂದಾಗಿ ಕಾರ್ಯನಿರತ ಪತ್ರಕರ್ತರ ಹಿತರಕ್ಷಣೆ ಮತ್ತು ಅಭ್ಯುದಯಕ್ಕಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ.

ಸಂಘ ನಡೆದು ಬಂದ ಹಾದಿ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಆದರೆ ಕಳೆದ 10 ವರ್ಷಗಳಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ತನ್ನ ಮೂಲ ಉದ್ದೇಶವನ್ನು ಈಡೇರಿಸಿಕೊಳ್ಳುವ ಹೆಜ್ಜೆಗಳಿಗೆ ಶಕ್ತಿ ಸಂಚಯವನ್ನು ಮಾಡಿಕೊಂಡಿದೆ.

ಸಂಘವು ರಚನಾತ್ಮಕ ಮತ್ತು ಕ್ರೀಯಾತ್ಮಕವಾಗಿ ತನ್ನ ಸಂಘಟನಾ ಚಟುವಟಿಕೆಗಳನ್ನು ನಡೆಸುವ ಮೂಲಕ ಪತ್ರಕರ್ತರ ವೃತ್ತಿಪರ ಸಮಸ್ಯೆಗಳು, ಮತ್ತು ಅವರ ಕುಟುಂಬದ ಸಂಕಷ್ಟಗಳಿಗೆ ಆಪತ್ಕಾಲದ ಆಸರೆ ಆಗಿದೆ.

ಮತ್ತು ಕಾರ್ಯನಿರತ ಪತ್ರಕರ್ತರಿಗೆ ಒಂದು ಭರವಸೆಯಂತೆ ಬೆಳೆಯತೊಡಗಿದೆ.

ಪತ್ರಕರ್ತರ ರಾಜ್ಯಮಟ್ಟದ ಸಮ್ಮೇಳನಗಳನ್ನು ನಡೆಸುವ ಮೂಲಕ ಪತ್ರಕರ್ತರ ಸಮಸ್ಯೆಗಳನ್ನು, ವೃತ್ತಿಪರ ಸವಾಲುಗಳನ್ನು ಸರ್ಕಾರದ ಗಮನಕ್ಕೆ ತರುವ ಮೂಲಕ ಪರಿಹಾರ ಕಂಡುಕೊಳ್ಳುವುದಲ್ಲದೆ. ವೃತ್ತಿಕೌಶಲ್ಯದ ಉನ್ನತೀಕರಣಕ್ಕಾಗಿ ಅನೇಕ ಕಾರ್ಯಕ್ರಮ, ಕಾರ್ಯಾಗಾರಗಳನ್ನು ನಡೆಸಿಕೊಂಡು ಬರುತ್ತಿರುವುದಕ್ಕೆ ವರ್ಷ ಪೂರ್ತಿ ಕೆಯುಡಬ್ಲ್ಯೂಜೆ ಅಂಗಳದಲ್ಲಿ ನಡೆಯುವ ಕಾರ್ಯಕ್ರಮಗಳೇ ಸಾಕ್ಷಿ.

ಕೋವಿಡ್ ಕಾಲದಲ್ಲಿ ಪತ್ರಕರ್ತರಿಗೆ ಮತ್ತು ಅವರ ಕುಟುಂಬಕ್ಕೆ ಕೆಯುಡಬ್ಲ್ಯೂಜೆ ದೊಡ್ಡ ಆಸರೆಯಾಗಿ ನಿಂತು ಸಂಘಟನಾತ್ಮಕ ಹೊಣೆಗಾರಿಕೆಯನ್ನು ನಿಭಾಯಿಸಿದ ತೃಪ್ತಿ ನನ್ನದಾಗಿದೆ.

ಬಸ್ ಪಾಸ್, ಪಿಂಚಣಿ, ಪತ್ರಿಕಾ ಭವನಗಳು, ಪತ್ರಕರ್ತರಿಗೆ ನಿವೇಶನ, ಆರೋಗ್ಯವಿಮೆ...ಇಂತಹ ಮೂಲಭೂತ ಸೌಲಭ್ಯಗಳಿಗಾಗಿ ಸರ್ಕಾರದ ಗಮನಸೆಳೆದು ಸಾಧಿಸಿಕೊಳ್ಳುವಲ್ಲಿ ಸಂಘದ ಬದ್ಧತೆ ಪ್ರಶ್ನಾತೀತ.

ಬದ್ಧತೆ ಮತ್ತು ಹೊಣೆಗಾರಿಕೆಯ ಎಚ್ಚರ ವಿದ್ದಾಗ ಮಾತ್ರ ಎಲ್ಲವೂ ಸಾಧ್ಯ ಎಂಬುದಕ್ಕೆ ಕೆಯುಡಬ್ಲ್ಯೂಜೆ ದಿನದಿಂದ ದಿನಕ್ಕೆ ತನ್ನ ಸಂಘಟನಾ




ಶಕ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವುದೇ ನಿದರ್ಶನ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಚುನಾವಣೆ ಪ್ರಕ್ರಿಯೆಯಲ್ಲಿ ತಾಲೂಕು, ಜಿಲ್ಲಾ ಮತ್ತು ರಾಜ್ಯ ಘಟಕಗಳು ಆಯ್ಕೆಯಾಗಿ ಕಾರ್ಯನಿರ್ವಹಣೆ ಮಾಡುತ್ತಿರುವುದೇ ಇದಕ್ಕೆ ಸಾಕ್ಷಿ ಮತ್ತು ಇದು ಸಂಘದ ಆಂತರಿಕ ಶಕ್ತಿ.

ದಶಕಗಳ ಹಿಂದೆ ಪ್ರತಿವರ್ಷ ಒಂದು ದಿನಕ್ಕೆ ಸೀಮಿತವಾಗಿ ನಡೆಯುತ್ತಿದ್ದ ಪತ್ರಕರ್ತರ ರಾಜ್ಯಸಮ್ಮೇಳನಗಳು ಕಳೆದ 10 ವರ್ಷಗಳಿಂದ ಎರಡು ದಿನಗಳ ಕಾಲ ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ನಡೆಯುತ್ತಾ ಬಂದಿವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಯುವ ಸಮ್ಮೇಳನಗಳು ಆಯಾ ಜಿಲ್ಲೆಯ ಪ್ರಗತಿ, ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಸಮ್ಮೇಳನದ್ದಾಗಿರುತ್ತದೆ.

ರಾಜ್ಯದಲ್ಲಿ 31 ಜಿಲ್ಲೆಗಳನ್ನು ಒಳಗೊಂಡು ಸುಮಾರು 10 ಸಾವಿರ ಕಾರ್ಯನಿರತ ಪತ್ರಕರ್ತರ ಸದಸ್ಯತ್ವ ಹೊಂದಿರುವ ಕೆಯುಡಬ್ಲ್ಯೂಜೆ ರಾಜ್ಯದಲ್ಲೆ ಸರ್ಕಾರದ ಮಾನ್ಯತೆ ಪಡೆದ ಏಕೈಕ ಬೃಹತ್ ಪತ್ರಕರ್ತರ ಸಂಘಟನೆಯಾಗಿದೆ.

ಸರ್ಕಾರ ಮತ್ತು ಕಾರ್ಯನಿರತ ಪತ್ರಕರ್ತರ ನಡುವೆ ಸೇತುವೆಯಂತೆ ಕೆಲಸ ಮಾಡುತ್ತಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕೆಲಸ ಮಾಡುತ್ತಿರುವ ಸಂಘ ಯಾವುದೇ ಸಂಘಟನೆಗೆ ಮಾದರಿಯಾಗಲಿದೆ ಎಂಬುದರಲ್ಲಿ ಅತಿಶಯೋಕ್ತಿಯೇನಿಲ್ಲ.

ಇದೀಗ ಬೀದರ್ ನಲ್ಲಿ 40ನೇ ರಾಜ್ಯಸಮ್ಮೇಳನ ಕ್ಕೆ ಕ್ಷಣ ಗಣನೆ ಆರಂಭವಾಗಿದೆ.

ಏ.11ಮತ್ತು 12 ರಂದು ನಡೆಯಲಿರುವ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಸೇರಿದಂತೆ ಅನೇಕ ಗಣ್ಯರು, ಹಿರಿಯ ಪತ್ರಕರ್ತರು ಸಮ್ಮೇಳನದ ಸೊಬಗು ಹೆಚ್ಚಿಸಲಿದ್ದಾರೆ.

ಪತ್ರಿಕೋದ್ಯಮದ, ಪತ್ರಕರ್ತರ ಕುರಿತಾದ ಗುಣಾತ್ಮಕ ವಿಚಾರಸಂಕಿರಣಗಳು, ಸಮಾಲೋಚನೆಗಳು ಸಮ್ಮೇಳನದ ಭಾಗವಾಗಿವೆ. ಕೆಯುಡಬ್ಲ್ಯೂಜೆ ಕೇವಲ ಸಂಘಟನೆಯಲ್ಲ. ಅದೊಂದು ಭರವಸೆ.

ಸುದ್ದಿ ಮನೆಯ ಪತ್ರಕರ್ತರೆಲ್ಲರೂ ಬಸವನ ನಾಡಿಗೆ ಬನ್ನಿ... ಯಶಸ್ಸಿಗೆ ಕೈ ಜೋಡಿಸಿ.


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)